بِسْمِ اللهِ الرَّحْمٰنِ الرَّحِيْمِ　نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ　وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ **ಬದರ್** ವಾರ ಪತ್ರಿಕೆ

WEEKLY **BADAR** QADIAN KANNADA

**ವರ್ಷ:** 04

**ಸಂಚಿಕೆ:** 05–06

**ವಾರ್ಷಿಕ ಶುಲ್ಕ** ರೂ.600/–

**ಸಂಪಾದಕರು:** ತಾರಿಖ್ ಅಹ್ಮದ್ ಇದ್ರೀಸ್.

**02–09 ಜನವರಿ 2023, 02–09 ಸುಲಹ್ 1402 ಹಿಜರಿ ಶಮ್‌ಸಿ, 10–17 ರಜಬ್ 1444 ಹಿಜರಿ ಖಮರಿ.**


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمْرِهٖ وَاَمْرِهٖ

## ಅಲ್ಲಾಹನ ಉಪದೇಶ

اِنَّ شَرَّ الدَّوَآبِّ
عِنْدَ اللّٰهِ الصُّمُّ الْبُكْمُ
الَّذِيْنَ لَا يَعْقِلُوْنَ۝

**(ಆಲ್–ಅನ್‌ಫಾಲ್: 03)**

**ಅಂದರೆ: ನಿಶ್ಚಯವಾಗಿಯೂ ಚಿಂತನ ಮಾಡದ ಕಿವುಡರು ಮತ್ತು ಮೂಕರೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ನಿಕೃಷ್ಟ ಜೀವಿಗಳು.**

# ಹಝ್ರತ್ ಮುಸ್ಲಿಹ್ ಮೌಊದ(ರಝಿಯಲ್ಲಾಹು ಅನ್‌ಹು) ರವರ ಬಗ್ಗೆ ಭವಿಷ್ಯವಾಣಿ

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:**

“**ಬಿಇಲ್ಹಾಮಿಲ್ಲಾಹಿ ತಆಲಾ ವ ಇಲಾಮಿಹೀ ಅಝ್ಝವಜಲ್ಲ** ಕರುಣಾಮಯಿ ಹಾಗೂ ಗೌರವಾನ್ವಿತ ಹಾಗೂ ಶ್ರೇಷ್ಠ ಮತ್ತು ಎಲ್ಲಾ ವಿಷಯಗಳಲ್ಲಿಯು ಬಲಿಷ್ಠನಾದ ಅಲ್ಲಾಹನು (**ಜಲ್ಲ ಶನುಹೂ ವ ಅಝ್ಝ ಇಸ್‌ಮುಹೂ**) ನನಗೆ ತನ್ನ ದಿವ್ಯವಾಣಿಯ ಮೂಲಕ ಸಂಬೋಧಿಸಿ ಹೀಗೆ ನುಡಿದಿದ್ದಾನೆ: ನಾನು ನಿನಗೆ ನೀನು ನನ್ನೊಂದಿಗೆ ಬೇಡಿಕೊಂಡ ಹಾಗೆ ಒಂದು ಕರುಣೆಯ ಕುರುಹು ನೀಡುವೆನು. ನಾನು ನಿನ್ನ ವಿನಮ್ರತೆಯ ಪ್ರಾರ್ಥನೆಗಳನ್ನು (**ತಝರ್ರುಆತ್**) ಆಲಿಸಿ ತನ್ನ ಅನುಗ್ರಹದೊಂದಿಗೆ ಸ್ವೀಕೃತಿ ನೀಡಿದೆನು ಮತ್ತು ನಿನ್ನ ಪ್ರಯಾಣವನ್ನು (ಹೊಶ್ಯಾರ್‌ಪುರ ಮತ್ತು ಲುಧ್ಯಾನದ ಪ್ರಯಾಣ) ನಿನಗಾಗಿ ಶುಭಕರಗೊಳಿಸಿರುವೆನು. ಆದ್ದರಿಂದ ದೈವಶಕ್ತಿಯ ಮತ್ತು ಕರುಣೆ ಹಾಗೂ ಸಾಮಿಪ್ಯದ ಕುರುಹು ನಿನಗೆ ನೀಡಲಾಗುತ್ತಿದೆ. ಅನುಗ್ರಹ ಮತ್ತು ಉಪಕಾರದ ಕುರುಹು ನಿನಗೆ ನೀಡಲಾಗುತ್ತಿದೆ ಮತ್ತು ಗೆಲುವು(ಫತಹ್) ಹಾಗೂ ಸಫಲತೆಯ(ಝಫರ್) ಕೀಲಿಗೈ ನಿನಗೆ ಸಿಗುತ್ತಿದೆ. ಎಲೈ ಮುಝಫ್ಫರ್! ನಿನ್ನ ಮೇಲೆ ಶಾಂತಿ ಇರಲಿ. ಅಲ್ಲಾಹನು ಹೀಗೆ ಹೇಳಲು ಕಾರಣ ಜೀವಿಸಲು ಬಯಸುವರು ಮೃತ್ಯುವಿನ ದವಡೆಯಿಂದ ಮುಕ್ತಿ ಪಡೆಯಲಿ ಮತ್ತು ಗೋರಿಗಳಲ್ಲಿ ಹೂತಲ್ಪಟ್ಟವರು ಹೊರ ಬರಲಿ ಮತ್ತು ಇಸ್ಲಾಮ್ ಧರ್ಮದ ಗೌರವ ಮತ್ತು ಅಲ್ಲಾಹನ ದಿವ್ಯವಾಣಿಗಳ(ಪವಿತ್ರ ಖುರ್‌ಆನ್) ಪದವಿ ಜನರ ಮೇಲೆ ಸ್ಪಷ್ಟವಾಗಲಿ. ಹೀಗೆ ಸತ್ಯವು ತನ್ನ ಎಲ್ಲ ಅನುಗ್ರಹಗಳೊಂದಿಗೆ ಬರುವಂತಾಗಲಿ ಹಾಗೂ ಮಿಥ್ಯವೂ ತನ್ನ ಎಲ್ಲ ಅಪಶಕುನದೊಂದಿಗೆ ಪಲಾಯನ ಮಾಡಲಿ. ಹೀಗೆ ಜನರು ತಿಳಿಯುವರು ನಾನು ಎಲ್ಲಾ ಕಾರ್ಯಗಳಲ್ಲೂ ಸರ್ವ ಸಮರ್ಥನಾಗಿದ್ದೇನೆ (ಖಾದಿರ್). ನಾನು ಬಯಸಿದನ್ನೆಲ್ಲ ಮಾಡಬಲ್ಲೆನು ಮತ್ತು ನಾನು ನಿನ್ನೊಂದಿಗಿದ್ದೇನೆ ಎಂದು ಅವರಿಗೆ ಮನವರಿಕೆ ಆಗಲಿ ಮತ್ತು ಯಾರು ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುವರೊ, ಅಲ್ಲಾಹ್ ಮತ್ತು ಅಲ್ಲಾಹನ ಧರ್ಮ, ಅವನ ಗ್ರಂಥ ಮತ್ತು ಅವನ ಪ್ರವಾದಿ ಆದ ರಸೂಲ್ ಸಲಲ್ಲಾಹು ಅಲೈಹಿವಸಲ್ಲಮರನ್ನು ನಿರಾಕರಿಸುತ್ತಾರೆ ಮತ್ತು ಧಿಕ್ಕರಿಸುವ ದೃಷ್ಟಿಯಿಂದ ನೋಡುವರೋ ಅವರಿಗಾಗಿ ಒಂದು ಸ್ಪಷ್ಟವಾದ ಮಾರ್ಗ ದೊರೆಯುವಂತಾಗಲಿ ಮತ್ತು ಅಪರಾಧಿಗಳ ಮಾರ್ಗವು ಬಹಿರಂಗವಾಗಲಿ.

ಆದ್ದರಿಂದ ನಿನಗೆ ಶುಭವಾರ್ತೆ ಇದೆ. ಓರ್ವ ಗೌರವಾನ್ವಿತ ಹಾಗೂ ಪರಿಶುದ್ಧ ಬಾಲಕ ನಿನಗೆ ನೀಡಲಾಗುವುದು. ಓರ್ವ ಪವಿತ್ರ ದಾಸ(ಬಾಲಕ) ನಿನಗೆ ದಯಪಾಲಿಸಲಾಗುವುದು. ಆ ಬಾಲಕನು ನಿನ್ನ ಅಂಶದಿಂದಲೇ (ಬೀಜ) ನಿನ್ನ ವಂಶ ಹಾಗೂ ಜನಾಂಗದಿಂದಾಗುವುದು. ಸುಂದರವಾದ ಮತ್ತು ಪವಿತ್ರ ಬಾಲಕ ನಿಮ್ಮ ಅತಿಥಿಯಾಗಿ ಬರುವನು ಅವನ ಹೆಸರು **ಅನ್‌ಮವಾಯೀಲ್** ಮತ್ತು ಬಶೀರ್ ಸಹ ಆಗಿರುವುದು. ಅವನಿಗೆ ಪರಿಶುದ್ಧ ಆತ್ಮ ನೀಡಲಾಗಿದೆ ಮತ್ತು ಅವನು ಕೊಳಕಿನಿಂದ ಪರಿಶುದ್ಧನಾಗಿದ್ದಾನೆ. ಅವನು ಅಲ್ಲಾಹನ ಪ್ರಕಾಶ ಆಗಿದ್ದಾನೆ. ಆ ಸೌಭಾಗ್ಯನು ಆಕಾಶದಿಂದ ಬರುವನು. ಅಲ್ಲಾಹನ ಕೃಪೆ ಅವನೊಂದಿಗೆ ಇದೆ ಅದು ಅವನೊಂದಿಗೆ ಬರುವುದು. ಅವನ ವ್ಯಕ್ತಿತ್ವವು ಅದ್ಭುತ, ಶ್ರೇಷ್ಠ ಹಾಗೂ ಸಂಪತ್ಭರಿತವಾಗಿರುತ್ತದೆ. ಅವನು ಲೋಕಕ್ಕೆ ಪಾದರ್ಪಣೆ ಮಾಡುವನು ಮತ್ತು ತನ್ನ ಮಸೀಹನ ಆತ್ಮದೊಂದಿಗೆ ಮತ್ತು **‘ರೂಹುಲ್‌ಹಖ್ಖಿನೊಂದಿಗೆ’** ಜಿಬ್ರೀಲ್‌ನ ಅನುಗ್ರಹಗಳಿಂದ ಹಲವರನ್ನು ರೋಗಗಳಿಂದ ಮುಕ್ತಗೊಳಿಸುವನು. ಅವನು **‘ಕಲಿಮತುಲ್ಲಾಹ್’** ಅಲ್ಲಾಹನ ದಿವ್ಯವಾಣಿ ಆಗಿದ್ದಾನೆ ಏಕೆಂದರೆ ಅಲ್ಲಾಹನ ಕರುಣೆ ಮತ್ತು ಮಹಾಸ್ವಾಭಿಮಾನವು ಅವನನ್ನು **ಕಲಿಮ ತಮ್‌ಜೀದಿನ** ಪವಿತ್ರ ಆತ್ಮದೊಂದಿಗೆ ಕಳುಹಿಸಿದ್ದಾನೆ. ಅವನು ಅತ್ಯಂತ ಬುದ್ಧಿವಂತನೂ ಮತ್ತು ವಿವೇಕಶಾಲಿಯು ಆಗಿರುವನು ಮತ್ತು ಹೃದಯವೈಶಾಲ್ಯ ಹೊಂದಿರುವನು ಹಾಗೂ ಲೌಕಿಕ ಹಾಗೂ ಆಂತರಿಕ ಜ್ಞಾನದಿಂದ ಪರಿಪೂರ್ಣನಾಗಿರುವನು. ಅವನು ಮೂರನ್ನು ನಾಲ್ಕು ಮಾಡುವನಾಗಿರುವನು (ಇದರ ಅರ್ಥ ತಿಳಿದುಬರಲಿಲ್ಲ) ದೊಶುಂಬ(ಸೋಮವಾರ) ಶುಭಕರ ದೋಶುಂಬ(ಸೋಮವಾರ)ವಾಗಿದೆ. ಆತ್ಮೀಯ ಮಗು ಪ್ರೀಯ ಮಗು **ಮಝ್‌ಹರುಲ್ ಅವ್ವಲಿ ವಲ್ ಆಖಿರೆ– ಮಝ್‌ಹರುಲ್ ಹಖ್ಖೆ ವಲ್‌ಅಲಾಎ– ಕಅನ್ನಲ್ಲಹ ನಝುಲ ಮಿನಸ್ಸಮಾಯಿ**. ಅವನ ಆಗಮನವೂ ಬಹಳ ಅನುಗ್ರಹದಾಯಕವಾಗಿದೆ ಮತ್ತು ಅಲ್ಲಾಹನ ಪ್ರತಾಪ ಕಾಣಲು ಕಾರಣವಾಗಿದೆ. ಪ್ರಕಾಶವು ಆಗಮಿಸುತ್ತದೆ ಪ್ರಕಾಶವ ನೋಡಿರಿ. ಅವನನ್ನು ಅಲ್ಲಾಹನು ತನ್ನ ಸಂಪ್ರೀತಿಯ ಸುಗಂಧದಿಂದ  ಸಮ್ಮಿಲಿತಗೊಳಿಸಿದ್ದಾನೆ. ನಾವು ಅವನಲ್ಲಿ ತನ್ನ ಆತ್ಮವನ್ನು ಹಾಕುವೆನು, ಅಲ್ಲಾಹನ ನೆರಳು ಅವನ ಶಿರದ ಮೇಲೆ ಇರುವುದು. ಅವನು ಅತಿ ಅತಿ ವೇಗವಾಗಿ ಬೆಳೆಯುವನು ಮತ್ತು ಕೈದಿಗಳನ್ನು ಬಿಡುಗಡಗೊಳಿಸಲು ಕಾರಣವಾಗುವನು ಮತ್ತು ಭೂಮಿಯ ಅಂಚುಗಳವರೆಗೆ ಖ್ಯಾತಿ ಪಡೆಯುವನು ಹಾಗೂ ಜನಾಂಗಗಳು ಇವನಿಂದ ಅನುಗ್ರಹ ಪಡೆಯುವರು. ಆಗ ತನ್ನ ಆತ್ಮ ಬಿಂದು ಆಕಾಶದೆಡೆ ಎತ್ತಲ್ಪಡುವುದು **ವಕಾನ ಅಮ್‌ರಮ್ಮಖ್ಝೀಯ.**”

**(ಮಜ್‌ಮೂಆ ಇಶ್ತಿಹಾರಾತ್, ಸಂಪುಟ–1, ಪುಟ–100, ಇಶ್ತಿಹಾರ್ 20 ಫೆಬ್ರವರಿ 1886)**

ಕನ್ನಡ ವಾರಪತ್ರಿಕೆ ಬದರ್ "ಮುಸ್ಲೆಹ್ ಮೌಊದ್(ರ) ವಿಶೇಶ ಸಂಚಿಕೆ"

## ವಿಷಯ ಸೂಚಿಕೆ


| | ವಿಷಯ ಸೂಚಿಕೆ | ಪುಟ |
|---|---|---|
| * | ಹಝ್ರತ್ ಮುಸ್ಲಿಹ್ ಮೌಊದ(ರ) ರವರ ಬಗ್ಗೆ ಭವಿಷ್ಯವಾಣಿ | 1 |
| * | ವಿಷಯ ಸೂಚಿಕೆ ಮತ್ತು ಸಂಪಾದಕೀಯ | 2 |
| * | ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್(ಅತಬಿಅ)ರವರ ಖುತ್‌ಬ ಜುಮುಅ | 3 |
| * | ಮುಸ್ಲಿಹ್ ಮೌಊದ್ ಭವಿಷ್ಯವಾಣಿಯ ಹಿನ್ನಲೆ, ಮಹತ್ವ ಮತ್ತು ಉದಾಹರಣೆಗಳು | 10 |
| * | ಶುದ್ಧಿ ಆಂದೋಲನ ಮತ್ತು ಮುಸ್ಲಿಹ್ ಮೌಊದ(ರ) ರ ಭವಿಷ್ಯವಾಣಿಯೊಂದಿಗೆ ಅದರ ವಿಶೇಷ ಸಂಬಂಧ | 14 |
| * | ಅಹ್ಮದಿ ಮುಬಲ್ಲಿಗ್ಗರ ನಿರ್ಗಮನದ ವಿಶ್ವಾಸವರ್ಧಕ ನೋಟ ಮತ್ತು 22 ಅಹ್ಮದಿ ಮುಬಲ್ಲಿಗ್ಗೀನರ ನಿರ್ಗಮನ | 21 |
| * | ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಪವಿತ್ರ ಖುರ್‌ಆನ್‌ನ ಜ್ಞಾನ ಹಾಗೂ ಪವಿತ್ರ ಖುರ್‌ಆನ್‌ನ ಸೇವೆ | 23 |


# ವಸಿಯ್ಯತ್‌ನ ಪ್ರಾಮುಖ್ಯತೆ ಮತ್ತು ಅನುಗ್ರಹಗಳು

## ಸಯ್ಯಿದುನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ಅಧ್ಯಾಪನೆಗಳ ಬೆಳಕಿನಲ್ಲಿ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು 1905 ರಲ್ಲಿ ವಸಿಯ್ಯತ್ ಯೋಜನೆಯ ಬುನಾದಿಯನ್ನು ಇರಿಸಿದರು. ಅವರು ರಿಸಾಲಾ ಅಲ್-ವಸೀಯತ್ ಅನ್ನು ಬರೆದಾಗ ಅಲ್ಲಾಹನ ವಿಶೇಷ ಆಜ್ಞೆಯ ಅನುಸಾರ ಜಮಾಅತ್ತಿನ ಸಜ್ಜನ, ನಿಷ್ಠಾವಂತ ಹಾಗೂ ಮುತ್ತಖಿ (ಭಯ ಭಕ್ತಿವುಳ್ಳ) ದಾಸರ ಕೊನೆಯ ವಿಶ್ರಾಂತಿಗಾಗಿ ಒಂದು ಖಬ್ರಸ್ತಾನ್ ಅನ್ನು ನಿರ್ಮಿಸಿದರು ಮತ್ತು ಅದರಲ್ಲಿ ದಫನ್ ಆಗುವವರಿಗೆ ತನ್ನ ಆದಾಯದ ಹತ್ತನೇ ಒಂದು ಭಾಗವನ್ನು ಇಸ್ಲಾಮ್ ಧರ್ಮದ ಪ್ರಚಾರಕ್ಕಾಗಿ ಜಮಾಅತ್‌ಗೆ ನೀಡಬೇಕೆಂದು ಅವರು ಷರತ್ತು ವಿಧಿಸಿದರು. ಮತ್ತು ಮರಣದ ನಂತರ ತ್ಯಜಿಸಿರುವಂತಹ ತಮ್ಮ ಒಟ್ಟು ಆಸ್ತಿಯಲ್ಲಿ ಹತ್ತನೇ ಒಂದು ಭಾಗವನ್ನು ಅದು ಚಿಕ್ಕದಾಗಿರಲಿ ಅಥವಾ ದೊಡ್ಡದಾಗಿರಲಿ ನೀಡಬೇಕು. ಈ ಖಬ್ರಸ್ತಾನದ ಹೆಸರನ್ನು ಸರ್ವೋನ್ನತನಾದ ಅಲ್ಲಾಹನು 'ಬಹಿಶ್ತಿ ಮಖ್ಬರ" ಎಂದು ತಿಳಿಸಿದನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬೆಹಿಶ್ತಿ ಮಖ್ಬರದಲ್ಲಿ ಸಮಾಧಿ ಮಾಡಲು ಇಟ್ಟಿರುವ ಮೇಲಿನ ಷರತ್ತುಗಳು, ಇಸ್ಲಾಂ ಧರ್ಮಕ್ಕಾಗಿ ಅಂತಹ ದೊಡ್ಡ ತ್ಯಾಗವನ್ನು ಮಾಡುವವನು ಖಂಡಿತವಾಗಿಯೂ ಸ್ವರ್ಗೀಯನಾಗುತ್ತಾನೆ ಎಂದು ನಾವು ನಂಬುತ್ತೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಈ ಖಬ್ರಸ್ತಾನದಲ್ಲಿ ದಫನ್ ಆಗುವವರಿಗೆ ಬಹಳಷ್ಟು ದುಆಗಳನ್ನು ಮಾಡಿದ್ದಾರೆ.

ಅವರು ಹೇಳುತ್ತಾರೆ: ನಾನು ಪ್ರಾರ್ಥಿಸುತ್ತೇನೆ: ದೇವನು ಇದರಲ್ಲಿ ಅನುಗ್ರಹವನ್ನು ಸುರಿಸಲಿ, ಇದನ್ನು ಬಿಹಸ್ತಿ ಮಖ್‌ಬರ್‌ವನ್ನಾಗಿ ಮಾಡಲಿ. ಇದು ಧರ್ಮಕ್ಕೆ ಲೌಕಿಕ ಕಾರ್ಯಗಳಿಂತ ಅಗ್ರಸ್ಥಾನ ನೀಡದವರ, ಲೌಕಿಕ ಅಭಿಲಾಷೆಗಳನ್ನು ತ್ಯಜಿಸಿ ಅಲ್ಲಾಹನಿಗಾಗಿ ಜೀವಿಸಿದವರ, ತಮ್ಮಲ್ಲಿ ಪರಿಶುದ್ಧ ಪರಿವರ್ತನೆ ಮಾಡಿದವರ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಶಿಷ್ಯರ ಹಾಗೆ ವಿಶ್ವಾಸಾರ್ಹತೆ ಹಾಗೂ ಸತ್ಯದ ಮಾದರಿಯನ್ನು ತೋರಿಸಿದವರ, ಎಂದರೆ ಈ ಜಮಾಅತಿನ ಪರಿಶುದ್ಧ ಹೃದಯದ ಜನರ ಅಂತಿಮ ನಿದ್ರೆಯ ತಾಣವಾಗಿ ಅಲ್ಲಾಹನು ಮಾಡಲಿ. **ಆಮೀನ್ ಯಾ ರಬ್ಬಲ್ ಆಲಮೀನ್**.

ನಾನು ಪುನಃ ಪ್ರಾರ್ಥಿಸುತ್ತೇನೆ: ಓ ಸರ್ವಶಕ್ತನಾದ ನನ್ನ ದೇವಾ, ಈ ಜಮೀನಿನಲ್ಲಿ ನನ್ನ ಜಮಾಅತಿಗೆ ಸೇರಿದ ಪರಿಶುದ್ಧ ಹೃದಯರಾದ, ನಿಜವಾಗಿಯೂ ನಿನ್ನವರೇ ಆದ, ಅವರ ಕೆಲಸಗಳಲ್ಲಿ ಲೌಕಿಕವಾದ ಉದ್ದೇಶಗಳು ವಿರಹಿತರಾಗಿರುವ ಜನರ ಗೋರಿಗಳನ್ನು ನೀನು ಮಾಡು. **ಆಮೀನ್ ಯಾ ರಬ್ಬಲ್ ಆಲಮೀನ್**.

ನಾನು ಪುನಃ ಮೂರನೆಯ ಬಾರಿ ಪ್ರಾರ್ಥಿಸುತ್ತೇನೆ: ಓ ಸರ್ವಶಕ್ತನೂ ಕ್ಷಮಿಸುವವನೂ ಪದೇ ಪದೇ ದಯೆದೋರುವವನು ಆಗಿರುವ ನನ್ನ ದೇವಾ, ನೀನು ಕಳುಹಿಸಿದ ನನ್ನ ಮೇಲೆ ಸತ್ಯವಾಗಿಯೂ ನನ್ನ ನಂಬಿಕೆಯನ್ನು ಹೊಂದಿದ ಯಾವುದೇ ಕಾಪಟ್ಯ ಅಥವಾ ಸ್ವಾರ್ಥ ಅಥವಾ ಕೆಟ್ಟ ಸಂಶಯವನ್ನು ಹೊಂದಿರದಂತಹ ಜನರ ಗೋರಿಗಳಿಗೆ ಈ ಖಬರ ಸ್ಥಾನದಲ್ಲಿ ಸ್ಥಳ ನೀಡು. ಅವರು ವಿಶ್ವಾಸ ಮತ್ತು ಅನುಸರಣೆಯ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುವವರೂ ನಿನ್ನ ಮಾರ್ಗದಲ್ಲಿ ಹೃತ್ಪೂರ್ವಕವಾಗಿ ತಮ್ಮ ಜೀವನವನ್ನು ಅರ್ಪಿಸಿದವರೂ ಆಗಿರಲಿ. ಅವರಿಂದ

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

ನೀನು ತೃಪ್ತನಾದವನಾಗಿರಬೇಕು. ಅವರು ನಿನ್ನ ಮೇಲಿನ ಪ್ರೀತಿಯಲ್ಲಿ ತಮ್ಮನ್ನು ಮರೆತು ಬಿಟ್ಟವರಾಗಿರಬೇಕು. ಅವರು ನೀನು ಕಳುಹಿಸಿದವನೊಂದಿಗೆ ಪೂರ್ಣ ನಿಷ್ಠೆಯಿಂದಲು ಪೂರ್ಣ ಗೌರವಭಾವದಿಂದಲೂ ಸತ್ಯ ವಿಶ್ವಾಸಭರಿತರಾಗಿಯೂ ಪ್ರೀತಿ ಮತ್ತು ಆತ್ಮಾರ್ಪಣೆಯ ಸಂಬಂಧ ಹೊಂದಿರುವವರಾಗಲಿ. **ಆಮೀನ್ ಯಾ ರಬ್ಬಲ್ ಆಲಮೀನ್**.

ಪ್ರತಿ ತಿಂಗಳು ಆದಾಯದ ಹತ್ತನೇ ಒಂದು ಭಾಗ, ಮರಣಾನಂತರ ಆಸ್ತಿಯಲ್ಲಿ ಹತ್ತನೇ ಒಂದು ಭಾಗವನ್ನು ನೀಡುವುದು ಇಸ್ಲಾಂ ಧರ್ಮದ ಪ್ರಚಾರಕ್ಕೆ ಮಹಾತ್ಯಾಗವಾಗಿದ್ದರೂ ಜಮಾಅತ್‌ನ ಬಹುಸಂಖ್ಯಾತ ಮಿತ್ರರು ತಾಳ್ಮೆಯಿಂದ ಮತ್ತು ಸಂತೋಷದಿಂದ ಈ ತ್ಯಾಗವನ್ನು ಮಾಡುತ್ತಿದ್ದಾರೆ. ಇನ್ನು ಕೆಲವರು ಇದಕ್ಕಿಂತ ಹೆಚ್ಚಾಗಿ ತ್ಯಾಗವನ್ನು ನೀಡುತ್ತಿದ್ದಾರೆ. ಅಲ್‌ಹಮ್ದುಲಿಲ್ಲಾಹ್. ಆದರೆ ನಾವು ನಮ್ಮ ಪೂರ್ವಜರು ಮಾಡಿರುವಂತಹ ತ್ಯಾಗಗಳನ್ನು ನೋಡಬೇಕು. ರಸೂಲುಲ್ಲಾಹ್(ಸ) ಅವರ ಸಹಾಬರವರಿಗೆ ತಮ್ಮ ಸಂಪತ್ತಿನೊಂದಿಗೆ ಜೀವಗಳ ತ್ಯಾಗಗಳನ್ನು ಸಹ ನೀಡಬೇಕಾಯಿತು. ಅವರೆಲ್ಲರು ಸಂಪತ್ತಿನ ಜೊತೆಗೆ ಅಲ್ಲಾಹನ ಮಾರ್ಗದಲ್ಲಿ ತಮ್ಮ ಪ್ರಾಣವನ್ನೂ ತ್ಯಾಗ ಮಾಡಿ ಇಸ್ಲಾಂ ಧರ್ಮವನ್ನು ಪ್ರಪಂಚದಾದ್ಯಂತ ಹರಡಿದರು. ನಮಗೆ ಕೇವಲ ಸಂಪತ್ತನ್ನು ತ್ಯಾಗ ಮಾಡಬೇಕೆಂದು ಕೇಳಲಾಗುತ್ತಿದೆ, ಜೀವನವನ್ನು ತ್ಯಾಗ ಮಾಡಲು ಕೇಳಿಕೊಳ್ಳುತ್ತಿಲ್ಲ. ಇಂದು ಇಡೀ ಪ್ರಪಂಚದಲ್ಲಿ ಇಸ್ಲಾಂ ಧರ್ಮವನ್ನು ಮೇಲುಗೈ ಸಾಧಿಸುವಂತೆ ಮಾಡುವುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ (ವಾಗ್ದತ್ತ ಮೆಸ್ಸೀಹರ) ಜಮಾಅತ್ತಿನ ಹೊಣೆಗಾರಿಕೆಯಾಗಿದೆ. ಜಗತ್ತಿನಲ್ಲಿ ಇಸ್ಲಾಂ ಧರ್ಮವು ಖಂಡಿತವಾಗಿಯು ಮೇಲುಗೈ ಸಾಧಿಸುತ್ತದೆ ಆದರೆ ನಾವು ಅದಕ್ಕೆ ಎಷ್ಟು ಕೊಡುಗೆ ನೀಡಿದ್ದೇವೆ ಎಂಬುದನ್ನು ಪರಿಶೀಲಿಸಬೇಕು. ಸಂಪತ್ತು ಅಲ್ಲಾಹನ ಆಜ್ಞೆ ಮತ್ತು ಅವನ ಅನುಗ್ರಹದಿಂದ ಬರುತ್ತದೆ. ಆದ್ದರಿಂದ ಅದನ್ನು ಉಳಿಸಿ ಇಟ್ಟುಕೊಳ್ಳುವ ಬದಲು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿ ನಿಮ್ಮ ಭವಿಷ್ಯಕ್ಕಾಗಿ ಮತ್ತು ಪರಲೋಕಕ್ಕಾಗಿ ಏನನ್ನಾದರೂ ಸೃಷ್ಟಿಸುವುದು ಬುದ್ಧಿವಂತಿಕೆಯಾಗಿದೆ.

2004 ರಲ್ಲಿ, ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಅತಬಿಅ) ಅವರು ಖಿಲಾಫತ್ ಜುಬಿಲಿ ವರ್ಷವಾದ 2008 ರ ವೇಳೆಗೆ, ಜಮಾಅತ್‌ನ ಅರ್ಧದಷ್ಟು ಸಂಪಾದಿಸುವ ಜನರನ್ನು ವಸಿಯ್ಯತ್‌ನ ವ್ಯವಸ್ಥೆಗೆ ಸೇರಿಸಬೇಕೆಂದು ತಮ್ಮ ಆಶಯುವನ್ನು ವ್ಯಕ್ತಪಡಿಸಿದರು. ಆದರೆ ದುರದೃಷ್ಟವಶಾತ್ ಹುಝೂರ್ ಅನ್ವರ್(ಅತಬಿಅ) ಅವರ ಈ ಆಸೆಯನ್ನು ಇದುವರೆಗೆ ಈಡೇರಿಸಲು ನಮಗೆ ಸಾಧ್ಯವಾಗಿಲ್ಲ. ನಾವು ಆದಷ್ಟು ಬೇಗ ವಸಿಯ್ಯತ್‌ನ ವ್ಯವಸ್ಥೆಗೆ ಸೇರಲು ಮತ್ತು ನಮ್ಮ ಇಹಲೋಕ ಹಾಗೂ ಪರಲೋಕವನ್ನು ಸುಂದರಗೊಳಿಸಲು ಅಲ್ಲಾಹನು ಅನುಗ್ರಹಿಸಲಿ. ವಸಿಯ್ಯತ್‌ನ ಪ್ರಾಮುಖ್ಯತೆ ಮತ್ತು ಅನುಗ್ರಹದ ಬಗ್ಗೆ ಸೈಯದ್‌ನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಕೆಲವು ಅಧ್ಯಾಪನೆಗಳು ಹೀಗಿವೆ:

### ವಸಿಯ್ಯತ್ ನಂಬಿಕೆಯ ಪರಿಪೂರ್ಣತೆಯ ಮಾನದಂಡವಾಗಿದೆ

ಸಯ್ಯಿದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

ಜಮಾಅತ್‌ನ ಸದಸ್ಯರು ವಸಿಯ್ಯತ್‌ನ ಮಹತ್ವವನ್ನು ತಿಳಿಸಬೇಕು ಮತ್ತು ಇದು ಸರ್ವಶಕ್ತನಾದ ಅಲ್ಲಾಹನು ಸ್ಥಾಪಿಸಿದ ಮಾರ್ಗವಾಗಿದೆ ಎಂದು ಹೇಳಬೇಕು. ಹೀಗೆ ಈವರೆಗೆ ಗಮನ ಹರಿಸದ ಸಾವಿರಾರು ಜನರು ತಮ್ಮ ನಂಬಿಕೆಯನ್ನು ಪರಿಪೂರ್ಣಗೊಳಿಸುತ್ತಾರೆ ಎಂದು ನಾನು ಭಾವಿಸುತ್ತೇನೆ...... ವಸಿಯ್ಯತ್ ವ್ಯವಸ್ಥೆಯು ಸರ್ವಶಕ್ತನಾದ ಅಲ್ಲಾಹನ ಕಡೆಯಿಂದ ಇದೆ ಮತ್ತು ಇದರೊಂದಿಗೆ ಅನೇಕ ಪ್ರತಿಫಲಗಳು ಸಂಬಂಧಿಸಿವೆ. ಇನ್ನೂ ವಸಿಯ್ಯತ್ ಅನ್ನು ಮಾಡದೆ ಇರುವವರು ವಸಿಯ್ಯತ್ ಮಾಡುವ ಮೂಲಕ ತಮ್ಮ ನಂಬಿಕೆಯ ಪರಿಪೂರ್ಣತೆಯನ್ನು ಸಾಬೀತುಪಡಿಸಿರಿ. ಏಕೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಬರೆದಿದ್ದಾರೆ, ಯಾರು ವಸಿಯ್ಯತ್ ಮಾಡುವುದಿಲ್ಲವೊ ನನಗೆ ಆತನ ನಂಬಿಕೆಯಲ್ಲಿ ಅನುಮಾನವಿದೆ. ಆದ್ದರಿಂದ ನಂಬಿಕೆಯ ಪರಿಪೂರ್ಣತೆಗೆ ವಸಿಯ್ಯತ್ ಮಾನದಂಡವಾಗಿದೆ. (ಖುತ್ಬಾತೆ ಮಹ್ಮೂದ್, ಸಂಪುಟ-10, ಪುಟ-166)

### ವಸಿಯ್ಯತ್ ಎಂಬುದು ಧರ್ಮಕ್ಕೆ ಪ್ರಾಪಂಚಿಕ ವ್ಯವಹಾರದ ಮುಂದೆ ಆದ್ಯತೆ ನೀಡುವ ಪ್ರಾಯೋಗಿಕ ಪುರಾವೆಯಾಗಿದೆ

ವಸಿಯ್ಯತ್‌ನ ವಿಚಾರವು ಬಹಳ ಮುಖ್ಯವಾದ ವಿಚಾರವಾಗಿದೆ ಎಂದು ನನ್ನ ಜಮಾಅತ್ತಿನ ಸ್ನೇಹಿತರ ಗಮನಕ್ಕೆ ತಂದಿದ್ದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಅಂತಹ ವೈಶಿಷ್ಟ್ಯವನ್ನು

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಹಮ್‌ಝ ಎಂಬ ಹೆಸರು ಬಹಳ ಇಷ್ಟಕರವಾಗಿತ್ತು.

ಹಝ್ರತ್ ಹಮ್‌ಝಾ(ರ)ರವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ಬಗ್ಗೆ ಹೀಗೆ ಹೇಳಿದ್ದಾರೆ: ಹಝ್ರತ್ ಹಮ್‌ಝ(ರ) ಕೋಪದಿಂದ ಹೇಳಿದ್ದರು: "ಹೌದು ನಾನು ಮುಹಮ್ಮದರ ಧರ್ಮದಲ್ಲಿದ್ದೇನೆ." ಹಝ್ರತ್ ಹಮ್‌ಝ(ರ) ಅನಂತರ ಹೇಳಿದರು: ನಾನು ನನ್ನ ತಂದೆ ತಾತಂದಿರ ಧರ್ಮಕ್ಕೆ ವಿದಾಯ ಹೇಳಿದ ಬಗ್ಗೆ ನನಗೆ ನಾಚಿಕೆಯಾಯಿತು. ರಾತ್ರಿಯಿಡೀ ನನಗೆ ನಿದ್ರೆ ಬರಲಿಲ್ಲ. ನಾನು ಕಅಬದ ಸಮೀಪಕ್ಕೆ ಹೋಗಿ ಅಲ್ಲಾಹನ ಸನ್ನಿಧಿಯಲ್ಲಿ ರೋಧಿಸುತ್ತಾ ಬೇಡಿಕೊಂಡೆನು: "ಹೇ ಅಲ್ಲಾಹ್! ನನ್ನ ಹೃದಯವನ್ನು ಸತ್ಯವನ್ನು ಸ್ವೀಕರಿಸಲು ತೆರೆದುಬಿಡು. ನನ್ನ ಸಂಶಯಗಳನ್ನೂ ಅನುಮಾನಗಳನ್ನೂ ದೂರ ಸರಿಸು."
ನಾನು ನನ್ನ ಪ್ರಾರ್ಥನೆ ಮುಕ್ತಾಯಗೊಳಿಸುವ ಮೊದಲೇ ಅಸತ್ಯಗಳು ನನ್ನಿಂದ ದೂರ ಸರಿದು ಹೋದುವು. ಅನಂತರ ನಾನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ನನ್ನ ಎಲ್ಲ ಸ್ಥಿತಿಗತಿಗಳನ್ನು ವಿವರಿಸಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನ ಬಗ್ಗೆ ನಾನು ಸತ್ಯದಲ್ಲಿ ಸ್ಥಿರಚಿತ್ತನಾಗಲು ಪ್ರಾರ್ಥಿಸಿದರು.

ಹಝ್ರತ್ ಹಮ್‌ಝ(ರ) ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ವಿನಂತಿಸಿದರು – ನನಗೆ ಹಝ್ರತ್ ಜಿಬ್ರೀಲ್(ಅ)ರನ್ನು ಅವರ ವಾಸ್ತವಿಕ ರೂಪದಲ್ಲಿ ತೋರಿಸಿರಿ. ಆಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅವರನ್ನು ನೋಡುವ ಶಕ್ತಿ ನಿಮಗಿಲ್ಲ.

ಖುರೈಶಿ ಸಮೂಹವೇ, ನಾನು ನೋಡಿದ್ದು ಏನೆಂದರೆ, ಮುಸ್ಲಿಮರ ಸೈನ್ಯದಲ್ಲಿ ಒಂಟೆಗಳು ಮನುಷ್ಯರನ್ನಲ್ಲ, ಮೃತ್ಯುವನ್ನು ಎತ್ತಿಕೊಂಡಿವೆ ಎಂದಾಗಿದೆ. ಈ ಮಾತನ್ನು ಕೇಳಿ ಖುರೈಶಿಯರು ಅಸಮಾಧಾನಗೊಂಡರು.

ಮದ್ಯಪಾನ ನಿಷಿದ್ಧಗೊಳಿಸಿದ ನಂತರ ಸಹಾಬರು ಮದ್ಯದ ಸಮೀಪಕ್ಕೆ ಸಹ ಹೋಗಲಿಲ್ಲ. ಸಹಾಬರ ವಿಶ್ವಾಸದ ಉನ್ನತಮಟ್ಟ ಆ ರೀತಿಯಾಗಿತ್ತು.

ನೀವು ಶಿಕ್ಷೆ ನೀಡುವುದಾದರೆ ನಿಮ್ಮ ವಿರುದ್ಧ ಮಾಡಿದ ಅಪರಾಧಕ್ಕೆ ಅನುಸಾರವಾಗಿ ಮಾತ್ರ ಶಿಕ್ಷೆ ನೀಡಿರಿ. ಆದರೆ ನೀವು ಸಹನೆ ದೋರುವುದಾದರೆ ಅದು ಉತ್ತಮವಾಗಿದೆ. (ಪವಿತ್ರ ಖುರ್‌ಆನ್)

ಅನ್‌ಸಾರ್ ಮಹಿಳೆಯರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹಝ್ರತ್ ಹಮ್‌ಝರ ಗುಣಗಾನ ಮಾಡುತ್ತಾ ರೋಧಿಸುತ್ತಾ ಬಂದಾಗ ಪೈಗಂಬರ್(ಸ) ಅವರಿಗೆ ಕೃತಜ್ಞತೆ ಅರ್ಪಿಸಿ ಸತ್ತವರ ಮೇಲೆ ರೋಧಿಸಲು ಅನುಮತಿ ಇಲ್ಲ ಎಂದು ತಡೆದರು.

## ರಸೂಲುಲ್ಲಾಹ್(ಸ) ರವರ ಚಿಕ್ಕಪ್ಪ, ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಹಝ್ರತ್ ಹಮ್‌ಝ(ರ) ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **30–12–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

اِيَّاكَ نَعْبُدُ وَاِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ اَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّآلِّينَ ۔

ಬದರೀ ಸಹಾಬರ ಬಗ್ಗೆ ವಿವರಣೆ ಮುಕ್ತಾಯಗೊಂಡಿದೆ. ಆದರೆ ನಾನು ಮೊದಲು ಪ್ರಸ್ತಾಪಿಸಿದ ಕೆಲವು ಸಹಾಬರ ಬಗ್ಗೆ ಹೆಚ್ಚಿನ ಮಾಹಿತಿಗಳು ಅನಂತರ ಲಭಿಸಿವೆ, ಅವುಗಳ ಬಗ್ಗೆ ಮುಂದೆ ವಿವರಿಸುವೆನು ಅಥವಾ ಪುಸ್ತಕ ರೂಪದಲ್ಲಿ ಪ್ರಕಟಿಸುವಾಗ ಆ ಹೆಚ್ಚಿನ ಮಾಹಿತಿಗಳು ಪ್ರಸ್ತಾಪಿಸಲ್ಪಡುವುವು ಎಂದು ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಜೀವಿತಕ್ಕೆ ಸಂಬಂಧಿಸಿದ ಪ್ರಸ್ತಾಪಗಳನ್ನು ಮುಕ್ತಾಯಗೊಳಿಸಿದಾಗ ನಾನು ಹೇಳಿದ್ದೆ. ಈ ಚರಿತ್ರೆಯನ್ನು ಆಲಿಸಿ ನಮಗೆ ಬಹಳ ಲಾಭವಾಗಿದೆ ಎಂದು ಕೆಲವರು ಬರೆಯುತ್ತಿದ್ದಾರೆ. ಆದುದರಿಂದ ಸಹಾಬರ ಬಗ್ಗೆ ದೊರೆತ ಹೆಚ್ಚಿನ ಮಾಹಿತಿಯನ್ನು ಖುತ್‌ಬಗಳಲ್ಲಿ ವಿವರಿಸುವುದು ಯೋಗ್ಯವೆಂದು ನಾನು ಭಾವಿಸುತ್ತೇನೆ.

ಈ ವಿಷಯಕ್ಕೆ ಸಂಬಂಧಿಸಿ ಪ್ರಥಮವಾಗಿ ಹಝ್ರತ್ ಹಮ್‌ಝ(ರ)ರ ಬಗ್ಗೆ ಇಂದು ಪ್ರಸ್ತಾಪಿಸುವೆನು. ಹಝ್ರತ್ ಹಮ್‌ಝ(ರ) ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಚಿಕ್ಕಪ್ಪರಾಗಿದ್ದರು ಮತ್ತು ಅವರಿಗೆ ಬಹಳ ಪ್ರಿಯರಾಗಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಹಮ್‌ಝ ಎಂಬ ಹೆಸರು ಬಹಳ ಇಷ್ಟಕರವಾಗಿತ್ತು.

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್(ರ) ವರದಿ ಮಾಡುತ್ತಾರೆ: ನಮ್ಮಲ್ಲಿ ಒಬ್ಬರ ಮನೆಯಲ್ಲಿ ಗಂಡು ಮಗು ಹುಟ್ಟಿತು. ಮಗುವಿಗೆ ಏನು ಹೆಸರಿಸಬೇಕು ಎಂದು ಅವರು ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಮಗುವಿಗೆ ಹಂಝ ಬಿನ್ ಅಬ್ದುಲ್‌ಮುತಲ್ಲಿಬ್ ಎಂದು ಹೆಸರಿಸಿರಿ. ಅದು ನನಗೆ ಅತ್ಯಂತ ಪ್ರಿಯವಾದ ಹೆಸರಾಗಿದೆ. ( ವ´ು ು ಸ್ ್ತ ದ್ರಿ ಕ್ ಅಲಸ್ಸಹೀಹೈನ್ ಲಿಲ್‌ಹಾಕಿವ್, ಭಾಗ–5, ಪುಟ–1831, ಕಿತಾಬ್ ಮಾರಿಫತಿಸ್ಸಹಾಬ, ಹದೀಸ್–4888, ನಝಾರಲ್‌ಬಾಝ್ ರಿಯಾಝ್)

ಹಝ್ರತ್ ಹಮ್‌ಝ(ರ) ಅವರ ಹೆಂಡತಿಯರು ಮತ್ತು ಮಕ್ಕಳ ಬಗ್ಗೆ ತಬಖಾತುಲ್ ಕುಬ್ರದಲ್ಲಿ ಹೀಗೆ ಬರೆಯಲಾಗಿದೆ. ಅಂದರೆ ಹಝ್ರತ್ ಹಮ್‌ಝ(ರ) ಅವರು ಔಸ್ ಗೋತ್ರದ ಮಿಲ್ಲಹ್‌ಬನ್ ಮಾಲಿಕ್ ಅವರ ಪುತ್ರಿಯನ್ನು ವಿವಾಹ ಆಗಿದ್ದರು. ಅವರಿಂದ ಯಅ್‌ಲಾ ಮತ್ತು ಅಮೀರ್ ಎಂಬ ಪುತ್ರರು ಜನಿಸಿದರು. ಅವರ ಓರ್ವ ಪುತ್ರ ಯಅ್‌ಲಾನ ಹೆಸರಿನ ಮೇಲೆಯೇ ಹಝ್ರತ್ ಹಮ್‌ಝ(ರ) ರವರ ಒಂದು ಉಪನಾಮ ಅಬುಯಅ್‌ಲಾ ಎಂದು ಪ್ರಸಿದ್ಧರಾಗಿದ್ದರು. ಹಝ್ರತ್ ಹಮ್‌ಝ(ರ) ಅವರ ಎರಡನೇ ಪತ್ನಿ ಹಝ್ರತ್ ಖೌಲಾ ಬಿಂತ್ ಕೈಸ್ ಅನ್ಸಾರಿ(ರ) ಅವರಿಂದ ಹಝ್ರತ್ ಉಮಾರಾ(ರ) ಅವರು ಜನಿಸಿದರು ಅವರು ಜನಿಸಿದ ನಂತರ ಹಝ್ರತ್ ಹಮ್‌ಝ(ರ) ಅವರು ತಮ್ಮ ಉಪನಾಮವನ್ನು ಅಬು ಉಮಾರಾ ಎಂದು ಇರಿಸಿಕೊಂಡಿದ್ದರು. ಹಝ್ರತ್ ಹಮ್‌ಝಾ(ರ) ಅವರು ಹಝ್ರತ್ ಅಸ್ಮಾ ಬಿಂತ್ ಉಮೈಸ್(ರ) ಅವರ ಸಹೋದರಿ ಹಝ್ರತ್ ಸಲ್ಮಾ ಬಿಂತ್ ಉಮೈಸ್(ರ) ಅವರನ್ನು ವಿವಾಹವಾದರು, ಇವರಿಂದ ಹಝ್ರತ್ ಉಮಾಮಾ(ರ) ಎಂಬ ಮಗಳು ಜನಿಸಿದರು. ಹಝ್ರತ್ ಅಲಿ, ಹಝ್ರತ್ ಜಾಫರ್ ಮತ್ತು ಹಝ್ರತ್ ಝಾಯ್ದ್ ಬಿನ್ ಹರಿಸಾ(ರ) ನಡುವೆ ವಿವಾದವಿದ್ದ ಉಮಾಮಾ ಇವರೇ ಆಗಿದ್ದರು. ಇವರಲ್ಲಿ ಪ್ರತಿಯೊಬ್ಬರೂ ಹಝ್ರತ್ ಉಮಾಮಾ(ರ) ಅವರೊಂದಿಗೆ ಇರಬೇಕೆಂದು ಬಯಸಿದ್ದರು, ಆದರೆ ರಸೂಲುಲ್ಲಾಹ್(ಸ) ಅವರು ಹಝ್ರತ್ ಜಾಫರ್ ಬಿನ್ ಅಬಿ ತಾಲಿಬ್(ರ) ಅವರ ಪರವಾಗಿ ನಿರ್ಧರಿಸಿದರು ಏಕೆಂದರೆ ಹಝ್ರತ್ ಉಮಾಮಾ(ರ) ಅವರ ಚಿಕ್ಕಮ್ಮ ಹಝ್ರತ್ ಅಸ್ಮಾ ಬಿಂತ್ ಉಮೈಸ್(ರ) ಅವರು ಜಾಫರ್ ಅವರನ್ನು ವಿವಾಹವಾಗಿದ್ದರು. ಹಝ್ರತ್ ಹಮ್‌ಝ(ಅ) ಅವರ ಪುತ್ರ ಯಾಅ್‌ಲಾ(ರ) ಅವರ ಮಕ್ಕಳಲ್ಲಿ ಉಮಾರಾ, ಫಝಲ್, ಝುಬೈರ್, ಅಖೀಲ್ ಮತ್ತು ಮುಹಮ್ಮದ್ ಇದ್ದರು. ಆದರೆ ಅವರೆಲ್ಲರೂ

ನಿಧನ ಹೊಂದಿದ್ದರು. ಮತ್ತು ಹಝ್ರತ್ ಹಮ್ಝಾ(ರ) ಅವರ ಮಕ್ಕಳು ಜೀವಂತವಾಗಿ ಉಳಿಯಲಿಲ್ಲ. (ಅತ್ತಬಖಾತುಲ್ ಕುಬ್ರ, ಭಾಗ-2, ಪುಟ-46, ದಾರುಲ್ ಫಿಕರ್ ಬೈರೂತ್)

ಹಝ್ರತ್ ಅಲಿ(ರ), ಹಝ್ರತ್ ಜಾಫರ್(ರ) ಮತ್ತು ಹಝ್ರತ್ ಝೈದ್ ಬಿನ್ ಹರಿಸಾ(ರ) ಅವರ ನಡುವಿನ ವಿವಾದವು ಹಝ್ರತ್ ಹಮ್ಝಾ(ರ) ಅವರ ಪುತ್ರಿ ಉಮಾಮಾ(ರ) ಅವರ ಬಗ್ಗೆ ಈಗ ಉಲ್ಲೇಖಿಸಲ್ಪಟ್ಟಿದೆ. ಇದನ್ನು ಬುಖಾರಿಯಲ್ಲಿ ಈ ಕೆಳಗಿನಂತೆ ವಿವರಿಸಲಾಗಿದೆ: ಹಝ್ರತ್ ಬಾರಾ ಬಿನ್ ಅಝಿಬ್(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ಅವರು ದುಲ್-ಖಅದಃದಲ್ಲಿ ಉಮ್ರಾ ಮಾಡಲು ಯೋಜಿಸಿದಾಗ, ಮಕ್ಕಾದ ಜನರು ಅವರನ್ನು ಮಕ್ಕಾ ಪ್ರವೇಶಿಸಲು ನಿರಾಕರಿಸಿದರು ಎಂದು ಅವರು ಹೇಳಿದರು. ಅಂತಿಮವಾಗಿ, ಅವರು ಉಮ್ರಾ ಮುಂದಿನ ವರ್ಷದಲ್ಲಿ ಮಕ್ಕಾಕ್ಕೆ ಬಂದು ಮೂರು ದಿನಗಳ ಕಾಲ ಇರಬೇಕೆಂಬ ಷರತ್ತಿನ ಮೇಲೆ ಅವರೊಂದಿಗೆ ಸಂಧಾನ ಮಾಡಿದರು. ಅವರು ಶಾಂತಿ ಒಪ್ಪಂದವನ್ನು ಬರೆಯಲು ಪ್ರಾರಂಭಿಸಿದಾಗ, ಇದು ಅಲ್ಲಾಹನ ಸಂದೇಶವಾಹಕ ಮುಹಮ್ಮದ್(ಸ) ಅವರ ಮೇಲೆ ಇರುವ ಷರತ್ತುಗಳು ಎಂದು ಬರೆಯಲ್ಪಟ್ಟಂತೆ, ಮಕ್ಕಾದ ಜನರು ಅದನ್ನು ನಾವು ಒಪ್ಪುವುದಿಲ್ಲ ಎಂದು ಹೇಳಿದರು. ನೀವು ಅಲ್ಲಾಹನ ಸಂದೇಶವಾಹಕರು ಎಂದು ನಮಗೆ ತಿಳಿದಿದ್ದರೆ, ನಾವು ನಿಮ್ಮನ್ನು ಎಂದಿಗೂ ತಡೆಯುತ್ತಿರಲಿಲ್ಲ. ಆದರೆ ಇಲ್ಲಿ ನೀವು ಮುಹಮ್ಮದ್ ಬಿನ್ ಅಬ್ದುಲ್ಲಾ ಆಗಿದ್ದೀರಿ. ಅದಕ್ಕೆ ರಸೂಲುಲ್ಲಾಹ್(ಸ) ಅವರು ಹೇಳಿದರು: ನಾನು ಅಲ್ಲಾಹನ ಸಂದೇಶವಾಹಕ ಮತ್ತು ಮುಹಮ್ಮದ್ ಬಿನ್ ಅಬ್ದುಲ್ಲಾ ಆಗಿದ್ದೇನೆ. ಅವರು(ಸ) ಹಝ್ರತ್ ಅಲಿ(ರ) ಅವರಿಗೆ ಹೇಳಿದರು: "ಅಲ್ಲಾಹನ ಸಂದೇಶವಾಹಕರು ಎಂದು ಬರೆದಿರುವುದನ್ನು ಅಳಿಸಿರಿ." ಅದಕ್ಕೆ ಅಲಿ(ರ) ಹೇಳಿದರು: ಎಂದಿಗೂ ಅಳಿಸಬೇಡಿ. ಅಲ್ಲಾಹನ ಆಣೆ! ನಾನು ನಿಮ್ಮ ಬಿರುದನ್ನು ಎಂದಿಗೂ ಅಳಿಸುವುದಿಲ್ಲ. ರಸೂಲುಲ್ಲಾಹ್(ಸ) ಅವರು ಆ ಬರೆದ ಕಾಗದವನ್ನು ತೆಗೆದುಕೊಂಡರು ಮತ್ತು ಅವರಿಗೆ(ಸ) ಚೆನ್ನಾಗಿ ಬರೆಯಲು ತಿಳಿದಿರಲಿಲ್ಲ. ಅವರು ಈ ಕೆಳಗಿನಂತೆ ಬರೆದರು: ಮುಹಮ್ಮದ್ ಬಿನ್ ಅಬ್ದುಲ್ಲಾ ಅವರು ಹಾಕಿರುವ ಷರತ್ತುಗಳು ಇವು. ಅವರು ಒರೆಯಲ್ಲಿರಿಸಿದ ಕತ್ತಿಗಳನ್ನು ಹೊರತುಪಡಿಸಿ ಯಾವುದೇ ಆಯುಧಗಳನ್ನು ಮಕ್ಕಾಕ್ಕೆ ತರುವುದಿಲ್ಲ ಮತ್ತು ಅವರೊಂದಿಗೆ ಯಾರಾದರು ಮಕ್ಕದ ಜನರು ಹೋಗಲು ಬಯಸಿದರೂ ಅವರು ತಮ್ಮೊಂದಿಗೆ ಯಾವುದೇ ಮಕ್ಕದ ಜನರನ್ನು ಕರೆದುಕೊಂಡು ಹೋಗುವಂತಿಲ್ಲ ಮತ್ತು ತಮ್ಮ ಸಂಗಡಿಗರಲ್ಲಿ ಯಾರಾದರು ಮಕ್ಕದಲ್ಲಿ ಉಳಿಯಲು ಬಯಸಿದರೆ ಅವರು ಯಾರನ್ನು ತಡೆಯುವಂತಿಲ್ಲ. ಸರಿ, ಒಪ್ಪಂದದ ಪ್ರಕಾರ, ರಸೂಲುಲ್ಲಾಹ್(ಸ) ಅವರು ಮುಂದಿನ ವರ್ಷ ಮಕ್ಕಾವನ್ನು ಪ್ರವೇಶಿಸಿದಾಗ ಮತ್ತು ಅವಧಿ ಮುಗಿದ ನಂತರ, ಖುರೈಶಿಗಳು ಹಝ್ರತ್ ಅಲಿ(ರ) ಅವರ ಬಳಿಗೆ ಬಂದು ಹೇಳಿದರು, ನಿಮ್ಮ ಸಹಚರರಾದ ಮುಹಮ್ಮದ್(ಸ) ಅವರಿಗೆ ನಿಗದಿತ ಅವಧಿ ಮುಗಿದ ಕಾರಣ ಈಗಲೇ ಹೊರಡಲು ಹೇಳಿ. ಆದ್ದರಿಂದ ರಸೂಲುಲ್ಲಾಹ್(ಸ) ಅವರು ಅಲ್ಲಿಂದ ನಿರ್ಗಮಿಸಿದರು. ಹಝ್ರತ್ ಹಮ್ಝಾ(ರ) ಅವರ ಮಗಳು ಅವರ ಹಿಂದೆ ಬಂದು ಅವರನ್ನು ಓ ಚಿಕ್ಕಪ್ಪ! ಓ ಚಿಕ್ಕಪ್ಪ! ಎಂದು ಕರೆದರು ಆಗ ಹಝ್ರತ್ ಅಲಿ(ರ) ಹೋಗಿ ಅವರನ್ನು ಕರೆದೊಯ್ದು, ಅವರ ಕೈ ಹಿಡಿದು ಫಾತಿಮಾ(ರ) ಅವರಿಗೆ ತನ್ನ ಚಿಕ್ಕಪ್ಪನ ಮಗಳನ್ನು ಕರೆದುಕೊಂಡು ಹೋಗುವಂತೆ ಹೇಳಿದರು. ಅವರು ಅವರನ್ನು ಸವಾರಿ ಮಾಡಿಸಿಕೊಂಡರು. ಈಗ ಅಲಿ, ಝೈದ್ ಮತ್ತು ಜಾಫರ್ ಹಮ್ಝಾ(ರ) ಅವರ ಮಗಳ ಬಗ್ಗೆ ಜಗಳವಾಡಲು ಪ್ರಾರಂಭಿಸಿದರು. "ನಾನು ಅವಳನ್ನು ಕರೆದುಕೊಂಡು ಹೋಗಿದ್ದೇನೆ ಏಕೆಂದರೆ ಅವಳು ನನ್ನ ಚಿಕ್ಕಪ್ಪನ ಮಗಳು" ಎಂದು ಅಲಿ ಹೇಳಿದರು ಮತ್ತು "ಅವಳು ನನ್ನ ಚಿಕ್ಕಪ್ಪನ ಮಗಳು ಆದ್ದರಿಂದ ಮತ್ತು ಅವಳ ಚಿಕ್ಕಮ್ಮ(ತಾಯಿಯ ಸಹೋದರಿ) ನನ್ನ ಪತ್ನಿಯಾಗಿದ್ದಾರೆ" ಎಂದು ಜಾಫರ್ ಹೇಳಿದರು ಮತ್ತು "ಅವರು ನನ್ನ ಸಹೋದರನ ಮಗಳು" ಎಂದು ಝೈದ್ ಹೇಳಿದರು. ನಂತರ ರಸೂಲುಲ್ಲಾಹ್(ಸ) ಅವರನ್ನು ಅವರ ಚಿಕ್ಕಮ್ಮನೊಂದಿಗೆ(ತಾಯಿಯ ಸಹೋದರಿ) ಇರಲಿ ಎಂದು ನಿರ್ಧರಿಸಿ ಹೇಳಿದರು: ಚಿಕ್ಕಮ್ಮ ತಾಯಿಗೆ ಸಮಾನರು ಮತ್ತು ಅಲಿ(ರ) ಅವರಿಗೆ ನೀವು ನನ್ನವನು ಮತ್ತು ನಾನು ನಿಮ್ಮವನು ಎಂದು ಹೇಳಿದರು ಮತ್ತು ಜಾಫರ್(ರ) ಅವರಿಗೆ ನೀವು ನೋಟ ಮತ್ತು ನಡವಳಿಕೆಯಲ್ಲಿ ನನ್ನನ್ನು ಹೋಲುತ್ತೀರಿ ಎಂದು ಹೇಳಿದರು ಮತ್ತು ಝೈದ್(ರ) ಅವರಿಗೆ ನೀವು ನಮ್ಮ ಸಹೋದರ ಮತ್ತು ಸ್ನೇಹಿತ ಎಂದು ಹೇಳಿದರು. ಅಲಿ(ರ) ಹೇಳಿದರು: ನೀವು ಹಮ್ಝಾ(ರ) ಅವರ ಮಗಳನ್ನು ಮದುವೆಯಾಗುವುದಿಲ್ಲವೇ? ಅದಕ್ಕೆ ರಸೂಲುಲ್ಲಾಹ್(ಸ) ಹೇಳಿದರು: ಆಕೆ ನನ್ನ ಅಣ್ಣನ ಮಗಳು ಎಂದು ಹೇಳಿದರು. ನಾನು ಆಕೆಯ ಚಿಕ್ಕಪ್ಪ. (ಸಹೀಹ್ ಅಲ್-ಬುಖಾರಿ, ಕಿತಾಬ್ ಅಲ್-ಮುಘಾಜಿ, ಅಧ್ಯಾಯ ಉಮ್ರಾ ಅಲ್-ಕದಾ, ಹದೀಸ್ ಸಂಖ್ಯೆ-4251)

ಈ ಘಟನೆಗಳಲ್ಲಿ ಈ ಸಣ್ಣ ಸಮಸ್ಯೆಗಳನ್ನು ಸಹ ಪರಿಹರಿಸಲಾಗುತ್ತದೆ. ಕೆಲವೊಮ್ಮೆ ಖುರಾನಲ್ಲಿ ಮೊಕದ್ದಮೆಗಳು ಬರುತ್ತವೆ ಅಂದರೆ ಚಿಕ್ಕಮ್ಮ (ತಾಯಿಯ ಸಹೋದರಿ)ಯ ಬಳಿ ಏಕೆ ಇರಬೇಕು? ಅಜ್ಜಿಯ(ತಾಯಿಯ ತಾಯಿ) ಬಳಿಗೆ ಏಕೆ ಹೋಗಬೇಕು? ಹೀಗೆ ಇಲ್ಲಿ ಈ ಸಮಸ್ಯೆಗಳ ಬಗ್ಗೆ ನಿರ್ಧರಿಸಲಾಗಿದೆ.

ಹಝ್ರತ್ ಹಮ್ಝಾ(ರ) ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದಕ್ಕೆ ಸಂಬಂಧಿಸಿದ ಬಗ್ಗೆ ರೌಝುಲ್ ಉನುಫ಼್‌ನ ವರದಿಯಲ್ಲಿ ಹೀಗೆ ಹೇಳಲಾಗಿದೆ: ಇಬ್ನೆ ಇಸ್ಹಾಖ್ ಅವರನ್ನು ಹೊರತುಪಡಿಸಿ ಕೆಲವರು ಹಝ್ರತ್ ಹಮ್ಝಾ(ರ)ರವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ಬಗ್ಗೆ ಹೀಗೆ ಹೇಳಿದ್ದಾರೆ: ಹಝ್ರತ್ ಹಮ್ಝಾ(ರ) ಕೋಪದಿಂದ ಹೇಳಿದ್ದರು: "ಹೌದು ನಾನು ಮುಹಮ್ಮದರ ಧರ್ಮದಲ್ಲಿದ್ದೇನೆ." ಹಝ್ರತ್ ಹಮ್ಝಾ(ರ) ಅನಂತರ ಹೇಳಿದರು: ನಾನು ನನ್ನ ತಂದೆ ತಾತಂದಿರ ಧರ್ಮಕ್ಕೆ ವಿದಾಯ ಹೇಳಿದ ಬಗ್ಗೆ ನನಗೆ ನಾಚಿಕೆಯಾಯಿತು. ರಾತ್ರಿಯಿಡೀ ನನಗೆ ನಿದ್ರೆ ಬರಲಿಲ್ಲ. ನಾನು ಕಅಬದ ಸಮೀಪಕ್ಕೆ ಹೋಗಿ ಅಲ್ಲಾಹನ ಸನ್ನಿಧಿಯಲ್ಲಿ ರೋಧಿಸುತ್ತಾ ಬೇಡಿಕೊಂಡೆನು: "ಹೇ ಅಲ್ಲಾಹ್! ನನ್ನ ಹೃದಯವನ್ನು ಸತ್ಯವನ್ನು ಸ್ವೀಕರಿಸಲು ತೆರೆದುಬಿಡು. ನನ್ನ ಸಂಶಯಗಳನ್ನೂ ಅನುಮಾನಗಳನ್ನೂ ದೂರ ಸರಿಸು."

ನಾನು ನನ್ನ ಪ್ರಾರ್ಥನೆ ಮುಕ್ತಾಯಗೊಳಿಸುವ ಮೊದಲೇ ಅಸತ್ಯಗಳು ನನ್ನಿಂದ ದೂರ ಸರಿದು ಹೋದುವು. ಅನಂತರ ನಾನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ನನ್ನ ಎಲ್ಲ ಸ್ಥಿತಿಗತಿಗಳನ್ನು ವಿವರಿಸಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನ ಬಗ್ಗೆ ನಾನು ಸತ್ಯದಲ್ಲಿ ಸ್ಥಿರಚಿತ್ತನಾಗಲು ಪ್ರಾರ್ಥಿಸಿದರು. (ರೌಝುಲ್ ಉನುಫ್, ಭಾಗ-2, ಪುಟ-44-45, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಉಮ್ಮಾರ್ ಬಿನ್ ಅಬುಉಮ್ಮಾರ್(ರ) ಅವರು ವರದಿ ಮಾಡುತ್ತಾರೆ ಹಝ್ರತ್ ಹಮ್ಝಾ(ರ) ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ವಿನಂತಿಸಿದರು - ನನಗೆ ಹಝ್ರತ್ ಜಿಬ್ರೀಲ್(ಅ)ರನ್ನು ಅವರ ವಾಸ್ತವಿಕ ರೂಪದಲ್ಲಿ ತೋರಿಸಿರಿ. ಆಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅವರನ್ನು ನೋಡುವ ಶಕ್ತಿ ನಿಮಗಿಲ್ಲ. ಹಝ್ರತ್ ಹಮ್ಝಾ(ರ) ಒತ್ತಾಯಿಸಿದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನೀವು ನಿಮ್ಮ ಸ್ಥಳದಲ್ಲಿಯೇ ಕುಳಿತುಕೊಳ್ಳಿರಿ. ವರದಿಗಾರ ಹೇಳುತ್ತಾರೆ: ಬಹುದೇವಾರಾಧಕರು ಕಅಬದ ಪ್ರದಕ್ಷಿಣೆ ಮಾಡುವುದನ್ನು ಪ್ರಾರಂಭಿಸುವ ಮೊದಲು ತಮ್ಮ ಬಟ್ಟೆಗಳನ್ನು ಇರಿಸುತ್ತಿದ್ದ ಮರದ ಹಲಗೆಯ ಮೇಲೆ ಹಝ್ರತ್ ಜಿಬ್ರೀಲ್(ಅ) ಇಳಿದು ಬಂದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹಝ್ರತ್ ಹಮ್ಝಾರೊಂದಿಗೆ ಹೇಳಿದರು: ನಿಮ್ಮ ಕಣ್ಣೆತ್ತಿ ನೋಡಿರಿ.

ಆಗ ಹಝ್ರತ್ ಜಿಬ್ರೀಲ್(ಅ)ರ ಎರಡು ಪಾದಗಳು ಅಮೂಲ್ಯ ಹಸಿರು ಬಣ್ಣದ ವಜ್ರವಾದ ಝುಬರ್‌ಜದ್ ಹಾಗೆ ಇರುವುದಾಗಿ ಹಮ್ಝಾ(ರ) ಕಂಡರು. ಆಗ ಹಝ್ರತ್ ಹಮ್ಝಾ(ರ) ಪ್ರಜ್ಞಾಶೂನ್ಯರಾಗಿ ಬಿದ್ದುಬಿಟ್ಟರು.

ಝುಬರ್‌ಜದ್ ಒಂದು ಅಮೂಲ್ಯವಾದ ಕಲ್ಲಾಗಿದೆ. ಅದು ಝುಮುರ್ರದ್‌ನಿಂದ ಹೋಲುತ್ತದೆ ಎಂದು ಹೇಳಲಾಗುತ್ತದೆ.
(ಅತ್ತಬಖಾತುಲ್ ಕುಬ್ರ, ಭಾಗ-3, ಪುಟ-8, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಿಜರಿ ವರ್ಷ ಎರಡು ಸಫರ್ ತಿಂಗಳಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವದ್ದಾನ್ ಯುದ್ಧಕ್ಕೋಸ್ಕರ ಮುಹಾಜಿರ್‌ಗಳೊಂದಿಗೆ ಹೊರಟಿದರು. ಈ ಯುದ್ಧದಲ್ಲಿ ರಸೂಲುಲ್ಲಾಹ್(ಸ) ಅವರ ಇಸ್ಲಾಮಿನ ಪತಾಕೆ ಹಝ್ರತ್ ಹಮ್ಝಾರ ಕೈಯಲ್ಲಿತ್ತು. ಅದು ಬಿಳಿ ಬಣ್ಣದ್ದಾಗಿತ್ತು. ಆ ಸಂದರ್ಭದಲ್ಲಿ ರಸೂಲುಲ್ಲಾಹ್(ಸ)ರವರು ಅವರ ಚಿಕ್ಕಪ್ಪರಾದ ಅಬುಸಅ್‌ದ್(ರ) ಅವರನ್ನು ಒಂದು ವರದಿಯ ಪ್ರಕಾರ ಹಝ್ರತ್ ಸಅ್‌ದ್ ಬಿನ್ ಉಬಾದ(ರ) ರವರನ್ನು ಮದೀನದ ಅಮೀರರನ್ನಾಗಿ ನೇಮಿಸಿದ್ದರು. ಈ ಪ್ರವಾಸದಲ್ಲಿ ಯುದ್ಧ ಮಾಡುವ ಅವಶ್ಯಕತೆ ಬೀಳಲಿಲ್ಲ ಮತ್ತು ಬನು ಸಮ್ರ ಅವರೊಂದಿಗೆ ಸಂಧಾನದ ಒಪ್ಪಂದವನ್ನು ಬರೆಯಲಾಯಿತು.

ಇದು ರಸೂಲುಲ್ಲಾಹ್(ಸ)ರವರು ಸ್ವತಃ ಭಾಗವಹಿಸಿದ್ದ ಮೊದಲ ಯುದ್ಧವಾಗಿತ್ತು. (ಸಬೀಲುಲ್ ಹುದಾ ವರ್‌ರಶ್ಶಾದ್, ಭಾಗ-4, ಪುಟ-14, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಈ ನಿಟ್ಟಿನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಸಿರತ್ ಖಾತಮನ್ನಬೀಈನ್ ನಲ್ಲಿ ಬರೆದಿದ್ದಾರೆ, "ಖಡ್ಗದಿಂದ ಜಿಹಾದ್ ಮಾಡಲು ಅನುಮತಿಯು ಹಿಜ್ರಿಯ ಎರಡನೇ ವರ್ಷದ ಸಫರ್ ತಿಂಗಳಲ್ಲಿ ಅವತೀರ್ಣಗೊಂಡಿತು. ಖುರೈಷಿಗಳ ರಕ್ತಸಿಕ್ತ ಉದ್ದೇಶಗಳು ಮತ್ತು ಅವರ ಅಪಾಯಕಾರಿ ಕಾರ್ಯಗಳ ಹಿನ್ನೆಲೆಯಲ್ಲಿ ಮುಸ್ಲಿಮರನ್ನು ಸುರಕ್ಷಿತವಾಗಿಡಲು ತುರ್ತು ಕ್ರಮದ ಅಗತ್ಯವಿದ್ದುದರಿಂದ, ಅದೇ ತಿಂಗಳಲ್ಲಿ ರಸೂಲುಲ್ಲಾಹ್(ಸ) ಅವರು ಮುಹಾಜಿರೀನರ ಒಂದು ಜಮಾಅತ್ತನ್ನು ತನ್ನೊಂದಿಗೆ ಕರೆದುಕೊಂಡು ಸರ್ವಶಕ್ತನಾದ ಅಲ್ಲಾಹನ ಹೆಸರಿನಲ್ಲಿ ಮದೀನಾವನ್ನು ತೊರೆದರು. ಹೊರಡುವ ಮೊದಲು, ಅವರು ಖಝ್ರಜ್ ಗೋತ್ರದ ಮುಖ್ಯಸ್ಥರಾದ ಸಅ್‌ದ್ ಬಿನ್ ಉಬಾದಾ(ರ) ಅವರನ್ನು ಮದೀನಾದಲ್ಲಿ ತಮ್ಮ ಹಿಂದೆ ಅಮೀರ್ ಆಗಿ ನೇಮಿಸಿದರು ಮತ್ತು ಮದೀನಾದಿಂದ ಅವರು ಮಕ್ಕಾದ ನೈಋತ್ಯದ ಕಡೆಗೆ ಹೊರಟರು ಮತ್ತು ಅಂತಿಮವಾಗಿ ವದ್ದಾನ್ ಎಂಬ ಸ್ಥಳವನ್ನು ತಲುಪಿದರು.

ಈ ಪ್ರದೇಶದಲ್ಲಿ ಬನುರ್ಝುಮ್ರಾ ಗೋತ್ರದ ಜನರು ವಾಸಿಸುತ್ತಿದ್ದರು. ಈ ಗೋತ್ರವು ಬನು ಕಿನಾನದ ಒಂದು ಶಾಖೆಯಾಗಿತ್ತು ಆದ್ದರಿಂದ ಈ ಜನರು ಖುರೈಶ್‌ನ ಸೋದರಸಂಬಂಧಿಗಳಂತೆ ಇದ್ದರು. ಇಲ್ಲಿಗೆ ತಲುಪಿದಾಗ, ರಸೂಲುಲ್ಲಾಹ್(ಸ) ಅವರು ಬನುರ್ಝುಮ್ರ ಗೋತ್ರದ ಮುಖ್ಯಸ್ಥರೊಂದಿಗೆ ಚರ್ಚೆ ನಡೆಸಿದರು ಮತ್ತು ಅವರ ನಡುವೆ ಪರಸ್ಪರ ಒಪ್ಪಂದಕ್ಕೆ ಬರೆಯಲಾಯಿತು. ಬನುರ್ಝುಮ್ರರವರು ಮುಸ್ಲಿಮರೊಂದಿಗೆ ಸೌಹಾರ್ದ ಸಂಬಂಧವನ್ನು ಹೊಂದಿರುತ್ತಾರೆ ಮತ್ತು ಮುಸ್ಲಿಮರ ವಿರುದ್ಧ ಯಾವುದೇ ಶತ್ರುಗಳಿಗೆ ಸಹಾಯ ಮಾಡುವುದಿಲ್ಲ ಮತ್ತು ಮುಸ್ಲಿಮರಿಗೆ ಸಹಾಯ ಮಾಡಲು ರಸೂಲುಲ್ಲಾಹ್(ಸ) ಅವರನ್ನು ಕರೆದಾಗ ಅವರು ತಕ್ಷಣ ಬರುತ್ತಾರೆ ಎಂಬ ಷರತ್ತುಗಳಾಗಿದ್ದವು. ಮತ್ತೊಂದೆಡೆ, ಅವರು ಮುಸ್ಲಿಮರ ಪರವಾಗಿ ಹೀಗೆ ಪ್ರತಿಜ್ಞೆ ಮಾಡಿದರು, ಮುಸ್ಲಿಮರು ಬನುರ್ಝುಮ್ರಾದ ಗೋತ್ರದವರೊಂದಿಗೆ ಸೌಹಾರ್ದ ಸಂಬಂಧವನ್ನು ಉಳಿಸಿಕೊಳ್ಳುತ್ತಾರೆ ಮತ್ತು ಅವರಿಗೆ ಕಷ್ಟದ ಸಮಯದಲ್ಲಿ ಸಹಾಯ ಮಾಡುತ್ತಾರೆ. ಈ ಒಪ್ಪಂದವನ್ನು ಎರಡೂ ಪಕ್ಷಗಳು ಔಪಚಾರಿಕವಾಗಿ ಬರೆದು ಸಹಿ ಹಾಕಿದವು ಮತ್ತು ಹದಿನೈದು ದಿನಗಳ ಅನುಪಸ್ಥಿತಿಯ ನಂತರ ರಸೂಲುಲ್ಲಾಹ್(ಸ) ಅವರು ಹಿಂತಿರುಗಿದರು. ಗಜ್ವಾ ವಾದ್ದಾನ್‌ನ ಇನ್ನೊಂದು ಹೆಸರು ಗಜ್ವಾ ಅಬ್ವಾ ಎಂದೂ ಆಗಿದೆ ಏಕೆಂದರೆ ವದ್ದಾನ್ ಬಳಿ ಅಬ್ವಾ ವಸಾಹತು ಇದೆ ಮತ್ತು ಇದು ರಸೂಲುಲ್ಲಾಹ್(ಸ) ರವರ ಗೌರವಾನ್ವಿತ ತಾಯಿಯವರು ನಿಧನರಾದ ಸ್ಥಳವಾಗಿದೆ. ರಸೂಲುಲ್ಲಾಹ್(ಸ)ರವರು ಈ ಯುದ್ಧದಲ್ಲಿ ಬನುರ್ಝುಮ್ರಾ ಜೊತೆಗೆ ಮಕ್ಕಾದ ಖುರೈಷಿಗಳ ಬಗ್ಗೆಯೂ ಕಾಳಜಿ ವಹಿಸಿದ್ದರು. ಇದರರ್ಥ ನಿಮ್ಮ(ಸ) ಈ ಅಭಿಯಾನವು ಖುರೈಷಿಗಳ ಅಪಾಯಕಾರಿ ಕ್ರಮಗಳನ್ನು ಎದುರಿಸಲು ಆಗಿತ್ತು. ಮತ್ತು ಇದರಲ್ಲಿ ಅರಬ್ ಗೋತ್ರಗಳಲ್ಲಿ ಮುಸ್ಲಿಮರ ವಿರುದ್ಧ ಖುರೈಶ್ ಮೊದಲಾದವರ ಕಾರವಾನ್ಗಳು ಸೃಷ್ಟಿಸುತ್ತಿದ್ದ ವಿಷಕಾರಿ ಮತ್ತು ಅಪಾಯಕಾರಿ ಪರಿಣಾಮವನ್ನು ಉದ್ದೇಶಿಸಲಾಗಿತ್ತು. ಈ ಕಾರಣದಿಂದಾಗಿ, ಆ ದಿನಗಳಲ್ಲಿ ಮುಸ್ಲಿಮರ ಸ್ಥಿತಿ ತುಂಬಾ ಗಂಭೀರವಾಗಿತ್ತು. (ಸೀರತ್ ಖಾತಮನ್ನಬೀಈನ್, ಹಝ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ–327–328)

ಆದಾಗ್ಯೂ, ಹಝ್‌ರತ್ ಹಮ್‌ಝಾ(ರ)ರವರು ಈ ಯುದ್ಧದಲ್ಲಿ ರಸೂಲುಲ್ಲಾಹ್(ಸ) ಅವರ ಧ್ವಜವನ್ನು ಎತ್ತಿಕೊಂಡಿದ್ದರು.

ಹಿಜರಿ ವರ್ಷ ಎರಡು ಜಮಾದಿಲ್ ಅವ್ವಲ್ ತಿಂಗಳಲ್ಲಿ ಮಕ್ಕದ ಖುರೈಶಿಗಳಿಗೆ ಸಂಬಂಧಿಸಿದ ಸಮಾಚಾರ ದೊರೆತಾಗ ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಂದಾಜು 150–200 ಸಹಾಬರ ಜೊತೆಗೆ ಮದೀನದಿಂದ ಉಶೈರಃದ ಕಡೆಗೆ ಹೊರಡಿದಾಗ ಅವರು ತಮ್ಮ ಹಿಂದ ಅವರ ಸಹೋದರರಾದ ಅಬುಸಲಮ ಬಿನ್ ಅಬ್ದುಲ್ ಅಸದ್(ರ) ಅವರನ್ನು ಅಮೀರರನ್ನಾಗಿ ನೇಮಿಸಿದರು.

ಈ ಯುದ್ಧದಲ್ಲಿ ರಸೂಲುಲ್ಲಾಹ್(ಸ) ರವರ ಪತಾಕೆಯು ಬಿಳಿ ಬಣ್ಣದ್ದಾಗಿತ್ತು. ಅದು ಹಝ್‌ರತ್ ಹಮ್‌ಝು(ರ)ರವರ ಕೈಯಲ್ಲಿತ್ತು.

ಈ ಅಭಿಯಾನದಲ್ಲಿ, ರಸೂಲುಲ್ಲಾಹ್(ಸ) ಅವರು ಹಲವಾರು ದಾರಿಗಳನ್ನು ಹಿಡಿದರು ಮತ್ತು ಅಂತಿಮವಾಗಿ ಸಮುದ್ರ ತೀರದ ಸಮೀಪವಿರುವ ಯಾನ್ಬು ಬಳಿಯ ಉಷೈರಾ ಎಂಬ ಸ್ಥಳಕ್ಕೆ ತಲುಪಿದರು ಮತ್ತು ಖುರೈಶ್ಗಳೊಂದಿಗೆ ಯಾವುದೇ ಮುಖಾಮುಖಿಯಾಗಲಿಲ್ಲ, ಆದರೆ ರಸೂಲುಲ್ಲಾಹ್(ಸ) ಅವರು ಬನುಮುದ್ಲಿಜ್ ಗೋತ್ರದೊಂದಿಗೆ ಬನು ಝುಮ್ರದೊಂದಿಗೆ ಮಾಡಿಕೊಂಡ ಒಪ್ಪಂದದ ಷರತ್ತುಗಳ ಮೇಲೆಯೇ ಒಪ್ಪಂದವನ್ನು ಮಾಡಿಕೊಂಡ ನಂತರ ಹಿಂತಿರುಗಿದವು. (ಸೀರತ್ ಖಾತಮನ್ನಬೀಈನ್, ಹಝ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–329) (ಸಬಲ್ ಅಲ್–ಹುದಾ ವಾಲ್–ರಶಾದ್, ಭಾಗ–4, ಪುಟ–17, ಅಧ್ಯಾಯ–06, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಬದ್ರ್ ಯುದ್ಧದಲ್ಲಿ ವೈಯಕ್ತಿಕ ಹೋರಾಟದ ಪ್ರಸ್ತಾಪ ಮೊದಲು ಪ್ರಸ್ತಾಪಿಸಲಾಗಿತ್ತು. ಹಝ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅದನ್ನು ಹೀಗೆ ವಿವರಿಸುತ್ತಾರೆ: ಸೈನ್ಯಗಳು ಮುಖಾಮುಖಿಯಾಗಿದ್ದಾಗ ದೈವಿಕ ಶಕ್ತಿ ಪ್ರಕಟನೆಯ ವಿಸ್ಮಯಕರವಾದ ಒಂದು ಸಂಗತಿ ನಡೆಯಿತು. ಆ ಸಮಯದಲ್ಲಿ ಸೈನ್ಯಗಳನ್ನು ನಿಲ್ಲಿಸಿದ ಕ್ರಮೀಕರಣ ಹೇಗಿತ್ತು ಎಂದರೆ, ಇಸ್ಲಾಮಿನ ಸೈನ್ಯ ಯಥಾರ್ಥ ಸಂಖ್ಯೆಗಿಂತ ಇಮ್ಮಡಿಯಾಗಿ ತೋರುತ್ತಿತ್ತು. ಅದರಿಂದ ಶತ್ರುಗಳು ಭಯಗೊಂಡಿದ್ದರು. ಮತ್ತೊಂದೆಡೆ ಮುಸ್ಲಿಮರಿಗೆ ಖುರೈಶಿಯರ ಸಂಖ್ಯೆ ಕಡಿಮೆಯಾಗಿ ತೋರುತ್ತಿತ್ತು. ಇದರ ಕಾರಣದಿಂದ ಮುಸ್ಲಿಮರ ಆತ್ಮವಿಶ್ವಾಸ ವರ್ಧಿಸಿತ್ತು. ಯಾವುದಾದರೂ ರೀತಿಯಲ್ಲಿ ಮುಸ್ಲಿಮರ ಸೈನ್ಯದ ಸರಿಯಾದ ಸಂಖ್ಯೆಯನ್ನು ಗೊತ್ತುಮಾಡಲು ಖುರೈಶಿಯರು ಪ್ರಯತ್ನಿಸುತ್ತಿದ್ದರು. ಮುಸ್ಲಿಮರ ಸಂಖ್ಯೆ ಎಷ್ಟೆಂದು ತಿಳಿದುಬರಲು ಖುರೈಶಿ ಸರದಾರರು ಉಮೈರ ಬಿನ್ ವಹಬ್‌ರನ್ನು ಕಳುಹಿಸಿದರು. ಮುಸ್ಲಿಮರ ಮುಖದ ಪ್ರತಾಪ ಮತ್ತು ಆತ್ಮವಿಶ್ವಾಸ ಹಾಗೂ ಮರಣಭಯವಿಲ್ಲದ್ದನ್ನು ನೋಡಿಕೊಂಡು ಅವನು ಬಹಳ ಗಾಬರಿಗೊಂಡು ಮರಳಿ ಹೋದನು. ಅನಂತರ ಖುರೈಶಿಯರನ್ನು ಸಂಬೋಧಿಸಿ ಹೇಳಿದನು: ರಹಸ್ಯವಾದ ಬೇರೆ ಯಾವುದೇ ಸೈನ್ಯ ಅವರ ಬಳಿಯಿಲ್ಲ. ಆದರೆ ಖುರೈಶಿ ಸಮೂಹವೇ, ನಾನು ನೋಡಿದ್ದು ಏನೆಂದರೆ, ಮುಸ್ಲಿಮರ ಸೈನ್ಯದಲ್ಲಿ ಒಂಟೆಗಳು ಮನುಷ್ಯರನ್ನಲ್ಲ, ಮೃತ್ಯುವನ್ನು ಎತ್ತಿಕೊಂಡಿವೆ ಎಂದಾಗಿದೆ. ಈ ಮಾತನ್ನು ಕೇಳಿ ಖುರೈಶಿಯರು ಅಸಮಾಧಾನಗೊಂಡರು.

ಇದನ್ನು ಕೇಳಿದ ಖುರೈಷಿಗಳಲ್ಲಿ ಸ್ವಲ್ಪ ಆತಂಕ ಉಂಟಾಯಿತು. ಇವರ ಜಾಮೀನುದಾರನನ್ನಾಗಿ ಆಗಮಿಸಿದ್ದ ಸುರಾಖಾ, ಆತನು ಹೇಗೆ ಭಯಭೀತನದನು ಎಂದರೆ ಆತನು ಅಲ್ಲಿಂದ ಓಡಿಹೋದನು ಮತ್ತು ಜನರು ಅವನನ್ನು ನಿಲ್ಲಿಸಿದಾಗ ಅವನು ಹೇಳಿದನು ....... “ನಾನು ನೋಡುವುದನ್ನು ನೀವು ನೋಡುವುದಿಲ್ಲ.” ಹಕೀಮ್ ಬಿನ್ ಹಿಝಾಮ್ ಉಮೈರ್‌ನ ಅಭಿಪ್ರಾಯವನ್ನು ಕೇಳಿದಾಗ ಭಯಭೀತನಾಗಿ ಉತ್ಬ ಬಿನ್ ರಬೀ ಅವರ ಬಳಿಗೆ ಬಂದು ಹೇಳಿದನು. “ಓ ಉತ್ಬಾ! ನೀವು ಮುಹಮ್ಮದ್(ಸ) ಅವರಿಂದ ಉಮ್ರೊ ಹಝ್ರಮಿಯ ಸೇಡು ತೀರಿಸಿಕೊಳ್ಳಲು ಮಾತ್ರ ಬಯಸುತ್ತೀರಿ ಅಲ್ಲವೇ. ಅವನು ನಿಮ್ಮ ಪ್ರತಿಜ್ಞ ಬದ್ಧನಾಗಿದ್ದನು. ನೀವು ಅವನ ಪರವಾಗಿ ರಕ್ತದ ಪರಿಹಾರನಿಧಿಯನ್ನು ಪಾವತಿಸಿ ಖುರೈಷಿಗಳೊಂದಿಗೆ ಹಿಂತಿರುಗುವುದು ಸಾಧ್ಯವಿಲ್ಲವೇ? ಹೀಗೆ ಮಾಡುವುದರಲ್ಲಿ ನಿಮ್ಮ ಒಳ್ಳೆಯ ಹೆಸರು ಶಾಶ್ವತವಾಗಿ ಉಳಿಯುತ್ತದೆ.” ಉದ್ವಿಗ್ನಗೊಂಡ ಮತ್ತು ಸುಳ್ಳು ಹೇಳಲು ಬಯಸಿದ ಉತ್ಬಾ ತಕ್ಷಣ ಹೇಳಿದನು: “ಹೌದು, ಹೌದು, ನಾನು ಒಪ್ಪುತ್ತೇನೆ, ನಂತರ ಹಕೀಮ್! ನೋಡಿ, ಈ ಮುಸ್ಲಿಮರು ಮತ್ತು ನಾವು ಪರಸ್ಪರ ಸಂಬಂಧ ಹೊಂದಿದ್ದೇವೆ. ಸಹೋದರನ ವಿರುದ್ಧ ಸಹೋದರ ಮತ್ತು ಮಗನ ವಿರುದ್ಧ ತಂದೆ ಕತ್ತಿ ಹಿಡಿಯುವುದು ಒಳ್ಳೆಯದೇ? ನೀವು ಒಂದು ಕೇಲಸ ಮಾಡಿ ಅಬುಲ್ ಹಕಮ್ (ಅಂದರೆ ಅಬು ಜಹ್ಲ್) ಅವರ ಬಳಿಗೆ ಹೋಗಿ ಈ ಪ್ರಸ್ತಾಪವನ್ನು ಅವರ ಮುಂದೆ ಪ್ರಸ್ತುತಪಡಿಸಿ” ಮತ್ತು ಅಷ್ಟರಲ್ಲಿ ಉತ್ಬಾ ಸ್ವತಃ ಒಂಟೆಯ ಮೇಲೆ ಕುಳಿತು ಅವನ ಪರವಾಗಿ ತನ್ನ ಜನರಿಗೆ ವಿವರಿಸಲು ಪ್ರಾರಂಭಿಸಿದನು “ಬಂಧುಗಳ ನಡುವಿನ ಜಗಳ ಸರಿಯಲ್ಲ. ನಾವು ಹಿಂತಿರುಗಿ ಇತರ ಅರಬ್ ಗೋತ್ರಗಳೊಂದಿಗೆ ವ್ಯವಹರಿಸಲು ಮುಹಮ್ಮದ್(ಸ) ಅವರನ್ನು ಬಿಡಬೇಕು. ಏನು ಆಗುತ್ತದೆಯೋ ಅದರ ಫಲಿತಾಂಶವನ್ನು ಕದು ನೋಡಬೇಕು. ಮತ್ತು ಈ ಮುಸ್ಲಿಮರೊಂದಿಗೆ ಹೋರಾಡುವುದು ಸುಲಭದ ಕೆಲಸವಲ್ಲ ಎಂದು ನೀವು ನೋಡುತ್ತೀರಿ. ನೀವು ನನ್ನನ್ನು ಹೇಡಿ ಎಂದು ಹೇಳಿದರೆ ನಾನು ಹೇಡಿಯಲ್ಲ........ ನಾನು ಈ ಜನರನ್ನು ಸಾವಿನ ಕೊಳ್ಳುವವರಂತೆ ಕಾಣುತ್ತೇನೆ. ರಸೂಲುಲ್ಲಾಹ್(ಸ) ರವರು ದೂರದಿಂದ ಉತ್ಬನನ್ನು ಕಂಡು ಹೇಳಿದರು. “ಕುಫ್ಫಾರ್‌ನ ಸೈನ್ಯದಲ್ಲಿ ಯಾರಲ್ಲಾದರು ಸೌಜನ್ಯತೆ ಇದ್ದರೆ ಅದು ಈ ಕೆಂಪು ಒಂಟೆಯ ಸವಾರನಿಗೆ ಇರಬೇಕು. ಈ ಜನರು ಇವರ ಮಾತನ್ನು ಒಪ್ಪಿಕೊಂಡರೆ ಅದು ಒಳ್ಳೆಯದು. ಆದರೆ ಹಕೀಮ್ ಬಿನ್ ಹಿಝಾಮ್ ಅಬುಜಹಲ್‌ನ ಬಳಿ ಬಂದು ಈ ಪ್ರಸ್ತಾಪವನ್ನು ವಿವರಿಸಿದಾಗ ಉಮ್ಮತ್ತಿನ ಫಿರ್‌ಔನ್ ಆದ ಅವನು ಯಾವಾಗ ಅಂತಹ ವಿಷಯಗಳನ್ನು ಒಪ್ಪಿಕೊಳ್ಳುತ್ತಾನೆ. ಅವನು ಹೇಳಿದನು ಹೌದಾ ಈಗ ಉತ್ಬಾನಿಗೆ ಸಂಬಂಧಿಕರು ಕಾಣಿಸಿಕೊಳ್ಳಲು ಪ್ರಾರಂಭಿಸಿತೆ. ತದನಂತರ ಅವನು ಉಮ್ರೊ ಹಝ್ರಮಿಯ ಸಹೋದರ ಅಮೀರ್ ಹಝ್ರಮಿಯನ್ನು ಕರೆದು ಹೇಳಿದನು: ನಿನ್ನ ಸಹೋದರನ ಸೇಡು ಕೈಗೆ ತಲುಪಿದಾಗ ನಿಮ್ಮ ಪ್ರತಿಜ್ಞಬದ್ಧನಾದ ಉತ್ಬ ಹೇಳುವುದನ್ನು ನೀವು ಕೇಳಿದ್ದೀರಾ. ಅಮೀರ್ ಕಣ್ಣಿಗೆ ರಕ್ತ ಬಂದು ಬಟ್ಟೆ ಹರಿದುಕೊಂಡು ಅರೇಬಿಯಾದ ಪುರಾತನ ಸಂಪ್ರದಾಯದ ಪ್ರಕಾರ ಬೆತ್ತಲೆಯಾಗಿ ಅಳತೊಡಗಿದ... ಅಯ್ಯೋ! ನನ್ನ ಸಹೋದರು ಸೇಡು ತೀರಿಸಿಕೊಳ್ಳದೆ ಹಾಗೆಯೇ ಉಳಿದುಕೊಳ್ಳುತ್ತಿದ್ದಾನೆ. ಓ ಕ್ಷಮಿಸಿ! ನನ್ನ ಸಹೋದರ ಸೇಡು ತೀರಿಸಿಕೊಳ್ಳದೆ ಮುಕ್ತನಾಗುತ್ತಾನೆ!! ಈ ಮರುಭೂಮಿಯ ಧ್ವನಿಯು ಖುರೈಶ್ ಸೈನ್ಯದ ಹೃದಯದಲ್ಲಿ ದ್ವೇಷದ ಜ್ವಾಲೆಯನ್ನು ಎಬ್ಬಿಸಿತು ಮತ್ತು ಯುದ್ಧದ ಕುಲುಮೆಯು ತನ್ನ ಪೂರ್ಣ ಶಕ್ತಿಯಿಂದ ಉರಿಯಲು ಪ್ರಾರಂಭಿಸಿತು.”

ಅಬು ಜಹ್ಲ್‌ನ ಅಪಹಾಸ್ಯಗಳು ಉತ್ಬಾನ ದೇಹಕ್ಕೆ ಬೆಂಕಿ ಹಚ್ಚಿದವು. ಈ ಯುದ್ಧದ ಸಮಯದಲ್ಲಿ ಒಬ್ಬ ಯೋಧ ಇನ್ನೊಬ್ಬ ಯೋಧನೊಂದಿಗೆ ನೇರ ಯುದ್ಧ ಮಾಡಲು ಆಹ್ವಾನ ನೀಡಲ್ಪಟ್ಟಾಗ ಉತ್‌ಬ ತನ್ನ ಸಹೋದರ ಶೈಬ ಮತ್ತು ಪುತ್ರ ವಲೀದನೊಂದಿಗೆ ತನ್ನ ಸೈನ್ಯದಿಂದ ಮುಂದೆ ಬಂದಾಗ ಅನ್‌ಸಾರ್‌ಗಳು ಅವರನ್ನು ಎದುರಿಸಲು ಸಿದ್ಧರಾದರು. ಆಗ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ತಡೆದು ಹಝ್‌ರತ್ ಅಲಿ, ಹಝ್‌ರತ್ ಹಮ್‌ಝು ಮತ್ತು ಹಝ್‌ರತ್ ಉಬೈದ ಬಿನ್ ಮತ್‌ಲಬ್‌ರನ್ನು ಶತ್ರುಗಳನ್ನು ಎದುರಿಸಲು ಆಜ್ಞಾಪಿಸಿದರು. ಈ ಮೂವರು ಸಹ ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸ್ಸಲ್ಲಮರ ನಿಕಟ ಸಂಬಂಧಿಕರಾಗಿದ್ದರು. ಅಪಾಯಕರ ಸನ್ನಿವೇಶಗಳನ್ನು ಎದುರಿಸುವಾಗ ತನ್ನ ಸಂಬಂಧಿಕರು ಎಲ್ಲರಿಗಿಂತಲೂ ಮುಂದಾಗಿ ಹೋರಾಟ ನಡೆಸಬೇಕೆಂದು ಅವರು ಇಚ್ಛಿಸುತ್ತಿದ್ದರು. ಹಝ್‌ರತ್ ಉಬೈದ ಬಿನ್ ಮತ್‌ಲಬ್(ರ) ವಲೀದನನ್ನೂ ಹಝ್‌ರತ್ ಹಮ್‌ಝು(ರ) ಉತ್‌ಬನನ್ನೂ ಮತ್ತು ಹಝ್‌ರತ್ ಅಲಿ(ರ) ಶೈಬನನ್ನೂ ಎದುರಿಸಲು ಸಿದ್ಧರಾದರು. ಹಝ್‌ರತ್ ಹಮ್‌ಝು ಮತ್ತು ಹಝ್‌ರತ್ ಅಲಿ ತಮ್ಮ ತಮ್ಮ ಎದುರಾಳಿಗಳನ್ನು ಒಂದೆರಡು ಹೊಡೆತ ನೀಡಿ ಹತ್ಯೆ ಮಾಡಿದರು. ವಲೀದ್ ಮತ್ತು ಉಬೈದರ ಮಧ್ಯೆ ಹೋರಾಟ ಮುಂದುವರಿದು ಇಬ್ಬರೂ ಗಾಯಾಳುಗಳಾಗಿ ಬಿದ್ದರು. ಆಗ ಹಝ್‌ರತ್

ಅಲಿ(ರ) ಮತ್ತು ಹಝ್ರತ್ ಹಮ್ಝ(ರ) ವಲೀದನನ್ನು ತಕ್ಷಣ ಕೊಂದು ಹಾಕಿ ಹಝ್ರತ್ ಉಬೈದ್(ರ)ರನ್ನು ತಮ್ಮ ಡೇರೆಗೆ ಕರೆದು ತಂದರು. ಆದರೆ ಹಝ್ರತ್ ಉಬೈದ್(ರ) ಪ್ರಾಣಾಪಾಯದಿಂದ ಪಾರಾಗಲಿಲ್ಲ. ಕೊನೆಗೆ ಬದರ್‌ನಿಂದ ಮರಳುವಾಗ ನಿಧನ ಹೊಂದಿದರು. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-358-360)

ಹಝ್ರತ್ ಹಮ್ಝಾ(ರ)ರವರು ಬದರ್ ಯುದ್ಧದಲ್ಲಿ ಖುರೈಶ್‌ನ ಮುಖ್ಯಸ್ಥ ತುಯಿಮಾ ಬಿನ್ ಆದಿಯನ್ನು ಕೊಂದರು. (ಸಹೀಹ್ ಬುಖಾರಿ, ಕಿತಾಬ್ ಅಲ್-ಮಘಾಜಿ, ಅಧ್ಯಾಯ ಗಝ್ವ ಎ ಬದರ್)

ಬದರ್ ಯುದ್ಧದ ಸಮಯದಲ್ಲಿ ಹಝ್ರತ್ ಹಮ್ಝ(ರ) ಅವರು ಹಝ್ರತ್ ಅಲಿ(ರ) ಅವರ ಒಂಟೆಗಳನ್ನು ಕುಡಿದು ಕೊಂದರು ಎಂಬ ವರದಿ ಇದೆ. ಇದು ಮದ್ಯಪಾನ ನಿಷೇಧದ ಮೊದಲು ಸಂಭವಿಸಿದ ಘಟನೆಯಾಗಿದೆ. ಇದನ್ನು ಬುಖಾರಿಯಲ್ಲಿ ಈ ರೀತಿ ವಿವರಿಸಲಾಗಿದೆ: ವಿಭಿನ್ನ ವರದಿಗಾರರು ಇದ್ದಾರೆ ಹಝ್ರತ್ ಅಲಿ ಬಿನ್ ಹುಸೇನ್(ರ) ಅವರು ತಮ್ಮ ತಂದೆ ಹುಸೇನ್ ಬಿನ್ ಅಲಿ(ರ) ವರದಿ ಮಾಡುತ್ತಾರೆ: ಹಝ್ರತ್ ಅಲಿ ಬಿನ್ ಅಬೀ ತಾಲಿಬ್(ರ) ರವರು ಹೇಳಿದರು, ನನಗೆ ರಸೂಲುಲ್ಲಾಹ್(ಸ) ಅವರೊಂದಿಗೆ ಬದರ್ ಯುದ್ಧದ ಸಂದರ್ಭದಲ್ಲಿ ನನಗೆ ಒಂದು ಎಳೆಯ ಒಂಟೆಯನ್ನು ಗನೀಮತ್‌ನಲ್ಲಿ ಸಿಕ್ಕಿತು ಮತ್ತು ಇನ್ನೊಂದು ಒಂಟೆಯನ್ನು ರಸೂಲುಲ್ಲಾಹ್(ಸ) ಅವರು ನನಗೆ ಇನ್ನೊಂದು ಒಂಟೆಯನ್ನು ಸಹ ನೀಡಿದ್ದರು. ಒಂದು ದಿನ, ಓರ್ವ ಅನ್ಸಾರಿ ಸಹಾಬರ ಬಾಗಿಲಲ್ಲಿ, ನಾನು ಅಝ್‌ಖರ್ (ಚಿನ್ನದ ಅಕ್ಕಸಾಲಿಗರು ಇತ್ಯಾದಿ ಬಳಸುವ ಹುಲ್ಲಾಗಿದೆ, ಪರಿಮಳಯುಕ್ತ ಹುಲ್ಲಾಗಿದೆ) ಅನ್ನು ಆ ಒಂಟೆಗಳ ಬೆನ್ನಿನ ಮೇಲೆ ತೆಗೆದುಕೊಂಡು ಮಾರಾಟ ಮಾಡುತ್ತೇನೆ ಎಂಬ ಕಲ್ಪನೆಯಿಂದ ಕಟ್ಟಿದೆ. ಬನೀ ಖೈನಖಾದ ಅಕ್ಕಸಾಲಿಗನೂ ನನ್ನ ಜೊತೆಗಿದ್ದನು. ಹೀಗಿರುವಾಗ ಅದರ ಆದಾಯದಿಂದಲೇ ನಾನು ಮದುವೆಯಾಗಲಿರುವ ಫಾತಿಮಾ(ರ) ಅವರ ವಲೀಮ ಮಾಡಬೇಕು ಎಂಬ ಯೋಚನೆ ಇತ್ತು. ಹಮ್ಝ ಬಿನ್ ಅಬ್ದುಲ್ ಮುತ್ತಲಿಬ್(ರ) ಈ ಅನ್ಸಾರಿಯ ಮನೆಯಲ್ಲಿ ಕುಳಿತು ಮದ್ಯಪಾಮ ಮಾಡುತ್ತಿದ್ದರು. ಅವರ ಜೊತೆಯಲ್ಲಿ ಓರ್ವ ಗಾಯಕಿಯೂ ಕೂಡ ಇದ್ದಳು. ಅವಳು ಪದ್ಯದ ಈ ಪಂಕ್ತಿಯನ್ನು ಪಠಿಸಿದಾಗ ಅಂದರೆ ಹೌದು ಓ ಹಮ್ಝ! ಎದ್ದೇಳು ಕೊಬ್ಬಿದ ಎಳೆಯ ಒಂಟೆಗಳ ಬಳಿಗೆ ಹೋಗು. ಆಗ ಹಮ್ಝ(ರ) ಉತ್ಸಾಹಭರಿತರಾಗಿ ಕತ್ತಿ ಹಿಡಿದು ಎದ್ದು ಎರಡು ಒಂಟೆಗಳ ಗೂನುಗಳನ್ನು ಹರಿದರು. ಅದರ ಹೊಟ್ಟೆಯನ್ನು ಸೀಳಿ ಅದರ ಯಕೃತ್ತವನ್ನು ಹೊರತೆಗೆದರು. ಇಬ್ನ್-ಇ-ಜುರೈಜ್ ಹೇಳುವಂತೆ ನಾನು ಇಬ್ನ್-ಎ-ಶಿಹಾಬ್ ಅವರನ್ನು ಕೇಳಿದೆ, ಒಂಟೆಯ ಬುಜದ ಮಾಂಸವನ್ನು ಸಹ ಕತ್ತರಿಸಲಾಗಿದೆಯೇ? ಹೌದು ಆ ಎರಡೂ ಒಂಟೆಗಳ ಬುಜಗಳನ್ನು ಸಹ ಕತ್ತರಿಸಲಾಗಿತ್ತು. ಇಬ್ನ್ ಶಿಹಾಬ್ ಅವರು ಹೇಳುತ್ತಾರೆ ಹಝ್ರತ್ ಅಲಿ(ರ)ರಿಗೆ ಈ ವಿಷಯ ತಿಳಿದಾಗ ಅವರಿಗೆ ಬಹಳ ದುಃಖವಾಯಿತು. ಅವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಎಲ್ಲ ವಿಷಯಗಳನ್ನು ತಿಳಿಸಿದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಹಮ್ಝ(ರ)ರ ಸಮೀಪಕ್ಕೆ ಬಂದು ತನ್ನ ಕೋಪವನ್ನು ಪ್ರಕಟಿಸಿದರು. ಹಝ್ರತ್ ಹಮ್ಝ(ರ) ಆಗಲೂ ಮದ್ಯಪಾನದಿಂದ ಮತ್ತರಾಗಿದ್ದರು. ಅವರು ಎಲ್ಲರನ್ನೂ ನೋಡಿ ಹೇಳಿದರು: ನೀವೆಲ್ಲರೂ ನಮ್ಮ ತಂದೆ ತಾತಂದಿರ ಗುಲಾಮರಾಗಿದ್ದೀರಿ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅಲ್ಲಿಂದ ಮರಳಿ ಹೋದರು. ಇದು ಮದ್ಯಪಾನ ನಿಷೇಧದ ಮೊಂಚಿಯ ವಿಷಯವಾಗಿದೆ.
(ಸಹೀಹ್ ಅಲ್-ಬುಖಾರಿ, ಕಿತಾಬ್ ಅಲ್-ಮಸಾಖಾತ್, ಹದೀಸ್ ಸಂಖ್ಯೆ-2375)

ಇಂತಹ ಪರಿಸ್ಥಿತಿಯಲ್ಲಿ ಇವರೊಂದಿಗೆ ಮಾತನಾಡದೇ ಇರುವುದು ಒಳಿತು, ಆದರೆ ಮದ್ಯಪಾನ ನಿಷಿದ್ಧಗೊಳಿಸಿದ ನಂತರ ಸಹಾಬರು ಮದ್ಯದ ಸಮೀಪಕ್ಕೆ ಸಹ ಹೋಗಲಿಲ್ಲ. ಸಹಾಬರ ವಿಶ್ವಾಸದ ಉನ್ನತಮಟ್ಟ ಆ ರೀತಿಯಾಗಿತ್ತು. ಅಲ್ಲಾಹನ ಆಜ್ಞೆಗಳನ್ನು ಪಾಲಿಸಲು ಸಹಾಬಿಗಳ ಮಾನದಂಡವೆಂದರೆ ತಕ್ಷಣವೇ ಮದ್ಯದ ಮಟ್ಕಾಗಳನ್ನು ಮುರಿದು ಹಾಕಿದರು.

(ಸಹೀಹ್ ಮುಸ್ಲಿಂ, ಕಿತಾಬ್ ಅಲ್-ಅಶ್ರಬಾ, ಹದೀಸ್ ಸಂಖ್ಯೆ-5138)

ಇಂದಿನ ದಿನಮಾನಗಳಲ್ಲಿ ಜನ ಹೇಳುವಂತೆ ಕ್ರಮೇಣ ಡ್ರಗ್ಸ್ ಚಟ ಬಿಡುತ್ತೇವೆ ಎಂದು ಹೇಳಿಲ್ಲ. ಮೊದಲನೆಯದಾಗಿ, ಅವರು ಮೊದಲು ಕುಡಿಯುವು ತಪ್ಪಾಗಿದೆ. ಇಸ್ಲಾಂನಲ್ಲಿ ಇದನ್ನು ನಿಷೇಧಿಸಲಾಗಿದೆ ಮತ್ತು ನಂತರ ಅವರು ಅದನ್ನು ಕ್ರಮೇಣ ಬಿಡುತ್ತಾರೆ ಎಂದು ಹೇಳುತ್ತಾರೆ, ನಮಗೆ ಬಿಡುವು ನೀಡಬೇಕು. ಅದೇನೇ ಇರಲಿ, ಇದು ಆ ಕಾಲದಲ್ಲಿ ನಡೆದ ಘಟನೆಯೇ ಆಗಿದೆ. ಆ ನಂತರ ಅವರ ತ್ಯಾಗದ ಗುಣವೂ ಸಹ ಹೆಚ್ಚಾಯಿತು. ಖಂಡಿತವಾಗಿಯು, ಹಝ್ರತ್ ಹಮ್ಝ(ರ) ಅವರು ಹೇಳಿದ ಮಾತಿಗೆ ಅವರಿಗೆ ನಂತರ ನಾಚಿಕೆಯಾಗಿರಬಹುದು.

ಬದರ್ ಯುದ್ಧದ ನಂತರ, ಬನೂ ಖೈನ್‌ಖಾಅ್ ಯುದ್ಧದಲ್ಲಿ ಸಹ ಹಝ್ರತ್ ಹಮ್ಝ(ರ) ಮುಂಚೂಣಿಯಲ್ಲಿದ್ದರು.

ಆ ಯುದ್ಧದಲ್ಲಿ ಸಹ ಇಸ್ಲಾಮಿನ ಪತಾಕೆ ಹಝ್ರತ್ ಹಮ್ಝರ(ರ) ಕೈಯಲ್ಲಿತ್ತು. ಈ ಪತಾಕೆಯು ಬಿಳಿ ಬಣ್ಣದ್ದಾಗಿತ್ತು. (ಸಬ್ಲುಲ್ ಹುದಾ ವರ್‌ರಶಾದ್, ಭಾಗ-4, ಪುಟ-180, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ತಮ್ಮ ವಿವರಣೆಯನ್ನು ಈ ಕೆಳಗಿನಂತೆ ಬರೆದಿದ್ದಾರೆ: "ರಸೂಲುಲ್ಲಾಹ್(ಸ) ಮಕ್ಕಾದಿಂದ ಹಿಜ್ರತ್ ಮಾಡಿ ಮದೀನಾಕ್ಕೆ ಬಂದರು. ಆ ಕಾಲದಲ್ಲಿ ಮದೀನಾದಲ್ಲಿ ಮೂರು ಯಹೂದಿಗಳ ಗೋತ್ರಗಳು ವಾಸಿಸುತ್ತಿದ್ದರು. ಅವರ ಹೆಸರುಗಳು ಬನು ಖೈನಖಾ, ಬನೂ ನಝೀರ್ ಮತ್ತು ಬನೂ ಖುರೈಝ. ರಸೂಲುಲ್ಲಾಹ್(ಸ)ರವರು ಮದೀನಕ್ಕೆ ಬಂದ ತಕ್ಷಣ, ಅವರು ಈ ಗೋತ್ರಗಳೊಂದಿಗೆ ಶಾಂತಿಯ ಒಪ್ಪಂದವನ್ನು ಮಾಡಿಕೊಂಡರು ಮತ್ತು ಅವರಲ್ಲಿ ಶಾಂತಿ ಮತ್ತು ಸಹಬಾಳ್ವೆಗೆ ಅಡಿಪಾಯ ಹಾಕಿದರು. ಒಪ್ಪಂದದ ಪ್ರಕಾರ, ಮದೀನಾದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿಯನ್ನು ಪಕ್ಷಗಳು ಹೊಂದಿದ್ದವು ಮತ್ತು ಯಾವುದೇ ಬಾಹ್ಯ ಶತ್ರುಗಳು ಮದೀನಾದ ಮೇಲೆ ದಾಳಿ ಮಾಡಿದರೆ, ಅವರು ಒಟ್ಟಾಗಿ ಹೋರಾಡಬೇಕು. ಆರಂಭದಲ್ಲಿ, ಯಹೂದಿಗಳು ಈ ಒಪ್ಪಂದಕ್ಕೆ ಬದ್ಧರಾಗಿದ್ದರು ಮತ್ತು ಕನಿಷ್ಠ ಬಾಹ್ಯವಾಗಿ ಮುಸ್ಲಿಮರೊಂದಿಗೆ ಯಾವುದೇ ಸಂಘರ್ಷವನ್ನು ಸೃಷ್ಟಿಸಲಿಲ್ಲ. ಆದರೆ ಮದೀನಾದಲ್ಲಿ ಮುಸ್ಲಿಮರು ಹೆಚ್ಚು ಅಧಿಕಾರವನ್ನು ಪಡೆಯುತ್ತಿರುವುದನ್ನು ಕಂಡಾಗ, ಅವರ ಅಭಿಪ್ರಾಯಗಳು ಬದಲಾಗಲಾರಂಭಿಸಿದವು ಮತ್ತು ಮುಸ್ಲಿಮರ ಈ ಬೆಳೆಯುತ್ತಿರುವ ಶಕ್ತಿಯನ್ನು ನಿಲ್ಲಿಸಲು ನಿರ್ಧರಿಸಿದರು ಮತ್ತು ಈ ಉದ್ದೇಶಕ್ಕಾಗಿ ಅವರು ಎಲ್ಲಾ ರೀತಿಯ ಕಾನೂನುಬದ್ಧ ಮತ್ತು ಕಾನೂನುಬಾಹಿರ ಕ್ರಮಗಳನ್ನು ತೆಗೆದುಕೊಳ್ಳಲು ಪ್ರಾರಂಭಿಸಿದರು.

ಮುಸ್ಲಿಮರೊಳಗೆ ಒಡಕು ಮೂಡಿಸುವ ಮೂಲಕ ಅಂತರ್ಯುದ್ಧವನ್ನು ಪ್ರಾರಂಭಿಸಲು ಪ್ರಯತ್ನಿಸಲು ಅವರು ಹಿಂಜರಿಯಲಿಲ್ಲ. ಆದ್ದರಿಂದ, ಒಂದು ವರದಿ ಇದೆ, ಒಂದು ಸಂದರ್ಭದಲ್ಲಿ, ಓಸ್ ಮತ್ತು ಖಝ್ರಜ್ ಗೋತ್ರದ ಅನೇಕ ಜನರು ಒಟ್ಟಿಗೆ ಕುಳಿತು ಪರಸ್ಪರ ಪ್ರೀತಿ ಮತ್ತು ಒಪ್ಪಂದದಿಂದ ಪರಸ್ಪರ ಮಾತನಾಡುತ್ತಿದ್ದರು, ಕೆಲವು ವಿದ್ರೋಹಿ ಯಹೂದಿಗಳು ಈ ಸಭೆಗೆ ತಲುಪಿದರು ಮತ್ತು ಬುಆಸ್ ಯುದ್ಧದ ಬಗ್ಗೆ ಮಾತನಾಡಲು ಪ್ರಾರಂಭಿಸಿದರು. ಹಿಜ್ರತ್ತಿನ ಕೆಲವು ವರ್ಷಗಳ ಮೊದಲು ಈ ಎರಡು ಗೋತ್ರದವರ ನಡುವೆ ನಡೆದ ಅಪಾಯಕಾರಿ ಯುದ್ಧವಾಗಿತ್ತು ಮತ್ತು ಇದರಲ್ಲಿ ಔಸ್ ಮತ್ತು ಖಝ್ರಜ್‌ನ ಅನೇಕ ಜನರು ಪರಸ್ಪರರ ಕೈಯಿಂದ ಕೊಲ್ಲಲ್ಪಟ್ಟರು. ಈ ಯುದ್ಧದ ಪ್ರಸ್ತಾಪವಾದ ತಕ್ಷಣ, ಕೆಲವು ಉತ್ಸಾಹಿ ಜನರ ಹೃದಯದಲ್ಲಿ ಹಳೆಯ ನೆನಪುಗಳು ಪುನರುಜ್ಜೀವನಗೊಂಡವು ಮತ್ತು ಹಿಂದಿನ ದ್ವೇಷದ ದೃಶ್ಯಗಳು ಅವರ ಕಣ್ಣುಗಳ ಮುಂದೆ ಮರಳಿದವು. ಇದರ ಪರಿಣಾಮವೆಂದರೆ ಅದೇ ಸಭೆಯಲ್ಲಿ ಮುಸ್ಲಿಮರ ನಡುವೆ ಕತ್ತಿ ಮಸೆಯುವ ಮಟ್ಟಕ್ಕೆ ಪರಿಸ್ಥಿತಿ ತಲುಪಿತು, ಆದರೆ ಅದೃಷ್ಟವಶಾತ್ ರಸೂಲುಲಲಾಹ್(ಸ) ಅವರಿಗೆ ಸಕಾಲದಲ್ಲಿ ಅದರ ಬಗ್ಗೆ ತಿಳಿಸಲಾಯಿತು ಮತ್ತು ಅವರು ಮುಹಾಜಿರೀನರ ಗುಂಪಿನೊಂದಿಗೆ ಬಂದು ಎರಡೂ ಪಕ್ಷಗಳಿಗೆ ಅರ್ಥ ಮಾಡಿಸಿ ಕುಳ್ಳಿರಿಸಿ ನಂತರ ನಾನಿರುವಾಗ ಅಜ್ಞಾನದ ಹಾದಿ ಹಿಡಿಯುತ್ತಿದ್ದೀರಿ ಇಸ್ಲಾಮಿನ ಮೂಲಕ ಬಂಧುಗಳನ್ನಾಗಿ ಮಾಡಿದ ಅಲ್ಲಾಹನ ಅನುಗ್ರಹಕ್ಕೆ ಬೆಲೆ ನೀಡುತ್ತಿಲ್ಲ ಎಂದು ಛೀಮಾರಿ ಹಾಕಿದರು. ರಸೂಲುಲ್ಲಾಹ್(ಸ) ಅವರ ಈ ಸಲಹೆಯು ಅನ್ಸಾರ್‌ಗಳ ಮೇಲೆ ಎಷ್ಟು ಪರಿಣಾಮ ಬೀರಿತು ಎಂದರೆ ಅವರ ಕಣ್ಣುಗಳಿಂದ ಕಣ್ಣೀರು ಹರಿಯಿತು ಮತ್ತು ಅವರು ತಮ್ಮ ಕ್ರಿಯೆಯ ಬಗ್ಗೆ ಪಶ್ಚಾತ್ತಾಪಪಟ್ಟರು ಮತ್ತು ಪರಸ್ಪರ ಅಪ್ಪಿಕೊಂಡರು.

ಬದರ್ ಯುದ್ಧವು ಮುಗಿದಿತ್ತು ಮತ್ತು ಸರ್ವಶಕ್ತನಾದ ಅಲ್ಲಾಹನು ತನ್ನ ಅನುಗ್ರಹದಿಂದ ಮುಸ್ಲಿಮರಿಗೆ ಅವರ ಕೊರತೆ ಮತ್ತು ಸೇವೆಯ ಕೊರತೆಯ ನಡುವೆಯೂ ಖುರೈಷಿಗಳ ದೊಡ್ಡ ಸೈನ್ಯದ ಮೇಲೆ ದೊಡ್ಡ ವಿಜಯವನ್ನು ನೀಡಿದನು ಮತ್ತು ಮಕ್ಕಾದ ಮಹಾನ್ ನಾಯಕರು ಧೂಳಾದರು ಆಗ ಮದೀನದ ಯಹೂದಿಗಳು ಭುಗಿಲೆದ್ದರು ಮತ್ತು ಅವರು ಮುಸ್ಲಿಮರೊಂದಿಗೆ ಬಹಿರಂಗವಾಗಿ ವಾದಿಸಲು ಪ್ರಾರಂಭಿಸಿದರು ಮತ್ತು ಖುರೈಷಿಗಳ ಸೈನ್ಯವನ್ನು ಸೋಲಿಸುವಲ್ಲಿ ದೊಡ್ಡ ವಿಷಯ ಏನೆಂದು ಸಭೆಗಳಲ್ಲಿ ಬಹಿರಂಗವಾಗಿ ಹೇಳಲು ಪ್ರಾರಂಭಿಸಿದರು, ಮುಹಮ್ಮದ್(ಸ) ಅವರು ನಮ್ಮನ್ನು ಎದುರಿಸಿದರೆ, ನಾವು ನಿಮಗೆ ಹೇಳೋಣ. ನಾವು ಹೇಗೆ ಹೋರಾಡುತ್ತೇವೆ ಎಂದು.

ಸಭೆಯೊಂದರಲ್ಲೂ ಅವರೇ ಇದೇ ರೀತಿಯ ಮಾತುಗಳನ್ನು ರಸೂಲುಲ್ಲಾಹ್(ಸ)ರವರಿಗೆ ನೇರವಾಗಿ ಹೇಳಿದರು. ಬದರ್ ಯುದ್ಧದ ನಂತರ ರಸೂಲುಲ್ಲಾಹ್(ಸ) ಅವರು ಮದೀನಕ್ಕೆ ಬಂದಾಗ ಅವರು ಒಂದು ದಿನ ಯಹೂದಿಗಳನ್ನು ಒಟ್ಟುಗೂಡಿಸಿ ಅವರಿಗೆ ಸಲಹೆ ನೀಡಿದರು ಮತ್ತು ತಮ್ಮ ದಾವೆಯನ್ನು ಸಹ ಪ್ರಸ್ತಾಪಿಸಿ ಇಸ್ಲಾಮಿನ ಕಡೆಗೆ ಅವರಿಗೆ ಆಹ್ವಾನಿಸಿದರು. ರಸೂಲುಲ್ಲಾಹ್(ಸ) ಅವರ ಈ ಶಾಂತಿಯುತ ಮತ್ತು ಸಹಾನುಭೂತಿಯ ಭಾಷಣಕ್ಕೆ ಯಹೂದಿಗಳ ನಾಯಕರು ಈ ಮಾತುಗಳಲ್ಲಿ ಪ್ರತಿಕ್ರಿಯಿಸಿದರು: "ಓ ಮುಹಮ್ಮದ್(ಸ) ಕೆಲವು ಖುರೈಷಿಗಳನ್ನು ಕೊಂದ ನಂತರ ನೀವು ಅಹಂಭಾವಿಯಾಗಬೇಡಿ. ಆ ಜನರಿಗೆ ಹೋರಾಟದ ಕಲೆಯ ಅರಿವಿರಲಿಲ್ಲ. ನಮ್ಮ ಜೊತೆ ಯುದ್ಧವಾದರೆ ಗೊತ್ತಾಗುತ್ತೆ ಹೋರಾಟಗಾರರು ಹೇಗಿರುತ್ತಾರೆ

ಎಂದು. ಯಹೂದಿಗಳು ಅವರನ್ನು ಸಾಮಾನ್ಯ ಬೆದರಿಕೆಗೆ ಸೀಮಿತಗೊಳಿಸಲಿಲ್ಲ, ಬದಲಿಗೆ ಅವರು ರಸೂಲುಲ್ಲಾಹ್(ಸ) ಅವರನ್ನು ಕೊಲ್ಲುವ ಯೋಜನೆಗಳನ್ನು ಸಹ ಪ್ರಾರಂಭಿಸಿದರು ಎಂದು ತೋರುತ್ತಿತ್ತು. ಏಕೆಂದರೆ ಆ ದಿನಗಳಲ್ಲಿ ಪ್ರಾಮಾಣಿಕ ಒಡನಾಡಿಯಾಗಿದ್ದ ತಲ್‌ಹ ಬಿನ್ ಬರಾ ಅವರು ಮರಣ ಸನ್ನಿಧುಯು ಸಮೀಪಿಸಿದಾಗ ಅವರು ಒಂದು ಉಯಿಲು ಬರೆಸಿದರು, ಒಂದು ವೇಳೆ ನಾನು ರಾತ್ರಿಯಲ್ಲಿ ಸತ್ತರೆ, ರಸೂಲುಲ್ಲಾಹ್(ಸ) ಅವರಿಗೆ ನಮಾಝೆ ಜನಾಝಕ್ಕಾಗಿ ತಿಳಿಸಬೇಡಿ ಏಕೆಂದರೆ ನನ್ನಿಂದ ಯಹೂದಿಗಳ ಕಡೆಯಿಂದ ಅಪಘಾತ ಸಂಭವಿಸದಿರಲಿ. ಹೀಗೆ, ಬದರ್ ಯುದ್ಧದ ನಂತರ, ಯಹೂದಿಗಳು ಬಹಿರಂಗವಾಗಿ ಕಿಡಿಗೇಡಿತನವನ್ನು ಪ್ರಾರಂಭಿಸಿದರು ಮತ್ತು ಮದೀನಾದ ಯಹೂದಿಗಳಲ್ಲಿ ಬನುಖೈನಖಾ ಅತ್ಯಂತ ಶಕ್ತಿಶಾಲಿ ಮತ್ತು ಧೈರ್ಯಶಾಲಿಯಾಗಿರುವುದರಿಂದ, ಅವರು ಒಪ್ಪಂದವನ್ನು ಮುರಿಯಲು ಮೊದಲಿಗರಾಗಿದ್ದರು. ಆದ್ದರಿಂದ ಇತಿಹಾಸಕಾರರು ಬರೆಯುತ್ತಾರೆ ....... ಮದೀನದ ಯಹೂದಿಗಳಲ್ಲಿ, ಬನು ಖೈನಖಾ ಅವರು ತಮ್ಮ ಮತ್ತು ರಸೂಲುಲ್ಲಾಹ್(ಸ) ಅವರ ನಡುವಿನ ಒಪ್ಪಂದವನ್ನು ಮುರಿಯಲು ಮೊದಲಿಗರಾಗಿದ್ದರು ಮತ್ತು ಬದರ್ ನಂತರ ಅವರು ತುಂಬಾ ಬಂಡಾಯವನ್ನು ಪ್ರಾರಂಭಿಸಿದರು ಮತ್ತು ಬಹಿರಂಗವಾಗಿ ದುರುದ್ದೇಶ ಮತ್ತು ಅಸೂಯೆಯನ್ನು ವ್ಯಕ್ತಪಡಿಸಿದರು ಮತ್ತು ಒಡಂಬಡಿಕೆಯನ್ನು ಮುರಿದರು.

ಆದರೆ ಈ ರೀತಿಯ ವಿಷಯಗಳ ಹೊರತಾಗಿಯೂ, ಮುಸ್ಲಿಮರು ತಮ್ಮ ಯಜಮಾನನ ಮಾರ್ಗದರ್ಶನದಲ್ಲಿ ತಾಳ್ಮೆಯಿಂದ ಕೆಲಸ ಮಾಡಿದರು ಮತ್ತು ಅವರ ಕಡೆಯಿಂದ ಯಾವುದೇ ಪ್ರಗತಿಗೆ ಅವಕಾಶ ನೀಡಲಿಲ್ಲ, ಬದಲಿಗೆ ಯಹೂದಿಗಳೊಂದಿಗೆ ಮಾಡಿಕೊಂಡ ಒಪ್ಪಂದದ ನಂತರ ರಸೂಲುಲ್ಲಾಹ್(ಸ)ರವರು ಯಹೂದಿಗಳೊಂದಿಗೆ ಬಹಳ ಹೃತ್ಪೂರಕವಾಗಿ ವರ್ತಿಸುತ್ತಿದ್ದರು ಎಂದು ಹದೀಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಒಮ್ಮೆ ಒಬ್ಬ ಮುಸ್ಲಿಂ ಮತ್ತು ಯಹೂದಿಯ ನಡುವೆ ಕೆಲವು ಭಿನ್ನಾಭಿಪ್ರಾಯವಾಯಿತು. ಯಹೂದಿಯು ಹಝ್ರತ್ ಮೂಸ(ಅ) ಅವರನ್ನು ಎಲ್ಲಾ ಪ್ರವಾದಿಗಳಿಗಿಂತ ಶ್ರೇಷ್ಠರು ಎಂದು ವಿವರಿಸಿದನು. ಸಹಾಬಿಯು ಅವನ ಮೇಲೆ ಕೋಪಗೊಂಡರು ಮತ್ತು ಅವರು ಆ ಯಹೂದಿಯೊಂದಿಗೆ ಸ್ವಲ್ಪ ಕಟುವಾಗಿ ವರ್ತಿಸಿದರು ಮತ್ತು ರಸೂಲುಲ್ಲಾಹ್(ಸ.ಅ) ರವರು ಸಂದೇಶವಾಹಕರಲ್ಲಿ ಅತ್ಯುತ್ತಮರು ಎಂದು ಬಣ್ಣಿಸಿದರು. ಈ ಘಟನೆಯ ಬಗ್ಗೆ ರಸೂಲುಲ್ಲಾಹ್(ಸ) ಅವರಿಗೆ ತಿಳಿಸಿದಾಗ, ಅವರು(ಸ) ಕೋಪಗೊಂಡರು ಮತ್ತು ಈ ಸಹಾಬಿಯನ್ನು ಖಂಡಿಸಿದರು ಮತ್ತು "ದೇವರ ಸಂದೇಶವಾಹಕರು ಪರಸ್ಪರರ ಶ್ರೇಷ್ಠತೆಯ ಬಗ್ಗೆ ಮಾತನಾಡುವುದು ನಿಮ್ಮ ಕೆಲಸವಲ್ಲ" ಎಂದು ಹೇಳಿದರು ಮತ್ತು ರಸೂಲುಲ್ಲಾಹ್(ಸ)ರವರು ಮೂಸ ಅಲೈಹಿಸ್ಸಲಾಮ್ ಅವರ ಭಾಗಶಃ ಸದ್ಗುಣವನ್ನು ವಿವರಿಸಿ ಈ ಯಹೂದಿಯನ್ನು ಸಮಾಧಾನಪಡಿಸಿದರು. ಆದರೆ ಈ ರೀತಿಯ ಉಪಚಾರದ ಹೊರತಾಗಿಯೂ, ಯಹೂದಿಗಳು ತಮ್ಮ ದುಷ್ಟತನದಲ್ಲಿ ಪ್ರಗತಿಯನ್ನು ಮುಂದುವರೆಸಿದರು ಮತ್ತು ಅಂತಿಮವಾಗಿ ಯುದ್ಧದ ಕಾರಣವು ಯಹೂದಿಗಳಿಂದಲೇ ಹುಟ್ಟಿಕೊಂಡಿತು ಮತ್ತು ಅವರ ಹಗೆತನವನ್ನು ಅವರ ಹೃದಯದಲ್ಲಿ ತಡೆಯಲಾಗಲಿಲ್ಲ ಮತ್ತು ಒಬ್ಬ ಮುಸ್ಲಿಮ್ ಮಹಿಳೆ ಪೇಟೆಯಲ್ಲಿ ಒಬ್ಬ ಯಹೂದಿ ವ್ಯಾಪಾರಿಯ ಅಂಗಡಿಯಿಂದ ಸಾಮಗ್ರಿಗಳನ್ನು ಖರೀದಿಸಲು ಹೋದಾಗ ಕೆಲವು ಯಹೂದಿ ಪೋಲಿ ತರುಣರು ಆ ಮಹಿಳೆಯನ್ನು ಪೋಲಿತನದಿಂದ ಚುಡಾಯಿಸಿದರು. ಸ್ವತಃ ಅಂಗಡಿಯ ಮಾಲಿಕನು ಉದ್ಧಟತನದಿಂದ ಆ ಮಹಿಳೆಯು ಉಟ್ಟ ಬಟ್ಟೆಯ ಕೆಳ ತುದಿಯನ್ನು ಆಕೆಗೆ ತಿಳಿಯದ ಹಾಗೆ ಹಿಂಭಾಗದಲ್ಲಿ ಯಾವುದೋ ಕೊಂಡಿಗೆ ಸಿಲುಕಿಸಿದನು. ಆ ಮಹಿಳೆ ಅಂಗಡಿಯಿಂದ ಮರಳಲು ಪ್ರಯತ್ನಿಸಿದಾಗ ಆಕೆಯ ಬಟ್ಟೆ ಕಳಚಿ ಹೋಯಿತು. ಆಗ ಯಹೂದಿಯರು ಕೇಕೆ ಹಾಕುತ್ತಾ ನಕ್ಕರು.

ಮುಸ್ಲಿಮ್ ಮಹಿಳೆ ನಾಚಿಕೆಯಿಂದ ಕಂಗೆಟ್ಟು ಬೊಬ್ಬಿಟ್ಟು ಸಹಾಯ ಯಾಚಿಸಿದರು. ಆಕಸ್ಮಿಕವಾಗಿ ಒಬ್ಬ ಮುಸ್ಲಿಮ್ ವ್ಯಕ್ತಿ ಅಲ್ಲಿ ಸಮೀಪದಲ್ಲಿದ್ದರು. ಆ ಮುಸ್ಲಿಮ್ ತಕ್ಷಣ ಅಲ್ಲಿಗೆ ಹೋದಾಗ ಹೊಡೆದಾಟ ಪ್ರಾರಂಭವಾಗಿ ಅಂಗಡಿ ಮಾಲಿಕನು ಕೊಲ್ಲಲ್ಪಟ್ಟನು.

ಆಗ ಯಹೂದಿಯರು ಆ ಅಭಿಮಾನಿ ಮುಸ್ಲಿಮನನ್ನು ಸುತ್ತುವರಿದು ಆಕ್ರಮಿಸಿದಾಗ ಅವರು ಹತರಾದರು. ಆ ಸಂದರ್ಭದಲ್ಲಿ ಮುಸ್ಲಿಮರ ಮತ್ತು ಯಹೂದಿಯರ ಮಧ್ಯೆ ದಂಗೆ ಪ್ರಾರಂಭವಾಗುವ ಸಾಧ್ಯತೆಗಳಿದ್ದುವು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ಘಟನೆ ಬಗ್ಗೆ ತಿಳಿದಾಗ ಬನೂ ಖೈನ್‌ಖಾಅ್ ಗೋತ್ರದ ನೇತಾರರನ್ನು ಕರೆಯಿಸಿಕೊಂಡು ಅವರೊಂದಿಗೆ ಹೇಳಿದರು: ಹೀಗೆಲ್ಲ ಮಾಡುವುದು ಸರಿಯಲ್ಲ. ನೀವು ದೇವನಿಗೆ ಭಯಪಟ್ಟು ನಿಮ್ಮ ಉದ್ಧಟ ಕೃತ್ಯಗಳಿಂದ ದೂರ ಸರಿಯಿರಿ. ಬನೂ ಖೈನ್‌ಖಾಅ್ ಗೋತ್ರದ ಮುಂದಾಳುಗಳು ತಮ್ಮ ವಿಷಾದವನ್ನು ಸೂಚಿಸುವುದಕ್ಕೆ ಬದಲಾಗಿ ಅತ್ಯಂತ ಧಿಕ್ಕಾರದಿಂದ ಉತ್ತರ ನೀಡಿದರು. ಅವರು ಹೇಳಿದರು: ಬದರ್ ಯುದ್ಧದಲ್ಲಿ ಜಯಗಳಿಸಿದ ಕಾರಣದಿಂದ ಅಹಂಭಾವಿಗಳಾಗಬೇಡಿರಿ. ನಮ್ಮನ್ನು ಎದುರಿಸುವಾಗ ನಿಮಗೆ ತಿಳಿಯುವುದು ಹೋರಾಟಗಾರರು ಹೇಗಿರುತ್ತಾರೆಂದು. ನಿರ್ವಾಹವಿಲ್ಲದೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೆಲವು ಸಹಾಬರ ಜತೆಗೂಡಿ ಬನೂ ಖೈನ್‌ಖಾಅ್ ಗೋತ್ರದ ಕೋಟೆಗಳ ಕಡೆಗೆ ಹೊರಟರು. ಈಗ ಅವರು ತಮ್ಮ ಕಾರ್ಯಗಳಿಗೆ ವಿಷಾದಿಸಲು ಇದು ಕೊನೆಯ ಅವಕಾಶವಾಗಿತ್ತು, ಆದರೆ ಅವರು ಮುಂಭಾಗದಿಂದ ಹೋರಾಡಲು ಸಿದ್ಧರಾಗಿದ್ದರು.

ಹೀಗೆ ಯುದ್ಧವನ್ನು ಘೋಷಿಸಲಾಯಿತು ಮತ್ತು ಇಸ್ಲಾಂ ಮತ್ತು ಯಹೂದಿಯರ ಶಕ್ತಿಗಳು ಪರಸ್ಪರ ವಿರುದ್ಧವಾಗಿ ಹೊರಬಂದವು.

ಆಗಿನ ಸಂವಿಧಾನದ ಪ್ರಕಾರ ಅವರವರ ಕೋಟೆಗಳಲ್ಲಿ ಸುರಕ್ಷಿತವಾಗಿ ಕುಳಿತು, ಮುತ್ತಿಗೆ ಹಾಕಿ ಎದುರಾಳಿಯವರು ಕೋಟೆಗಳಿಗೆ ಮುತ್ತಿಗೆ ಹಾಕುವುದು, ಕಾಲಕಾಲಕ್ಕೆ ಪರಸ್ಪರ ದಾಳಿಗಳು ನಡೆಯುವುದು ಯುದ್ಧದ ವಿಧಾನಗಳಲ್ಲೊಂದಾಗಿತ್ತು. ಮುತ್ತಿಗೆ ಹಾಕಿದ ಸೈನ್ಯವೂ ಕೋಟೆಯನ್ನು ವಶಪಡಿಸಿಕೊಳ್ಳಲು ನಿರಾಶೆಗೊಂಡಿತು ಮತ್ತು ಮುತ್ತಿಗೆಯನ್ನು ತೆಗೆದುಹಾಕಿತು ಮತ್ತು ಇದನ್ನು ಮುತ್ತಿಗೆ ಹಾಕಿದ ಅಥವಾ ಮುತ್ತಿಗೆ ಹಾಕಿದವರ ವಿಜಯವೆಂದು ಪರಿಗಣಿಸಲಾಗುತ್ತಿತ್ತು ಮತ್ತು ಪೈಪೋಟಿಗೆ ನಿಲ್ಲಲಾರದೆ ಕೋಟೆಯ ದ್ವಾರವನ್ನು ತೆರೆದು ವಿಜಯಶಾಲಿಗಳಿಗೆ ಶರಣಾಗುತ್ತಿದ್ದರು. ಈ ಸಂದರ್ಭದಲ್ಲೂ ಬನೂಖೈನಖಾ ಅದೇ ವಿಧಾನವನ್ನು ಅನುಸರಿಸಿ ತಮ್ಮ ಕೋಟೆಗಳಲ್ಲಿ ಬೀಗ ಹಾಕಿ ಕುಳಿತರು. ರಸೂಲುಲ್ಲಾಹ್(ಸ) ಅವರನ್ನು ಮುತ್ತಿಗೆ ಹಾಕಿದರು ಮತ್ತು ಮುತ್ತಿಗೆಯು ಹದಿನೈದು ದಿನಗಳವರೆಗೆ ಮುಂದುವರೆಯಿತು.

ಮುಸ್ಲಿಮರು ಅವರ ಕೋಟೆಗೆ ಮುತ್ತಿಗೆ ಹಾಕಿದರು. ಹದಿನೈದು ದಿನಗಳ ಕಾಲ ಮುತ್ತಿಗೆ ಮುಂದುವರಿಯಿತು. ಬನೂ ಖೈನ್‌ಖಾಅ್ ಗೋತ್ರದ ಅಹಂಕಾರ ಇಳಿದಾಗ ಅವರು ಮುಸ್ಲಿಮರ ಮುಂದೆ ಹೀಗೆ ಶರತ್ತು ಇರಿಸಿದರು. ಆ ಗೋತ್ರದ ಸಂಪತ್ತು ಮುಸ್ಲಿಮರದಾಗುವುದು. ಆದರೆ ಯಹೂದಿಯರ ಜೀವ ಮತ್ತು ಅವರ ಕುಟುಂಬದವರ ಮೇಲೆ ಮುಸ್ಲಿಮರಿಗೆ ಯಾವ ಅಧಿಕಾರವೂ ಇರಬಾರದು.

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಶರತ್ತಿಗೆ ಮಂಜೂರಾತಿ ನೀಡಿದರು. ಹಝ್ರತ್ ಮೂಸಾ ಪ್ರವಾದಿಯ ಶರೀಅತ್ ಪ್ರಕಾರ ಆ ಜನರು ವಧಾರ್ಹರಾಗಿದ್ದರು. ಆದರೆ ಯಹೂದಿಯರು ಮಾಡಿದ ಪ್ರಥಮ ಅಪರಾಧ ಅದಾಗಿತ್ತು. ಅಲ್ಲದೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾರುಣ್ಯ ಭರಿತ ಪ್ರಕೃತಿಯ ಕಾರಣದಿಂದ ಅವರು ಅತ್ಯಂತ ಕಠಿಣ ಶಿಕ್ಷೆ ನೀಡಲು ಸಿದ್ಧರಾಗಲಿಲ್ಲ.

ಅಂತಹ ಸಂದರ್ಭಗಳಲ್ಲಿ, ರಸೂಲುಲ್ಲಾಹ್(ಸ) ಅವರ ಬನೂಖೈನಖಾರವರು ಮದೀನಾವನ್ನು ತೊರೆಯಬೇಕು ಎಂಬ ನಿರ್ಧಾರವಾಗಿತ್ತು. ಈ ಶೀಕ್ಷೆಯು ಅವರ ಅಪರಾಧಕ್ಕೆ ಮತ್ತು ಆ ಕಾಲದ ಪರಿಸ್ಥಿತಿಗಳನ್ನು ಪರಿಗಣಿಸಿದರೆ ಅತ್ಯಂತ ಸೌಮ್ಯವಾದ ಶಿಕ್ಷೆಯಾಗಿತ್ತು ಮತ್ತು ವಾಸ್ತವವಾಗಿ ಇದರಲ್ಲಿ ಸ್ವಯಂ ರಕ್ಷಣೆಯ ಅಂಶವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿತ್ತು. ಇಲ್ಲವಾದರೆ, ಅರೇಬಿಯಾದ ಅಲೆಮಾರಿ ರಾಷ್ಟ್ರಗಳಿಗೆ ವಲಸೆ ಹೋಗುವುದು ದೊಡ್ಡ ವಿಷಯವಾಗಿರಲಿಲ್ಲ. ವಿಶೇಷವಾಗಿ ಯಾವುದಾದರು ಗೋತ್ರಗಳ ಆಸ್ತಿಗಳು, ಭೂಮಿ ಮತ್ತು ಉದ್ಯಾನಗಳ ರೂಪದಲ್ಲಿ ಇಲ್ಲದಿದ್ದಾಗ, ಬನೂಖೈನಖಾದ ಸಂದರ್ಭದಲ್ಲಿ ಇರಲಿಲ್ಲ. ತದನಂತರ ಇಡೀ ಗೋತ್ರದವರನ್ನು ಒಂದು ಸ್ಥಳವನ್ನು ಬಿಟ್ಟು ಮತ್ತೊಂದು ಸ್ಥಳದಲ್ಲಿ ಶಾಂತಿ ಮತ್ತು ಸೌಹಾರ್ದತೆಯಿಂದ ನೆಲೆಸುವ ಅವಕಾಶವನ್ನು ಪಡೆಯಬೇಕು. ಆದ್ದರಿಂದ ಬನೂಖೈನಖರು ಬಹಳ ತೃಪ್ತಿಯಿಂದ ಮದೀನವನ್ನು ತೊರೆದು ಸಿರಿಯಾಕ್ಕೆ ಹೋದರು. ಅವರ ನಿರ್ಗಮನದ ಬಗ್ಗೆ ಅಗತ್ಯ ವ್ಯವಸ್ಥೆಗಳು ಮತ್ತು ಮೇಲ್ವಿಚಾರಣೆಯ ಕೆಲಸವನ್ನು ರಸೂಲುಲ್ಲಾಹ್(ಸ) ಅವರು ತಮ್ಮ ಮಿತ್ರರಲ್ಲಿ ಒಬ್ಬರಾಗಿದ್ದ ಮತ್ತು ಅವರ ಸಹಾಬಿಯಾಗಿದ್ದ ಉಬಾದಾ ಬಿನ್ ಸಾಮಿತ್(ರ) ಅವರಿಗೆ ವಹಿಸಿಕೊಟ್ಟರು. ಆದ್ದರಿಂದ ಉಬಾದಾ ಬಿನ್ ಸಾಮಿತ್(ರ) ಅವರು ಕೆಲವು ಹಂತಗಳವರೆಗೆ ಬನೂಖೈನಖಾ ಅವರೊಂದಿಗೆ ಹೋದರು ಮತ್ತು ನಂತರ ಅವರನ್ನು ಭದ್ರತೆಯೊಂದಿಗೆ ಮುಂದೆ ಕಳುಹಿಸಿದರು ಮತ್ತು ಹಿಂತಿರುಗಿದರು. ಮುಸ್ಲಿಮರ ಕೈಗೆ ಬಂದ ಯುದ್ಧದ ಸಂಪತ್ತಿನಲ್ಲಿ ಯುದ್ಧದ ಆಯುಧಗಳು, ಯುದ್ಧದ ಉಪಕರಣಗಳು, ಮತ್ತು ಕೃಷಿ ಉಪಕರಣಗಳನ್ನು ಮಾತ್ರ ಒಳಗೊಂಡಿತ್ತು.

ಬನೂಖೈನಖಾದ ಬಗ್ಗೆ ಕೆಲವು ವರದಿಗಳಲ್ಲಿ ಈ ಜನರು ತಮ್ಮ ಕೋಟೆಗಳ ದ್ವಾರಗಳನ್ನು ತೆರೆದು ರಸೂಲುಲ್ಲಾಹ್(ಸ.ಅ) ಅವರಿಗೆ ಶರಣಾದಾಗ, ಅವರ ದ್ರೋಹ, ದಂಗೆ ಮತ್ತು ಕಿಡಿಗೇಡಿತನದಿಂದಾಗಿ, ರಸೂಲುಲ್ಲಾಹ್(ಸ) ಅವರು ಅವರನ್ನು ಕೊಲ್ಲಲು ಉದ್ದೇಶಿಸಿದ್ದರು. ಹೋರಾಟಗಾರರನ್ನು ಕೊಲ್ಲಬೇಕಾಗಿತ್ತು ಆದರೆ ಕಪಟವಿಶ್ವಾಸಿಗಳ ನಾಯಕನಾದ ಅಬ್ದುಲ್ಲಾ ಬಿನ್ ಅಬಿ ಬಿನ್ ಸಲೂಲ್ ಅವರ ಶಿಫಾರಸಿನ ಮೇರೆಗೆ ಅವರು(ಸ) ಈ ಉದ್ದೇಶವನ್ನು ತ್ಯಜಿಸಿದರು ಎಂದು ಹೇಳಲಾಗುತ್ತದೆ, ಆದರೆ "(ಇದಕ್ಕೆ ಯಾವುದೇ ಪುರಾವೆಗಳಿಲ್ಲ) ಸಂಶೋಧಕರು ಈ ವರದಿಗಳನ್ನು ಸರಿ ಎಂದು ಪರಿಗಣಿಸುವುದಿಲ್ಲ" ..... ಏಕೆಂದರೆ ಎರಡನೇ ವರದಿಯಲ್ಲಿ ಬನೂ ಖೈನಖಾ ಅವರು ತಮ್ಮ ಮತ್ತು ಅವರ ಕುಟುಂಬಗಳ ಜೀವಗಳನ್ನು ಉಳಿಸುವ ಷರತ್ತಿನ ಮೇಲೆ ದ್ವಾರಗಳನ್ನು ತೆರೆದರು ಎಂದು ಸ್ಪಷ್ಟವಾಗಿ ಉಲ್ಲೇಖಿಸಿದಾಗ, ಈ ಷರತ್ತನ್ನು ಒಪ್ಪಿಕೊಂಡ ನಂತರ ರಸೂಲುಲ್ಲಾಹ್(ಸ) ಅವರು ಈ ಷರತ್ತನ್ನು ಒಪ್ಪಿಕೊಂಡ ನಂತರ ಎರಡನೆಯ ವಿಧಾನವನ್ನು ಅಳವಡಿಸಿಕೊಳ್ಳುತ್ತಿದ್ದರು

ಎಂಬುದು ಸಾಧ್ಯವಿರಲಿಲ್ಲ." ಆದ್ದರಿಂದ, ಇದು ಸಂಪೂರ್ಣವಾಗಿ ತಪ್ಪು." ಆದಾಗ್ಯೂ, ಬನುಖೈನಖಾ ಅವರ ಜೀವಿತಾವಧಿಯ ನಿಬಂಧನೆಯು ಅವರ ನಿಜವಾದ ಶಿಕ್ಷೆಯನ್ನು ಕೊಲೆ ಎಂದು ಅವರು ನಂಬಿದ್ದರು ಎಂದು ತೋರಿಸುತ್ತದೆ, ಆದರೆ ಅವರು ರಸೂಲುಲ್ಲಾಹ್(ಸ) ಅವರೊಂದಿಗೆ ಒಪ್ಪಿಕೊಂಡರು. ಅವರು ರಸೂಲುಲ್ಲಾಹ್(ಸ) ಅವರ ಕರುಣೆಯನ್ನು ಹುಡುಕುತ್ತಿದ್ದರು ಮತ್ತು ಕೊಲೆಗೆ ಶಿಕ್ಷೆಯಾಗುವುದಿಲ್ಲ ಎಂಬ ಈ ವಾಗ್ದಾನನ್ನು ಪಡೆದುಕೊಂಡ ನಂತರ ಅವರ ಕೋಟೆಯ ದ್ವಾರವನ್ನು ತೆರೆಯಲು ಬಯಸಿದ್ದರು, ಆದರೆ ರಸೂಲುಲ್ಲಾಹ್(ಸ) ಅವರು ತಮ್ಮ ಕರುಣಾಮಯಿ ಸ್ವಭಾವದಿಂದ ಅವರನ್ನು ಕ್ಷಮಿಸಿದರು, ಆದರೆ ಅಲ್ಲಾಹನ ದೃಷ್ಟಿಯಲ್ಲಿ ಈ ಜನರು ತಮ್ಮ ದುಷ್ಕೃತ್ಯಗಳು ಮತ್ತು ಅಪರಾಧಗಳಿಂದಾಗಿ ಈ ಪ್ರಪಂಚದ ಪರದೆಯ ಮೇಲೆ ಜೀವಂತವಾಗಿ ಬಿಡಲು ಯೋಗ್ಯರಲ್ಲ ಎಂದು ತೋರುತ್ತದೆ. ಆದುದರಿಂದ, ಈ ಜನರು ವಲಸೆ ಹೋದ ಸ್ಥಳದಲ್ಲಿ, ಅವರು ಅನಾರೋಗ್ಯಕ್ಕೆ ಒಳಗಾಗುವ ಮೊದಲು ಒಂದು ವರ್ಷವೂ ಕಳೆದಿಲ್ಲ, ಇಡೀ ಗೋತ್ರದವರು ಇದಕ್ಕೆ ಬಲಿಯಾಗಿ ಮರಣ ಹೊಂದಿದರು ಎಂದು ವರದಿಯಾಗಿದೆ."

(ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ), ಪುಟ-457-461)

ಹಝ್ರತ್ ಹಮ್‌ಝ(ರ) ಉಹುದ್ ಯುದ್ಧದಲ್ಲಿ ಶಹೀದರಾದರು. ಅದಕ್ಕೆ ಮೊದಲೇ ಅಲ್ಲಾಹನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸ್ವಪ್ನ ಮೂಲಕ ಅದರ ಬಗ್ಗೆ ತಿಳಿಸಿದ್ದನು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಸ್ವಪ್ನದಲ್ಲಿ ತಾನು ಒಂದು ಟಗರನ್ನು ಬೆನ್ನಟ್ಟುವುದಾಗಿ ಮತ್ತು ಅದನ್ನು ವಧಿಸುವುದಾಗಿ ಕಂಡರು. ಅಲ್ಲದೆ ತನ್ನ ಖಡ್ಗದ ತುದಿ ಮುರಿದು ಹೋದುದಾಗಿ ಸಹ ಸ್ವಪ್ನದಲ್ಲಿ ಕಂಡರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಟಗರನ್ನು ವಧಿಸಿದುದರ ವ್ಯಾಖ್ಯಾನ ಹೀಗೆ ಮಾಡಿದರು. ಶತ್ರುಗಳ ಸೇನಾ ನಾಯಕನನ್ನು ವಧಿಸುವೆನು. ಖಡ್ಗದ ತುದಿ ಮುರಿದುದರ ವ್ಯಾಖ್ಯಾನವಾಗಿ ಹೀಗೆ ಹೇಳಿದರು: ಈ ಯುದ್ಧದಲ್ಲಿ ನನ್ನ ನಿಕಟ ಸಂಬಂಧಿಯಾದ ವ್ಯಕ್ತಿ ಶಹೀದ್ ಆಗುವರು. ಆ ಯುದ್ಧದಲ್ಲಿ ಹಝ್ರತ್ ಹಮ್‌ಝ(ರ) ಶಹೀದರಾದರು. ಬಹುದೇವಾರಾಧಕರ ಸೈನ್ಯದ ಪತಾಕೆ ಹಿಡಿದು ಕೊಂಡ ತಲ್‌ಹನನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆ ಯುದ್ಧದಲ್ಲಿ ವಧಿಸಿದರು. (ಮುಸ್ತದ್ರಿಕ್ ಅಲಸ್ಸಹೀಹೈನ್ ಲಿಲ್‌ಹಾಕಿಮ್, ಭಾಗ-5, ಪುಟ-1834, ಮಾರಿಫತಿಸ್ಸಹಾಬ, ಹದೀಸ್-4896, ನಿಝಾರುಲ್ ಬಾಝ್ ರಿಯಾಝ್)

ಹಝ್ರತ್ ಹಮ್‌ಝ(ರ) ಶಹೀದರಾದಾಗ ಅವರ ಮೃತ ಶರೀರಕ್ಕೆ ಅವಮಾನ ಮಾಡಲಾಗಿತ್ತು. ಶತ್ರುಗಳು ಅವರ ಮೂಗು ಕಿವಿಗಳನ್ನು ಕತ್ತರಿಸಿದ್ದರು. ಹೊಟ್ಟೆಯನ್ನು ಸೀಳಲಾಗಿತ್ತು. ಈ ರೀತಿ ಅವರ ರೂಪವನ್ನು ಬಿಗಡಾಯಿಸಲಾಗಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೃತ ಶರೀರದ ಆ ಸ್ಥಿತಿಯನ್ನು ಕಂಡಾಗ ಬಹಳ ದುಃಖಿತರಾದರು. ಅವರು ಆಣೆ ಹಾಕಿ ಹೇಳಿದರು ಖುರೈಶ್‌ಗಳ ಮೂವತ್ತು ಜನರ (ಇನ್ನೊಂದು ವರದಿ ಪ್ರಕಾರ ಎಪ್ಪತ್ತು ಜನರ) ಮೃತ ಶರೀರಗಳನ್ನು ಅವಮಾನಿಸುವೆನು. ಆಗ ಪವಿತ್ರ ಖುರ್‌ಆನಿನ ಈ ವಚನ ಅವತೀರ್ಣಗೊಂಡಿತು. **ವಇನ್ ಆಖುಬ್ತುಮ್ ಫಆಖಿಬೂ ಬಿಮಿಸ್ಲಿ ಮಾ ಊಖಿಬ್ತುಮ್ ಬಿಹೀ ವ ಲಿನ್ ಸಬರ್‌ತುಮ್ ಲಹುವ ಖೈರುಲ್ಲಿಸ್ಸಾಬಿರೀನ್** (ಅನ್ನಹ್ಲ್: 127) ಅಂದರೆ ನೀವು ಶಿಕ್ಷೆ ನೀಡುವುದಾದರೆ ನಿಮ್ಮ ವಿರುದ್ಧ ಮಾಡಿದ ಅಪರಾಧಕ್ಕೆ ಅನುಸಾರವಾಗಿ ಮಾತ್ರ ಶಿಕ್ಷೆ ನೀಡಿರಿ. ಆದರೆ ನೀವು ಸಹನೆ ದೋರುವುದಾದರೆ ಅದು ಉತ್ತಮವಾಗಿದೆ. ಈ ವಚನ ಅವತೀರ್ಣವಾದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: "ನಾವು ಸಹನೆ ದೋರುವೆವು" ಅನಂತರ ಅವರು ಆಣೆ ಹಾಕಿ ಹೇಳಿದುದಕ್ಕೆ ಪರಿಹಾರ ನೀಡಿದರು.

(ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್‌ಹಾಬ್, ಭಾಗ-1, ಪುಟ-426, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಇಬ್ನ್ ಅಬ್ಬಾಸ್(ರ) ಅವರು ವರದಿ ಮಾಡುತ್ತಾರರೆ ರಸೂಲುಲ್ಲಾಹ್(ಸ) ಹೇಳಿದರು: ನಿನ್ನೆ ರಾತ್ರಿ ನಾನು ಸ್ವರ್ಗವನ್ನು ಪ್ರವೇಶಿಸಿದಾಗ, ಅವರು ಈ ದೃಷ್ಯವನ್ನು ನೋಡಿದರು: ಜಅ್‌ಫರ್ ದೇವದೂತರೊಂದಿಗೆ ಹಾರುತ್ತಿರುವುದನ್ನು ನಾನು ನೋಡಿದೆ. ಅದೇ ಸಂದರ್ಭದಲ್ಲಿ ಹಮ್‌ಝ(ರ) ಸಿಂಹಾಸನದ ಮೇಲೆ ವಿಶ್ರಾಂತಿಯಲ್ಲಿ ಕಿಳಿತಿದ್ದರು. (ಮುಸ್ತದ್ರಿಕ್ ಅಲಸ್ಸಹೀಹೈನ್ ಲಿಲ್‌ಹಾಕಿಮ್, ಭಾಗ-5, ಪುಟ-1832, ಮಾರಿಫತಿಸ್ಸಹಾಬ, ಹದಿಸ್-490, ನಝಾರುಲ್ ಬಾಝ್ ರಿಯಾಝ್)

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ರವರು ಉಹುದ್ ದಿನದಂದು ಹಝ್ರತ್ ಹಮ್‌ಝ(ರ) ಅವರು ಹಾದುಹೋದರು. ಅವರ ಮೂಗು ಮತ್ತು ಕಿವಿಗಳನ್ನು ಕತ್ತರಿಸಿ ಮುಸಲ್ಲ ಮಾಡಲಾಗಿತ್ತು. ಅವರು ಹೇಳಿದರು, "ನನಗೆ ಸೂಫಿಯಾಳ ಸಂಕಟ ಹಾಗೂ ದುಃಖದ ಬಗ್ಗೆ ಯೋಚಿನೆ ಇರುತ್ತಿರದಿದ್ದರೆ, ನಾನು ಅವರನ್ನು ಪಕ್ಷಿಗಳು ಮತ್ತು ಮೃಗಗಳ ಹೊಟ್ಟೆಯಿಂದ ಎತ್ತುವವರೆಗೂ ಒಂಟಿಯಾಗಿ ಬಿಡುತ್ತಿದ್ದೆ. ತದನಂತರ ಅವರಿಗೆ ಒಂದು ಚಾದರದಲ್ಲಿ ಕಫನ್ ನೀಡಲಾಯಿತು.

(ಮುಸ್ತದ್ರಿಕ್ ಅಲಸ್ಸಹೀಹೈನ್ ಲಿಲ್‌ಹಾಕಿಮ್, ಭಾಗ-5, ಪುಟ-1831, ಮಾರಿಫತಿಸ್ಸಹಾಬ, ಹದೀಸ್-4887, ನಝಾರುಲ್ ಬಾಝ್ ರಿಯಾಝ್)

ಹಝ್ರತ್ ಹಮ್‌ಝ(ರ) ಅವರ ಹುತಾತ್ಮತೆ ಮತ್ತು ಅವರ ಮೃತ ದೇಹವನ್ನು ನೋಡಿದ ರಸೂಲುಲ್ಲಾಹ್(ಸ) ಅವರು ತಮ್ಮ ಭಾವನೆಗಳ ಅಭಿವ್ಯಕ್ತಿ ಮತ್ತು ಅವರು ತಾಳ್ಮೆಯನ್ನು ತೋರಿಸುವುದು ಮಾತ್ರವಲ್ಲದೆ, ಹಝ್ರತ್ ಹಮ್‌ಝ(ರ) ಅವರ ಸಹೋದರಿ ಮತ್ತು ಅವರ ತಂದೆಯ ಸಹೋದರಿಯನ್ನು ತಾಳ್ಮೆ ವಹಿಸಲು ಹೇಳಿದರು. ಇದನ್ನು ಮೊದಲೇ ಉಲ್ಲೇಖಿಸಲಾಗಿದೆ. ತದನಂತರ ಶೋಕತಪ್ತ ಅನ್ಸಾರಿ ಮಹಿಳೆಯರನ್ನು ಶೋಕದಿಂದ ನಿಲ್ಲಿಸಿದ ಘಟನೆಯೂ ನಡೆದಿದೆ. ಈ ಘಟನೆಯನ್ನು ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ಅವರು ಖಲೀಫರಾಗುವ ಮೊದಲ ಜಲ್ಸ ಸಾಲಾನದಲ್ಲಿ ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು: ಇದರಿಂದ ರಸೂಲುಲ್ಲಾಹ್(ಸ) ಅವರ ಮಹಿಮೆಯ ಬಗ್ಗೆ ಅರಿವಾಗುತ್ತದೆ. ಏನೇ ಇರಲಿ ಈ ಘಟನೆಯನ್ನು ಇಲ್ಲಿ ಹೇಳುವುದು ಸೂಕ್ತವೆನಿಸುತ್ತದೆ. ಮೊದಲನೆಯದಾಗಿ, ಇದನ್ನು ಹದೀಸ್‌ಗಳಿಗೆ ಸಂಬಂಧಿಸಿದಂತೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಅವರು ಹೇಳುತ್ತಾರೆ: ರಸೂಲುಲ್ಲಾಹ್(ಸ) ಅವರಿಗೆ ಹಝ್ರತ್ ಹಮ್‌ಝ(ರ) ರವರ ಮೇಲೆ ಹೊಂದಿದ್ದ ಪ್ರೀತಿಯನ್ನು ಉಹುದ್ ಯುದ್ಧದ ಸಂಜೆ ಹಝ್ರತ್ ಹಮ್‌ಝ(ರ) ರವರ ಶವದ ಮೇಲೆ ನಿಂತಾಗ ರಸೂಲುಲ್ಲಾಹ್(ಸ) ಹೇಳಿದ ಮಾತುಗಳಿಂದ ವ್ಯಕ್ತವಾಗುತ್ತದೆ. ಅವರು(ಸ) ಹೇಳಿದರು, ಓ ಹಮ್‌ಝ! ಇವತ್ತು ನನಗಿರುವ ಕೋಪ ಮತ್ತು ನಿಮ್ಮ ಮರಣಶಯ್ಯೆದಲ್ಲಿ ನಿಂತು ಅನುಭವಿಸಿದ ನೋವು ಮುಂದೆ ಯಾವತ್ತೂ ಸರ್ವಶಕ್ತನಾದ ಅಲ್ಲಾಹನು ನನಗೆ ಅಂತಹ ನೋವನ್ನು ತೋರಿಸುವುದಿಲ್ಲ. ಆ ಸಮಯದಲ್ಲಿ ರಸೂಲುಲ್ಲಾಹ್(ಸ) ಅವರ ತಂದೆಯ ಸಹೋದರಿಯಾದ ಹಝ್ರತ್ ಸಫಿಯ್ಯ(ರ), ಹಝ್ರತ್ ಹಮ್‌ಝ(ರ)ರವರ ಸಹೋದರಿಯು ಸಹ ಈ ಸುದ್ದಿಯನ್ನು ಆಲಿಸಿ ಬಂದರು. ಅವರ ತಾಳ್ಮೆ ಕಳೆದುಹೋಗುವುದಿಲ್ಲ ಎಂದು ಭಯಭೀತರಾಗಿ ರಸೂಲುಲ್ಲಾಹ್(ಸ) ಅವರು ಮೊದಲು ಶವವನ್ನು ನೋಡಲು ಬಿಡಲಿಲ್ಲ, ಆದರೆ ಅವರು ತಾಳ್ಮೆ ವಹಿಸುವುದಾಗಿ ಭರವಸೆ ನೀಡಿದಾಗ. ಅವರನ್ನು ಶವ ನೋಡಲು ಅನುಮತಿ ನೀಡಿದರು. ಆದಾಗ್ಯೂ, ಅವರು ಹಝ್ರತ್ ಹಮ್‌ಝ(ರ) ಅವರು ಮೃತರಾಗಿ ಬಿದ್ದ ಯುದ್ಧದ ಮೈದಾನದ ಸ್ಥಳದಲ್ಲಿ ಆಗಮಿಸಿದರು. ರಸೂಲುಲ್ಲಾಹ್(ಸ) ರವರು ತಮ್ಮ ಪ್ರೀತಿಯ ಸಹೋದರ, ದೇವರ ಸಿಂಹ ಮತ್ತು ಪ್ರವಾದಿಯ ಸಿಂಹರಾದ ಹಮ್‌ಝ(ರ)ರವರ ದೇಹವನ್ನು ನೋಡಿದರು. ಹಿಂಸೆ ನೀಡುವವರು ಅವರ ಎದೆಯನ್ನು ಹರಿದು ಯಕೃತ್ತನ್ನು ಹೊರತೆಗೆದ ಸ್ಥಿತಿಯಲ್ಲಿ ಅವರ ಮುಂದೆ ಮಲಗಿದ್ದರು. ಮತ್ತು ಮುಖದ ವೈಶಿಷ್ಟಗಳನ್ನು ಕೆಟ್ಟದಾಗಿ ವಿರೂಪಗೊಳಿಸಿದ್ದರು. ನೋಡುವವರ ಎದೆಯು ದುಃಖದಿಂದ ನರಳುತ್ತಿತ್ತು. ಸಫಿಯಾ ತನ್ನ ತಾಳ್ಮೆಯ ಭರವಸೆಯನ್ನು ಉಳಿಸಿಕೊಂಡಳು ಮತ್ತು ಅವಳ ಬಾಯಿಂದ ಒಂದೇ ಒಂದು ಅಸಹನೆಯ ಪದವನ್ನು ಬಿಡಲಿಲ್ಲ, ಆದರೆ ಕಣ್ಣೀರನ್ನು ಯಾರು ನಿಯಂತ್ರಿಸುತ್ತಾರೆ. **ಇನ್ನಾಲಿಲ್ಲಾಹ್** ಎಂದು ಓದುತ್ತಾ ಅಳುತ್ತಾ ಕುಳಿತಳು. ದುಃಖದ ಮೂಕ ಕಣ್ಣುಗಳಲ್ಲಿ ನೀರು ತುಂಬಿ ತುಳುಕುತ್ತಿತ್ತು. ಅವರ ಪಕ್ಕದಲ್ಲಿ ರಸೂಲುಲ್ಲಾಹ್(ಸ) ಅವರು ಸಹ ಕುಳಿತಿದ್ದರು ಎಂದು ವರದಿಗಾರರು ಹೇಳುತ್ತಾರೆ. ಅವರ(ಸ) ಕಣ್ಣುಗಳಿಂದ ತಡೆಯಲಾಗದ ಕಣ್ಣೀರು ಕೂಡ ಹರಿಯಿತು. ಹಝ್ರತ್ ಸಫಿಯಾ(ರ) ಅವರ ಕಣ್ಣೀರು ಮಂದವಾದಾಗ, ರಸೂಲುಲ್ಲಾಹ್(ಸ) ಅವರ ಕಣ್ಣೀರು ಕೂಡ ಮಂದವಾಯಿತು. ಹಝ್ರತ್ ಸಫಿಯಾ(ರ) ಅವರ ಕಣ್ಣೀರು ತ್ವರಿತವಾದಾಗ, ರಸೂಲುಲ್ಲಾಹ್(ಸ) ಅವರ ಕಣ್ಣೀರು ಕೂಡ ತ್ವರಿತವಾಗುತ್ತಿತ್ತು. ಈ ಸ್ಥಿತಿಯಲ್ಲಿ ಕೆಲವು ನಿಮಿಷಗಳು ಕಳೆದವು. ಆದ್ದರಿಂದ, ರಸೂಲುಲ್ಲಾಹ್(ಸ) ಮತ್ತು ಅಹ್ಲ್ ಅಲ್-ಬೈತ್ ಅವರ ಪ್ರಲಾಪವು ಈ ಕೆಲವು ಮೌನ ಕಣ್ಣೀರನ್ನು ಹೊರತುಪಡಿಸಿ ಬೇರೇನೂ ಇರಲಿಲ್ಲ, ಮತ್ತು ಇದು ರಸೂಲುಲ್ಲಾಹ್(ಸ) ಅವರ ಸುನ್ನತ್ ಆಗಿದೆ.

ಇಡೀ ಮದೀನವೇ ಶೋಕದಲ್ಲಿ ಮುಳುಗಿ ಉಹುದ್ ಹುತಾತ್ಮರ ಸ್ಮರಣಾರ್ಥ ಪ್ರತಿ ಮನೆಯಿಂದ ಶೋಕ ದನಿ ಮೊಳಗುತ್ತಿರುವ ಸನ್ನಿವೇಶದಲ್ಲಿ ಅವರು(ಸ) ಮದೀನಕ್ಕೆ ಪ್ರವೇಶಿಸಿದರು. ಅದನ್ನು ಕೇಳಿದ ಪ್ರವಾದಿಯವರು ಬಹಳ ನೋವಿನಿಂದ ಹೇಳಿದರು. ಹಮ್‌ಝಾಗೆ ಅಳಲು ಯಾರೂ ಇಲ್ಲವೇ. ಹೌದು, ಹಮ್‌ಝಾಗಾಗಿ ಅಳಲು ಯಾರಿರಬಹುದು, ಏಕೆಂದರೆ ಅಹ್ಲ್-ಬೈತ್ ಅವರಿಗೆ ಹಗಲಿರಳು ತಾಳ್ಮೆಯಿಂದಿರಲು ಸಲಹೆ ನೀಡುತ್ತಿರುತ್ತಾರೆ. ಪ್ರವಾದಿಯವರ ಈ ನೋವಿನ ವಾಕ್ಯವನ್ನು ಕೇಳಿದ ಅನ್ಸಾರರಲ್ಲಿ ಕೆಲವರು ಸಂಕಟದಿಂದ ಎದ್ದು ತಮ್ಮ ಮನೆಗಳ ಕಡೆಗೆ ಓಡಿಹೋದರು ಮತ್ತು ಹಮ್‌ಝಗಾಗಿ ಶೋಕಿಸುವಂತೆ ತಮ್ಮ ಪತ್ನಿಯರಿಗೆ ಆದೇಶಿಸಿದರು. ಇದ್ದಕ್ಕಿದ್ದಂತೆ, ಎಲ್ಲಾ ಕಡೆಯಿಂದ ಹಮ್‌ಝಗಾಗಿ ರೋದನದ ಶಬ್ದವು ಎದ್ದಿತು ಮತ್ತು ಪ್ರತಿ ಮನೆಯು ಹಮ್‌ಝ(ರ) ಅವರ ಶೋಕಾಚರಣೆಯ ಸ್ಥಳವಾಯಿತು. ರೋಧಿಸುತ್ತಾ ಕಣ್ಣೀರು ಸುರಿಸುತ್ತಿರುವಾಗ ಅನ್ಸಾರ್‌ರ ಮಹಿಳೆಯರು ಕೂಡ ರಸೂಲುಲ್ಲಾಹ್(ಸ) ಅವರ ಬಳಿ ಒಟ್ಟುಗೂಡಿದರು. ಅನ್‌ಸಾರ್ ಮಹಿಳೆಯರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹಝ್ರತ್ ಹಮ್‌ಝರ ಗುಣಗಾನ ಮಾಡುತ್ತಾ ರೋಧಿಸುತ್ತಾ ಬಂದಾಗ ಪೈಗಂಬರ್(ಸ)

ಅವರಿಗೆ ಕೃತಜ್ಞತೆ ಅರ್ಪಿಸಿ ಸತ್ತವರ ಮೇಲೆ ರೋಧಿಸಲು ಅನುಮತಿ ಇಲ್ಲ ಎಂದು ತಡೆದರು. ಆದ್ದರಿಂದ, ಆ ದಿನದಿಂದ ಶೋಕಾಚರಣೆಯ ಪದ್ಧತಿಯು ತ್ಯಜಿಸಲಾಯಿತು. ರಸೂಲುಲ್ಲಾಹ್(ಸ) ಅವರು ಪಾದದಲ್ಲಿ ನಮ್ಮ ಜೀವಗಳಿರಲಿ. ಅವರು ಹೇಗೆ ನಮಗೆ ಧರ್ಮವನ್ನು ಕಲಿಸಲು ಆಧ್ಯಾತ್ಮಿಕತೆಯ ಆಕಾಶದಿಂದ ಇಳಿದು ಬಂದ ಮಹಾನ್ ನೀತಿಬೋಧಕರಾಗಿದ್ದಾರೆ. ಈ ಸಲಹೆಗಾರ ಎಷ್ಟು ಅಂತರ್‌ದೃಷ್ಟಿವುಳ್ಳ ಮತ್ತು ಒಳನೋಟವುಳ್ಳವನಾಗಿದ್ದನು, ಅವರ ದೃಷ್ಟಿ ಮಾನವ ಸ್ವಭಾವದ ಆಳಕ್ಕೆ ತೂರಿಕೊಂಡಿತು. ಆ ಸಮಯದಲ್ಲಿ ರಸೂಲುಲ್ಲಾಹ್(ಸ) ಅವರು ಅನ್ಸಾರ್ ಮಹಿಳೆಯರನ್ನು ತಮ್ಮ ಹುತಾತ್ಮರನ್ನು ಶೋಕಿಸುತ್ತಿರುವಾಗ ಶೋಕಿಸುವುದನ್ನು ನಿಷೇಧಿಸಿದ್ದರೆ, ಬಹುಶಃ ಕೆಲವು ಹೃದಯಗಳು ಈ ಕಷ್ಟದಿಂದ ಹೊರಬಂದು ಈ ತಾಳ್ಮೆಗೆ ಪರೀಕ್ಷೆಯಾಗಬಹುದು. ಮತ್ತು ಅವರಿಗೆ ಈ ತಾಳ್ಮೆಯು ಸಹ ತಾಳ್ಮೆಯಾಗಿತ್ತು, ಆದರೆ ನೋಡಿ! ರಸೂಲುಲ್ಲಾಹ್(ಸ) ಅವರು ಮೊದಲು ತನ್ನ ಶೋಕವನ್ನು ತನ್ನ ಚಿಕ್ಕಪ್ಪ ಹಮ್ಜ(ರ) ಅವರ ಕಡೆಗೆ ತಿರುಗಿಸಿದನು. ಆಗ ಅಳುವುದನ್ನು ನಿಷೇಧಿಸಿದಾಗ ಚಿಕ್ಕಪ್ಪನ ಅಳಲನ್ನು ನಿಷೇಧಿಸಿದಂತಾಯಿತು.

ಅಲ್ಲಾಹನ ಆಯ್ಕೆಯಾಗಿದೆ ಅಲ್ಲಾಹನ ಆಯ್ಕೆಯಾಗಿದೆ. ನೋಡಿ! ಮಾನವ ಸ್ವಭಾವದ ಸೂಕ್ಷ್ಮತೆಗಳ ಬಗ್ಗೆ ಚೆನ್ನಾಗಿ ತಿಳಿದಿರುವ ಮತ್ತು ತಮ್ಮ ದಾಸರ ಸೂಕ್ಷ್ಮ ಭಾವನೆಗಳನ್ನು ಅವರು ಹೇಗೆ ಪರಿಗಣಿಸುತ್ತಾರೆ ಎಂಬುದನ್ನು ಸರ್ವಶಕ್ತನಾದ ಅಲ್ಲಾಹನು ತನ್ನ ಜೀವಿಗಳಿಗೆ ಯಾವ ರೀತಿಯ ಸಲಹೆಗಾರನನ್ನು ಕಳುಹಿಸಿದನು. (ಖುತ್ಬಾತೆ ತಾಹಿರ್, ತಖಾರೀರ್ ಜಲ್ಸ ಸಾಲಾನ ಖಬ್ಲ್ ಅಝ್ ಕಿಲಾಫತ್, ಹಝ್‌ರತ್ ಖಲೀಫತುಲ್ ಮಸೀಹ್ ರಾಬಿ(ರ), ಪುಟ-364-366, ತಾಹಿರ್ ಫೌಂಡೇಷನ್ 2006)

ಹಝ್‌ರತ್ ಹಮ್‌ಝು(ರ) ಅವರ ಪ್ರಸ್ತಾಪದಲ್ಲಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಈ ಘಟನೆಯನ್ನು ಸಹ ಉಲ್ಲೇಖಿಸಲಾಗಿದೆ. ಅದು ಇಲ್ಲಿಗೆ ಮುಕ್ತಾಯವಾಯಿತು.

ನಾಡಿದ್ದು ಹೊಸ ವರ್ಷ ಇನ್‌ಶಾ ಅಲ್ಲಾಹ್ ಪ್ರಾರಂಭವಾಗುವುದು. ನೀವು ಪ್ರಾರ್ಥಿಸಿರಿ. ಹೊಸವರ್ಷ ಅನುಗ್ರಹಗಳನ್ನು ತೆಗೆದುಕೊಂಡು ಬಂದು ಆ ಅನುಗ್ರಹಗಳಿಂದ ನಮಗೆ ಸಹ ನೀಡುವಂತಾಗಲಿ. ಜಮಾಅತ್‌ಗೆ ಸಹ ಅದು ಎಲ್ಲ ರೀತಿಗಳಲ್ಲೂ ಅನುಗ್ರಹದಾಯಕವಾಗಲಿ. ಶತ್ರುಗಳ ಎಲ್ಲ ಯೋಜನೆಗಳನ್ನು ಅಲ್ಲಾಹನು ಮಣ್ಣುಪಾಲು ಮಾಡುವಂತಾಗಲಿ. ಲೋಕದಲ್ಲಿ ಹರಡಿರುವ ಜಮಾಅತ್‌ಗಳಿಗೆ ಮೊದಲಿಗಿಂತ ಮಿಗಿಲಾಗಿ ತಮ್ಮ ಸ್ಥಾಪನೆಯ ಉದ್ದೇಶಗಳನ್ನು ಈಡೇರಿಸಲು ಅಲ್ಲಾಹನು ಭಾಗ್ಯ ದಯಪಾಲಿಸಲಿ.

ಲೋಕದ ಬಗ್ಗೆಯೂ ಪ್ರಾರ್ಥಿಸಿರಿ. ಲೋಕವನ್ನು ಅಲ್ಲಾಹನು ಯುದ್ಧಗಳಿಂದ ರಕ್ಷಿಸಲಿ. ಲೋಕದ ಸ್ಥಿತಿ ಅಪಾಯದಿಂದ ಅಪಾಯದ ಕಡೆಗೆ ಸಾಗುತ್ತಿದೆ. ವಿನಾಶ ಬಾಯಿತೆರೆದು ನಿಂತಿದೆ. ಪ್ರತಿಯೊಬ್ಬರು ತಮ್ಮ ಸ್ವಾರ್ಥವನ್ನು ಈಡೇರಿಸಲು ಬಯಸುತ್ತಾರೆ. ಅಲ್ಲಾಹನು ಕಾರುಣ್ಯದೋರಲಿ.

ದೌರ್ಜನ್ಯ ಪೀಡಿತರಾದ ನಮ್ಮ ಸಹೋದರರಿಗೋಸ್ಕರ ಸಹ ಬಹಳ ಪ್ರಾರ್ಥಿಸಿರಿ. ಮುಂದಿನ ವರ್ಷ ಎಲ್ಲ ರೀತಿಗಳ ದೌರ್ಜನ್ಯಗಳಿಂದ ಜಮಾಅತನ್ನು ಅಲ್ಲಾಹನು ಸಂರಕ್ಷಿಸುವವನಾಗಲಿ - ಆಮೀನ್.

...*...*...*...

*(ಪುಟ ಸಂಖ್ಯೆ 02ರ ಉಳಿದ ಭಾಗ)*

ನೀಡಿದ್ದಾರೆ ಮತ್ತು ಅಲ್ಲಾಹನ ವಿಶೇಷ ಇಲ್‌ಹಾಮ್‌ಗಳ ಅಡಿಯಲ್ಲಿ ಅದನ್ನು ಸ್ಥಾಪಿಸಿದ್ದಾರೆ ಅಂದರೆ ಒಬ್ಬ ಮುಮಿನ್ ವ್ಯಕ್ತಿಯು ಅದರ ಪ್ರಾಮುಖ್ಯತೆ ಮತ್ತು ಶ್ರೇಷ್ಠತೆಯನ್ನು ನಿರಾಕರಿಸಲು ಸಾಧ್ಯವಿಲ್ಲ. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಸ್ಥಾಪಿಸಿದ ಎಲ್ಲಾ ವ್ಯವಸ್ಥೆಗಳು ದೈವಿಕ ಮತ್ತು ದೈವವಾಣಿಯ ವ್ಯವಸ್ಥೆಯಾಗಿದೆ. ಆದರೆ ವಸಿಯ್ಯತ್‌ನ ವ್ಯವಸ್ಥೆಯು ಸರ್ವಶಕ್ತನಾದ ಅಲ್ಲಾಹನ ವಿಶೇಷ ಇಲ್‌ಹಾಮ್ ಮೂಲಕ ಸ್ಥಾಪಿಸಲ್ಪಟ್ಟ ವ್ಯವಸ್ಥೆಯಾಗಿದೆ. ಉಳಿದ ವಿಷಯಗಳು ಸಾಮಾನ್ಯ ಇಲ್‌ಹಾಮ್‌ನ ಅಡಿಯಲ್ಲಿ ಸ್ಥಾಪಿಸಲ್ಪಟ್ಟವುಗಳಾಗಿವೆ, ಆದರೆ ವಸಿಯ್ಯತ್‌ನ ವಿಷಯವು ವಿಶೇಷ ಇಲ್‌ಹಾಮ್‌ನ ಅಡಿಯಲ್ಲಿ ಸ್ಥಾಪಿಸಲ್ಪಟ್ಟಿದೆ. ಮತ್ತು ವಸಿಯ್ಯತ್‌ನ ವಿಷಯವು ಪ್ರಪಂಚದ ಮುಂದೆ ಧರ್ಮಕ್ಕೆ ಆದ್ಯತೆ ನೀಡುವ ಪ್ರಾಯೋಗಿಕ ಪುರಾವೆಯಾಗಿದೆ. ಧರ್ಮಕ್ಕೆ ಪ್ರಪಂಚದ ಮುಂದೆ ಆದ್ಯತೆ ನೀಡುವ ಪ್ರತಿಜ್ಞೆಯು ಒಂದು ಒಪ್ಪಂದವಾಗಿತ್ತು. ಅದರ ಬಗ್ಗೆ ಮೂಮಿನ್ (ನಂಬಿಕೆಯುಳ್ಳವರು) ಏನು ಮಾಡುತ್ತಾರೆ? ಈ ಒಪ್ಪಂದವನ್ನು ಪೂರೈಸಲು ಅನೇಕ ಜನರು ದೊಡ್ಡ ತ್ಯಾಗಗಳನ್ನು ಮಾಡುತ್ತಾರೆ ಮತ್ತು ಕೆಲವರು ಈ ಒಪ್ಪಂದದ ನಂತರ ಮೌನವಾಗಿರುತ್ತಾರೆ. ಪ್ರಪಂಚದ ಮುಂದೆ ಧರ್ಮಕ್ಕೆ ಆದ್ಯತೆ ನೀಡಲು ಬಯಸಿದ ಅನೇಕರು ಇದ್ದಾರೆ, ಆದರೆ ಅವರಿಗೆ ಅದರ ಮಾರ್ಗವನ್ನು ಕಂಡುಹಿಡಿಯಲು ಸಾಧ್ಯವಾಗಲಿಲ್ಲ ಅವರು ಏನು ಮಾಡಬೇಕು? ಎಂದು ಅವರಿಗೆ ತಿಳಿದಿಲ್ಲ. ನಂತರ ಈ ಒಪ್ಪಂದವನ್ನು ಪೂರೈಸಿದ ಹಲವಾರು ಜನರು ಇದ್ದರು ಮತ್ತು ಏನು ಮಾಡಬೇಕೆಂದು ಯೋಚಿಸಿದ ಇಪ್ಪತ್ತು ಮಂದಿ ಇದ್ದರು? ಒಪ್ಪಂದವನ್ನು ಪೂರೈಸಲು ಪ್ರಯತ್ನಿಸುತ್ತಿದ್ದ ಜನರಿಗೆ ಅವರ ಒಪ್ಪಂದವು ಈಡೇರುತ್ತದೆಯೋ ಇಲ್ಲವೋ ಎಂದು ಅರಿವಿರಲಿಲ್ಲ..........

ಆಗ ಸರ್ವಶಕ್ತನಾದ ಅಲ್ಲಾಹನ ಕರುಣೆಯು ಉತ್ಸುಕವಾಯಿತು ಮತ್ತು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮುಖಾಂತರ ಅವರು ತಮ್ಮ ಒಪ್ಪಂದವನ್ನು ಪೂರೈಸಿದ್ದಾರೆಯೇ ಅಥವಾ ಇಲ್ಲವೇ ಎಂದು ತಿಳಿದುಕೊಳ್ಳಲು ಬಯಸುವವರಿಗೆ ಇದು ವಸಿಯ್ಯತ್‌ನ ಮಾರ್ಗವಾಗಿದೆ ಇದನ್ನು ಅನುಸರಿಸುವುದರಿಂದ ಅವರ ಒಪ್ಪಂದವನ್ನು ಪೂರೈಸಬಹುದು ಏಕೆಂದರೆ ವಸಿಯ್ಯತ್‌ನಲ್ಲಿ ಷರತ್ತಿದೆ ಅಂದರೆ:

"ಅಂತಹ ಪರಿಪೂರ್ಣ ಭಕ್ತರನ್ನು ಒಂದೇ ಸ್ಥಳದಲ್ಲಿ ದಫನ್ ಮಾಡಬೇಕೆಂದು ಸರ್ವಶಕ್ತನಾದ ಅಲ್ಲಾಹನು ಉದ್ದೇಶಿಸಿದ್ದಾನೆ

ಆದ್ದರಿಂದ ಭವಿಷ್ಯದ ಪೀಳಿಗೆಗಳು ಒಂದೇ ಸ್ಥಳದಲ್ಲಿ ಅವರನ್ನು ನೋಡುವ ಮೂಲಕ ತಮ್ಮ ನಂಬಿಕೆಯನ್ನು ನವೀಕರಿಸಬಹುದು."

ಹಾಗಾದರೆ ಒಬ್ಬ ವ್ಯಕ್ತಿಯು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ವಿವರಿಸಿದ ಮಾರ್ಗದಲ್ಲಿ ಮಸಿಯ್ಯತ್ ಮಾಡುತ್ತಾನೆ ಮತ್ತು ಅದಕ್ಕೆ ಬದ್ಧನಾಗಿರುತ್ತಾನೆ ಆದರೆ ಪರಿಪೂರ್ಣ ನಂಬಿಕೆಯನ್ನು ಹೊಂದಿಲ್ಲ ಎಂದರೆ ಅದು ಹೇಗೆ ಸಾಧ್ಯ? ಆದ್ದರಿಂದ ತಮ್ಮ ಮನಃಪೂರ್ವಕವಾಗಿ ಅತೃಪ್ತಿ ಹೊಂದಿದ್ದ ಜನರು ಮತ್ತು ತಮ್ಮ ಒಪ್ಪಂದವನ್ನು ಪೂರೈಸಲಾಗಿದೆಯೇ ಅಥವಾ ಇಲ್ಲವೇ ಎಂದು ತಿಳಿದಿಲ್ಲದ ಕಾರಣ ಆತಂಕಕ್ಕೊಳಗಾದ ಜನರು, ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಸರ್ವಶಕ್ತನಾದ ಅಲ್ಲಾಹನ ಇಲ್‌ಹಾಮ್‌ನ ಅಡಿಯಲ್ಲಿ ಅವರು ವಸಿಯ್ಯತ್ ಮಾಡಲಿ ಎಂದು ಮುಂದೆ ಇರಿಸಿದ್ದಾರೆ. (ಖುತ್ಬಾತೆ ಮಹ್ಮೂದ್, ಸಂಪುಟ-11, ಪುಟ-370)

**ವಸಿಯ್ಯತ್ ಮಾಡುವ ವ್ಯಕ್ತಿಯನ್ನು ಅಲ್ಲಾಹನು ಮುತ್ತಖಿಯನ್ನಾಗಿ ಮಾಡುತ್ತಾನೆ**

ಮೂರನೆಯ ಆಜ್ಞೆಯ ಸಮಸ್ಯೆ ಇದೆ, ಅಲ್ಲಾಹನು ನಮಗೆ ಅತ್ಯಂತ ಮಹತ್ವಪೂರ್ಣವಾದೊಂದು ವಸ್ತುವನ್ನು ನೀಡಿರುವನು. ಅದರ ಮೂಲಕ ಸ್ವರ್ಗವನ್ನು ನಮಗೆ ಹತ್ತಿರವಾಗುವಂತೆ ಮಾಡಿರುವನು. ಯಾರ ಹೃದಯಗಳಲ್ಲಿ ವಿಶ್ವಾಸ ಮತ್ತು ನಿಷ್ಠೆ ಇದೆಯೋ ಆದರೆ ವಸಿಯ್ಯತ್ ಬಗ್ಗೆ ಉದಾಸೀನರಾಗಿರುವರೋ ನಾನು ಅವರ ಗಮನವನ್ನು ಅದರ ಕಡೆಗೆ ಹರಿಸಲು ಬಯಸುತ್ತೇನೆ. ನೀವು ವಸಿಯ್ಯತ್ ಕಡೆಗೆ ಬೇಗನೆ ಸಾಗಿರಿ. ಈ ಉದಾಸೀನತೆಯ ಕಾರಣದಿಂದ ಕಂಡು ಬರುವುದೇನೆಂದರೆ ಕೆಲವು ದೊಡ್ಡ ದೊಡ್ಡ ನಿಷ್ಠಾವಂತರು ವಸಿಯ್ಯತ್ ಮಾಡದೆ ಮೃತರಾಗುತ್ತಾರೆ. ಅವರು ಇಂದು ನಾಳೆ ಎಂದು ಹೇಳುತ್ತಾ ಇರುವಾಗ ಮೃತ್ಯು ಬಂದು ಬಿಡುತ್ತದೆ. ಆಗ ಹೃದಯ ನೋವನ್ನು ಅನುಭವಿಸುತ್ತದೆ. ಖೇದ ಉಂಟಾಗುತ್ತದೆ. "ಈ ಜನರು ಸಹ ನಿಷ್ಠಾವಂತರ ಜೊತೆ ದಫನ್ ಆಗುತ್ತಿದ್ದರೆ ಚೆನ್ನಾಗಿತ್ತು." ಎಂದು ಆಶಿಸುತ್ತೇವೆ. ಆದರೆ ಅವರನ್ನು ಹಾಗೆ ದಫನ್ ಮಾಡಲು ಸಾಧ್ಯವಾಗುವುದಿಲ್ಲ. ಅವರು ನಿಷ್ಠಾವಂತರಾಗಿದ್ದರು; ಅವರು ತಮ್ಮ ನಿಷ್ಠಾವಂತರ ಜೊತೆಗೆ ದಫನ್ ಆಗಲು ಯೋಗ್ಯತೆ ಹೊಂದಿದ್ದರು; ಆದರೆ ಮೃತರ ಒಂದಿಷ್ಟು ನಿರ್ಲಕ್ಷ್ಯತೆ ಮತ್ತು ಒಂದಿಷ್ಟು ಉದಾಸೀನತೆ ಅದಕ್ಕೆ ಅಡ್ಡಿಯಾಯಿತು ಎಂದು ಅವರು ಮರಣದ ಬಗ್ಗೆ ಎಲ್ಲರ ಹೃದಯ ನೊಂದುಕೊಳ್ಳುತ್ತವೆ. ನಮ್ಮ ಜಮಾಅತಿನ ಬೇರೆ ಕೆಲವರು ತಮ್ಮ ಆದಾಯದ ಹತ್ತರಲ್ಲಿ ಒಂದಂಶಕ್ಕಿಂತ ಹೆಚ್ಚಿಗೆ ಚಂದಾ ಕೊಡುತ್ತಾರೆ. ಆದರೆ ಅವರು ವಸಿಯ್ಯತ್ ಮಾಡುವುದಿಲ್ಲ. ಇಂತಹವರು ಸಹ ವಸಿಯ್ಯತ್ ಮಾಡಬೇಕು. ಇಂತಹವರಿಗೆ ವಸಿಯ್ಯತ್ ಮಾಡುವುದು ಕಷ್ಟದಾಯಕವಲ್ಲ. ಕೆಲವರು ರೂಪಾಯಿಯಲ್ಲಿ ಐದು ಪೈಸೆ ಅಥವಾ ಆರು ಪೈಸೆ ಚಂದಾ ಕೊಡುತ್ತಾ ಇರುತ್ತಾರೆ. ಇಂತಹ ಜನರನ್ನು ಸ್ವಲ್ಪ ಹಣ ಮಾತ್ರ ವಸಿಯ್ಯತ್‌ನಿಂದ ವಂಚಿತರನ್ನಾಗಿ ಮಾಡುತ್ತದೆ. ಕೆಲವು ಪೈಸಗಳ ವ್ಯತ್ಯಾಸದಿಂದ ನಮ್ಮ ಜವಾಅತಿನ ಸಾವಿರಾರು ಜನರು ವಸಿಯ್ಯತ್ ವ್ಯವಸ್ಥೆಯಿಂದ ಹೊರಗುಳಿಯುತ್ತಾರೆ. ಸ್ವರ್ಗವು ಸಮೀಪವಾಗಿದ್ದರೂ ಅದರೊಳಗೆ ಅವರು ಪ್ರವೇಶಿಸುವುದಿಲ್ಲ.........

ಆದರೆ ಸಾಧ್ಯವಿರುವಷ್ಟು ಜನರು ವಸಿಯ್ಯತ್ ಮಾಡಬೇಕು. ವಸಿಯ್ಯತ್ ಮಾಡುವುದರಿಂದ ನಿಶ್ಚಯವಾಗಿಯೂ ವಿಶ್ವಾಸದಲ್ಲಿ ಅಭಿವೃದ್ಧಿ ಆಗುತ್ತದೆ ಎಂದು ನಾನು ದೃಢ ನಂಬಿಕೆ ಹೊಂದಿದ್ದೇನೆ. ಈ ಖಬರಸ್ಥಾನದಲ್ಲಿ ಭಯಭಕ್ತಿಯುಳ್ಳವರನ್ನು ದಫನ್ ಮಾಡಲಾಗುವುದೆಂದು ಅಲ್ಲಾಹನ ವಾಗ್ದನ ಮಾಡಿರುವನು. ಆದರಿಂದ ವಸಸಿಯ್ಯತ್ ಮಾಡುವವರನ್ನು ಅವನು ಭಯಭಕ್ತಿಯುಳ್ಳವರನ್ನಾಗಿ (ಮುತ್ತಖೀ) ಮಾಡುವನು. (ಖುತ್ಬಾತೆ ಮಹ್ಮೂದ್, ಸಂಪುಟ-13, ಪುಟ-563)

**ವಸಿಯ್ಯತ್ ಮಾಡುವವರು ಅವರು ಒಂದು ಸಮಯದಲ್ಲಿ ಸ್ವರ್ಗೀರಾಗದವರಾಗಿದ್ದರೂ, ಅವರು ಸ್ವರ್ಗೀಯವಾಗುತ್ತಾರೆ**

*(ಪುಟ ಸಂಖ್ಯೆ-20 ರಲ್ಲಿ ಮುಂದುವರಿಸಲಾಗಿದೆ)*

# ಮುಸ್ಲಿಹ್ ಮೌಊದ್ ಭವಿಷ್ಯವಾಣಿಯ ಹಿನ್ನಲೆ, ಮಹತ್ವ ಮತ್ತು ಉದಾಹರಣೆಗಳು

## (ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಬರಹಗಳ ಬೆಳಕಿನಲ್ಲಿ)

(ಸಯ್ಯಿದ್ ಬಶಾರತ್ ಅಹ್ಮದ್, ಸದರ್ ಮುಹಲ್ಲ ಬಾಬುಲ್ ಅಮನ್, ಖಾದಿಯಾನ್)

ಅಲ್ಲಾಹನು ಈ ಕಾಲದಲ್ಲಿ ಹಝ್ರತ್ ಅಖ್ದಸ್ ಮಸೀಹ್ ಮೌಊದ್(ಅ) ಅವರನ್ನು ಇಸ್ಲಾಂ ಮತ್ತು ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರವರ ಸತ್ಯತೆಯ ಬಗ್ಗೆ ದಯಪಾಲಿಸಿದ ದೃಷ್ಟಾಂತಗಳಲ್ಲಿ ಒಂದು ಬಹುದೊಡ್ಡ ದೃಷ್ಟಾಂತ ಮುಸ್ಲಿಹ್ ಮೌಊದ್ ಅವರ ಭವಿಷ್ಯವಾಣಿಯು ದೃಷ್ಟಾಂತವಾಗಿದೆ. ಈ ಭವಿಷ್ಯವಾಣಿಯ ಹಿನ್ನಲೆ ಏನಾಗಿತ್ತು? ಅದರ ಮಹತ್ವವೇನು? ಈ ಭವಿಷ್ಯವಾಣಿ ಯಾರಿಗೆ ಸಂಬಂಧಿಸಿದ್ದು? ಇವೆಲ್ಲ ಪ್ರಶ್ನೆಗಳ ಉತ್ತರ ಮತ್ತು ವಿವರ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ಅವರ ಬರಹಗಳಲ್ಲಿ ಇವೆ.

### ಭವಿಷ್ಯವಾಣಿಯ ಹಿನ್ನಲೆ

ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಮಸೀಹ್ ಮೌಊದ್, ಮಹದಿ ಮೌಊದ್(ಅ) ಅವರ ಮೇರು ಕೃತಿ "ಬರಾಹೀನ್ ಅಹ್ಮದಿಯಾ" ಸಾರ್ವಜನಿಕಗೊಂಡಾಗ ಒಂದೆಡೆ ಇಸ್ಲಾಂ ಲೋಕ ಸಂತೋಷದಿಂದ ತೇಲುತ್ತಿತ್ತು. ಇನ್ನೊಂದೆಡೆ ಇಸ್ಲಾಂ ವಿರೋಧಿಗಳಲ್ಲಿ ಕಳವಳ ಉಂಟಾಗಿತ್ತು. ಹಝ್ರತ್ ಅಖ್ದಸ್ ಮಸೀಹ್ ಮೌಊದ್(ಅ) ಇದೇ ಗ್ರಂಥದಲ್ಲಿ ಲೋಕವನ್ನು ಸಂಬೋಧಿಸಿ ಈ ಸುವಾರ್ತೆ ನೀಡಿದರು. "ಅಲ್ಲಾಹನು ಈ ವಿನೀತ ದಾಸನಿಗೆ ಈ ಕಾಲಘಟ್ಟದಲ್ಲಿ ಕಳುಹಿಸಿ ನೂರಾರು ದೈವಿಕ ದೃಷ್ಟಾಂತಗಳು ಮತ್ತು ಅದೃಶ್ಯ ಜ್ಞಾನ ಹಾಗೂ ಸತ್ಯದಿಂದ ಕೂಡಿದ ಸಾಕ್ಷ್ಯಗಳು ನೀಡಿ ನೂರಾರು ಬೌದ್ಧಿಕ ಪುರಾವೆಗಳ ಜ್ಞಾನ ನೀಡಿ ನಿಶ್ಚಯಿಸಿದ್ದೇನೆಂದರೆ ಖುರ್‌ಆನ್‌ನ ಸತ್ಯ ಸಾಕ್ಷ್ಯದಿಂದ ಕೂಡಿದ ಶಿಕ್ಷಣ ಎಲ್ಲ ಸಮುದಾಯಗಳಲ್ಲಿ, ಎಲ್ಲ ದೇಶಗಳಲ್ಲಿ ಪ್ರಚುರಪಡಿಸಿ ಕಾರ್ಯರೂಪಕ್ಕೆ ತರಬಯಸಿದೆ ಮತ್ತು ತನ್ನ ನ್ಯಾಯಪೂರ್ತಿಕರಣ ಅವರ ಮೇಲೆ ಮಾಡಬಯಸಿದೆ. (ಬರಾಹೀನ್ ಅಹ್ಮದಿಯಾ, ರೂಹಾನಿ ಖಝಾಈನ್, ಸಂಪುಟ-1, ಪುಟ-596)

ಈ ಸುದ್ದಿಯ ಘೋಷಣೆ ಅವರು ಕೇವಲ ಭಾರತದಲ್ಲಿ ಮಾಡಲಿಲ್ಲ. ಬದಲು ಪತ್ರಗಳ ಮೂಲಕ ಭಾರತದ ಹೊರದೇಶಗಳಿಗೂ ಈ ಸಂದೇಶ ತಲುಪಿಸಿದರು ಮತ್ತು ತಮ್ಮ ಸಾಮರ್ಥ್ಯ ಅನುಸಾರ ಇಸ್ಲಾಂ ವಿರೋಧಿಗಳ ಮೇಲೆ ನ್ಯಾಯಪೂರ್ತಿಕರಣ ಮಾಡಿದರು. ಆಗ ಇಸ್ಲಾಮಿನ ಸಾಕ್ಷ್ಯ ಮತ್ತು ಸತ್ಯದ ಡಂಗುರ ಎಲ್ಲೆಡೆ ಭಾರಿಸತೊಡಗಿತ್ತು ಮತ್ತು ಎಲ್ಲ ವಿರೋಧಿಗಳಿಗೆ ಅವರ ಜೀವಂತ ದೃಷ್ಟಾಂತ ಕಾಣಲು ಸಾರ್ವಜನಿಕವಾಗಿ ಆಹ್ವಾನಿಸಿದರು. ಅದರ ನಡುವೆಯೇ 1885ರಲ್ಲಿ ಖಾದಿಯಾನಿನ ಹಿಂದು ಸಾಹೇಬರುಗಳು ಒಂದು ಪತ್ರ ಹಝ್ರತ್ ಅಖದಸ್ ಅಲೈಹಿಸ್ಸಲಾಮ್ ಅವರ ಸೇವೆಯಲ್ಲಿ ರವನಿಸಿದರು. ಅದರಲ್ಲಿ ಈ ಬೇಡಿಕೆ ಮಾಡಲಾಗಿತ್ತು.

"ಯಾವ ರೀತಿ ನೀವು ಲಂಡನ್ ಅಮೇರಿಕಾದವರೆಗೆ ಈ ವಿಷಯ ಕುರಿತು ರಿಜಿಸ್ಟರ್ ಪತ್ರಗಳನ್ನು ಕಳುಹಿಸಿದ್ದೀರಿ. ಸತ್ಯಾನ್ವೇಷಿಗಳಾದವರು ಒಂದು ವರ್ಷದವರೆಗೆ ನಮ್ಮ ಬಳಿ ಬಂದು ಖಾದಿಯಾನಿನಲ್ಲಿ ವಾಸಮಾಡಲಿ, ಅಲ್ಲಾಹನು ಅವರಿಗೆ ಇಸ್ಲಾಮಿನ ಸಾಕ್ಷ್ಯಧಾರಿತ ದೃಷ್ಟಾಂತಗಳನ್ನು ತೋರಿಸುವನು. ಅದು ಮಾನವನ ಕೈವಾಡದಿಂದ ಮುಕ್ತವಾಗಿರುವುದು. ಅಂದಹಾಗೆ ನಾವು ನಿಮ್ಮ ನೆರೆಯವರಾಗಿದ್ದೇವೆ. ಒಂದೇ ಊರಿನವರಾಗಿದ್ದೇವೆ. ಲಂಡನ್ ಅಮೇರಿಕಾದವರಿಗಿಂತಲೂ ಹೆಚ್ಚು ಹಕ್ಕು ನಮ್ಮದಾಗಿದೆ. ಆದರೆ ನಾವು ಭೂಮ್ಯಾಕಶದ ಬುಡದ ಮೇಲಿರುವಂತಹ ದೃಷ್ಟಾಂತಗಳೇನು ಯಾಚಿಸುವುದಿಲ್ಲ. ದೈವಿಕ ನಿಯಮಗಳನ್ನು ಮುರಿಯುವ ಅವಶ್ಯಕತೆ ಇಲ್ಲ. ಹೌದು, ಮಾನವ ಶಕ್ತಿಯಿಂದ ಮೀರಿದಂತಹ ದೃಷ್ಟಾಂತಗಳು ಅವಶ್ಯ ಬೇಕಾಗಿದೆ. ಅದರಿಂದ ಆ ಸತ್ಯವಂತನಾದ ಮತ್ತು ಪವಿತ್ರವಾದ ಪರಮೇಶ್ವರನು ತಮ್ಮ ಸಜ್ಜನಿಕೆಯ ಕಾಣದಿಂದಾಗಿ ತನ್ನ ಪ್ರೀತಿ ಹಾಗೂ ಕೃಪೆಯಿಂದ ನಿಮ್ಮ ಪ್ರಾರ್ಥನೆಗಳನ್ನು ಸ್ವೀಕರಿಸುವಂತನಾಗಿದ್ದಾನೆ ಮತ್ತು ಪ್ರಾರ್ಥನೆ ಸ್ವೀಕಾರದ ಸೂಚನೆಗಳಿಂದ ಮುಂಚಿತವಾಗಿ ಅರಹುವವನಾಗಿದ್ದಾನೆ. ಭವಿಷ್ಯವಾಣಿಯ ಮೂಲಕ ಸೂಚಿಸುವವನಾಗಿದ್ದಾನೆ ಅಥವಾ ಕೆಲ ವಿಶಿಷ್ಟ ಗೌಪ್ಯ ವಿಷಯಗಳನ್ನು ಭವಿಷ್ಯವಾಣಿಗಳ ಮೂಲಕ ತಿಳಿಸುವವನಾಗಿದ್ದಾನೆ. ಅಥವಾ ಆಶ್ಚರ್ಯಕರ ರೀತಿಯಲ್ಲಿ ತಮಗೆ ಸಹಕರಿಸುವಂತಹ ಮತ್ತು ಪುಷ್ಟಿ ನೀಡುವಂತಹ ಉದಾಹರಣೆಗೆ ಅವನು ಪುರಾತನ ಕಾಲದಿಂದ ತನ್ನ ಸಜ್ಜನ ದಾಸರಿಗೆ ಪ್ರಿಯರಿಗೆ ಮತ್ತು ಭಕ್ತರಿಗೆ ಹಾಗೂ ವಿಶಿಷ್ಟ ದಾಸರಿಗೆ ಅಭಯ ನೀಡುತ್ತಾ ಬಂದಿದ್ದಾನೆ. ದೃಷ್ಟಾಂತಗಳನ್ನು ತೋರಿಸಲು ನಿಗಧಿಪಡಿಸಿದ ಅವಧಿ ಸೆಪ್ಟೆಂಬರ್ 1812 ಪ್ರಾರಂಭದಿಂದ ಗಣಿಸಲಾಗುವುದು ಮತ್ತು ಅದರ ಅಂತ್ಯ ಸೆಪ್ಟಂಬರ್ 1886 ರ ಅಂತಿಮ ಚರಣ ಪರಿಗಣಿಸಲಾಗುವುದು.

(ಮಜ್‌ಮುಅ ಇಶ್ತಿಹಾರಾತ್, ಸಂಪುಟ-1, ಪುಟ-92)

ಪತ್ರ ದೊರೆತ ಮೇಲೆ ಹಝ್ರತ್ ಅಖದಸ್(ಅ) ಉತ್ತರದಲ್ಲಿ ಬರೆದರು. "ನೀವು ಶ್ರೀಮಂತರು ಬರೆದ ಪತ್ರದಲ್ಲಿ ನೀವು ದೈವಿಕ ದೃಷ್ಟಾಂತಗಳನ್ನು ಕಾಣುವ ಬೇಡಿಕೆ ಸಲ್ಲಿಸಿದ್ದು ನನಗೆ ತಲುಪಿತು. ಹಾಗೆ ಈ ಪತ್ರ ನ್ಯಾಯಸಮ್ಮತ ಹಾಗೂ ಸತ್ಯಾದಾರಿತವಾಗಿದೆ ಮತ್ತು ಹತ್ತು ಜನ ಸೇರಿ ಒಗ್ಗೂಟ್ಟು ಬರೆದಿದೀರಿ. ಆದುದರಿಂದ ಅಭಿನಂದನೆಗಳೊಂದಿಗೆ ಅದನ್ನು ಸ್ವೀಕರಿಸುತ್ತೇನೆ. ಮತ್ತು ವಚನ ನೀಡುತ್ತೇನೆ. ನೀವು ತಮ್ಮ ಪತ್ರದಲ್ಲಿ ಬರೆದ ವಚನಕ್ಕೆ ಬದ್ಧವಾಗಿದ್ದರೆ ಅವಶ್ಯವಾಗಿ ಸರ್ವಶಕ್ತನಾದ ಅಲ್ಲಾಹನ ಪುಷ್ಟ ಸಾಹೇಬರಿಂದ ಒಂದು ವರ್ಷ ತನಕ ನಿಮಗೆ ಇಂತಹ ಯಾವುದೊಂದು ದೃಷ್ಟಾಂತ ಅದು ಮಾನವ ಶಕ್ತಿಯಿಂದ ಹೊರತಾದ ರೀತಿಯಲ್ಲಿ ತೋರಿಸಲಾಗುವುದು. ಈ ವಿನೀತನು ತಮ್ಮ ಈ ನ್ಯಾಯಯುತ ಮುಸಲ್ಮಾನರ ಕೂಡದ ಪತ್ರ ಕಂಡು ತುಂಬಾ ಸಂತೋಷಗೊಂಡಿದ್ದಾನೆ. (ಮಜ್‌ಮುಅ ಇಶ್ತಿಹಾರಾತ್, ಸಂಪುಟ-1, ಪುಟ-95)

ಹಝ್ರತ್ ಅಖ್ದಸ್(ಅ) ಅವರ ಈ ಜಾಹಿರಾತ್‌ನಿಂದ ಸ್ಪಷ್ಟವಿದೆ. ಅವರು ಹಿಂದೂಗಳ ಈ ಪತ್ರದಿಂದ ತುಂಬಾ ಸಂತೋಷಪಟ್ಟಿದ್ದರು. ಏಕೆಂದರೆ ಇಸ್ಲಮಿನ ಸತ್ಯತೆ ತಿಳಿಯಲು ದೃಷ್ಟಾಂತವನ್ನು ಬಯಸಿದ್ದರು. ಅಂದಹಾಗೆ ಹುಝೂರ್(ಅ) ಅದಕ್ಕನುಗುಣವಾಗಿ ಆ ಏಕದೇವನಾದ ಅಲ್ಲಾಹನೆಡೆ ಗಮನ ಕೇಂದ್ರೀಕರಿಸಿದರು. ಅವನ ಪುಷ್ಟಿ ಸಹಕಾರದಿಂದ ದೃಢ ವಾಗ್ದನಗಳನ್ನು ಪಡೆದು ಇಸ್ಲಾಮಿನ ಸತ್ಯತೆಯನ್ನು ಈ ಕಾಲದಲ್ಲಿ ತೋರಿಸಲು ಘೋಷಣೆ ಮಾಡಿದ್ದರು. ಮತ್ತು ಅತ್ಯಂತ ಅಹ್ಲಾದಭರಿತರಾಗಿ, ನಯವಿನಯದಿಂದಾಗಿ ಈ ದೃಷ್ಟಾಂತ ಪಡೆಯಲು ಪ್ರಾರ್ಥನೆಗಳಲ್ಲಿ ಏಕಾಗ್ರತೆ ಸಾಧಿಸಲು ತನ್ನನ್ನು ಪ್ರತ್ಯೇಕಗೊಳಿಸಿಕೊಳ್ಳಲು ನಿಶ್ಚಯಿಸಿದರು. ಮತ್ತು ಆ ಉದ್ದೇಶಕ್ಕಾಗಿ ತನ್ನ ಮನೆ, ಕುಟುಂಬ, ಸಂಬಂಧಿಕರಿಂದ ದೂರ ಹೋಶಿಯಾರುವುದರಲ್ಲಿ ಇತಿಕಾಫಾಗೆ ಕುಳಿತುಕೊಂಡರು. ಪೂರ್ಣ ಧ್ಯಾನದೊಂದಿಗೆ ಸಮರ್ಪಣೆಯೊಂದಿಗೆ ಅಲ್ಲಿಯ ಜ್ಞಾನದಲ್ಲಿ ಪ್ರಾರ್ಥನೆ ಮಾಡತೊಡಗಿದರು. ದಯವಂತನಾದ ಕರುಣಾನಿಧಿಯೂ ಅಲಾಹನು ಅವರನ್ನು ಕಂಡು ಮತ್ತು ಇಸ್ಲಾಂನ ಸತ್ಯೆಗಾಗಿ ಅವರ ಕಾಳಜಿಯನ್ನು ಕಂಡು ಅವರಿಗೆ ಸಮಾಧಾನ ನೀಡಿದರು. ಮತ್ತು ಅವರ ಪ್ರಾರ್ಥನೆಗಳನ್ನು ತನ್ನ ಕೃಪೆಯಿಂದ ಸ್ವೀಕರಿಸಿ ಮುಸ್ಲಿಹ್ ಮೌಊದ್ (ಅ) ಮಹೋನ್ನತವಾಗಿ ಒಂದು ಭವಿಷ್ಯವಾಣಿ ನೀಡಿದನು.

ಮುಸ್ಲಿಹ್ ಮೌಊದರ ಭವಿಷ್ಯವಾಣಿಯ ಮೇಲೆ ಹಿಂದೂಗಳು ಮತ್ತು ಮುಸಲ್ಮಾನರ ಕೆಲ ವಿಭಾಗದಿಂದ ಆಕ್ಷೇಪಿಸಲಾಯಿತು. ಆದರೆ ಹುಝೂರ್(ಅ) ಪತ್ರಿಕೆ ಮೂಲಕ ಅದರ ಉತ್ತರ ನೀಡಿದರು. ಹಝ್ರತ್ ಅಖ್ದಸ್ ಅವರ ಈ ಭವಿಷ್ಯವಾಣಿಯ ನಂತರ ಅವರಿಗೆ ಒಂದು ಹೆಣ್ಣು ಮಗು ಹುಟ್ಟಿತು. ಹಾಗೆ ಹಝುರತ್ ಅಖ್ದಸ್(ಅ) ಅವರ ಮೇಲೆ ಆಕ್ಷೇಪವೇನಿತ್ತೆಂದರೆ ಭವಿಷ್ಯವಾಣಿಯಲ್ಲಿ ಗಂಡು ಮಗುವಿದ್ದಿತ್ತು ಆದರೆ ಹೆಣ್ಣು ಮಗು ಹುಟ್ಟಿದೆ. ಅದಲ್ಲದೆ ಮನೆಯಲ್ಲಿ ಗಂಡು ಮಗು ಹುಟ್ಟುವುದು ಸಹ ಒಂದು ದೃಷ್ಟಾಂತವೇ? ಎಂದು ಕೂಗು ಎಬ್ಬಿಸಿದರು. ಮದುವೆ ನಂತರ ಮಕ್ಕಳಾಗುವುದು ಸಹಜ ಪ್ರವೃತ್ತಿಯಾಗಿದೆ. ಆದರೆ ಭವಿಷ್ಯವಾಣಿಯ ಮೇಲೆ ಯೋಚಿಸಿ ನೋಡಿದರೆ ಸ್ಪಷ್ಟವಾಗಿ ತಿಳಿಯಬಹುದು. ಅಲ್ಲಾಹನು ಒಂಭತ್ತು ವರ್ಷಗಳ ಅವಧಿಯೊಳಗೆ ಒಂದು ಮಹೋನ್ನತವಾದ ಪುತ್ರನ ಜನನದ ಸುದ್ದಿ ನೀಡಲಾಗಿತ್ತು. ವಾಗ್ದತ್ತ ಪುತ್ರನ ಹೊರತು ಇತರ ಸಂತಾನ ಹುಟ್ಟುವುದೇ ಇಲ್ಲ ಎಂದು ಹೇಳಲಾಗಿರಲಿಲ್ಲ. ಮದುವೆ ನಂತರ ಸಂತಾನವಾಗುವುದು ಸಹಜ ಮಾತ್ತು ಅವಶ್ಯವಾಗಿದೆ. ಆದರೆ ಯಾವನೇ ಒಬ್ಬ ವ್ಯಕ್ತಿ ತನ್ನ ಬಗ್ಗೆ ಸಮಯಕ್ಕಿಂತ ಮುಂಚೆ ಇಂತಹ ದಾವೆ ಸಾರಲು ಸಾಧ್ಯ ಹೇಗೆ ಸಾಧ್ಯ? ಇಲ್ಲಿ ಕೇವಲ ಮಗುವಿನ ಜನನದ ಅವಶ್ಯ ವಾಗ್ದಾನ ಮಾತ್ರ ನೀಡಲಾಗಿರಲಿಲ್ಲ. ಬದಲು ಆ ಪುತ್ರನು ದೃಢ ನಿಶ್ಚಯ ಹೊಂದಿದವನು, ಮಹೋನ್ನತನು ಮತ್ತು ಅಗಣಿತ ಸದ್ಗುಣವುಳ್ಳ ಮಗ ಆಗುವ ವಾಗ್ದಾನವಿತ್ತು. ಅವನು ಹಝ್ರತ್ ಅಖದಸ್ ಅವರ ಜೀವಿತದ ನಂತರ ಇಸ್ಲಾಂ ಧರ್ಮಕ್ಕಾಗಿ ಮಹತ್ತರ ಸೇವೆ ಸಲ್ಲಿಸುವವನು ಮತ್ತು ಲೋಕದಾದ್ಯಂತ ಅವನ ಖ್ಯಾತಿ ಹರಡುವ ವಾಗ್ದಾನವಿತ್ತು.

### ಬಶೀರ್ ಪ್ರಥಮರ ಜನ್ಮ ಮತ್ತು ಹಝ್ರತ್ ಅಖದಸ್(ಅ) ಅವರ ಸ್ಪಷ್ಟನೆ

ಮೊದಲು ಹೆಣ್ಣು ಮಗುವಿನ ಜನ್ಮದ ನಂತರ 7 ಆಗಸ್ 1887 ರಲ್ಲಿ ಹಝ್ರತ್ ಅಖದಸ್(ಅ) ಅವರ ಮನೆಯಲ್ಲಿ ಗಂಡು ಮಗು ಹುಟ್ಟಿತು. ಆ ಮಗುವಿನ ಹೆಸರು ಬಶೀರ್ ಎಂದು ಇಡಲಾಯಿತು. ಸಾಹಿಬ್ಜಾದ ಬಶೀರ್ ಪ್ರಥಮರ ಜನ್ಮಕ್ಕಿಂತ ಮೊದಲು ಗರ್ಭದ ಅವದಿಯಲ್ಲೇ ಹುಝೂರ್(ಅ) ತನ್ನ ಒಂದು ಪತ್ರಿಕೆ 8 ಏಪ್ರಿಲ್ 1886 ರಲ್ಲಿ ಈ ಮಾತನ್ನು ಪುನರುಚ್ಛರಿಸಿದರು.

"ಈಗ ಜನ್ಮ ತಾಳುವ ಮಗುವೇ ಆ ಮಗು ಆಗುವುದೋ? ಅಥವಾ ಇನ್ನು ಒಂಭತ್ತು ವರ್ಷ ಅವಧಿಯೊಳಗೆ ಯಾವ ಸಮಯ ಅವನು ಜನ್ಮ

ತಾಳುವನು ಎಂದು ಸ್ಪಷ್ಟಪಡಿಸಲಾಗಿಲ್ಲ."

(ಮಜ್‌ಮುಅ ಇಶ್ತಿಹಾರಾತ್, ಸಂಪುಟ-1, ಪುಟ-117)

ಸಾಹಿಬ್ಜಾರ ಬಶೀರ್ ಪ್ರಥಮ ಹುಟ್ಟಿದಾಗ ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಈಗ ಹುಟ್ಟಿದ ಮಗು ಭವಿಷ್ಯವಾಣಿಯಲ್ಲಿ ವಾಗ್ದಾನ ನೀಡಿದ ಮಗುವೇ? ಎಂದು ಪ್ರಶ್ನಿಸಿದಾಗ ಹುಝೂರ್(ಅ) ಉತ್ತರ ನೀಡಿದರು.

ಈಗ ಹುಟ್ಟಿದ ಮಗುವಿನ ಕುರಿತು ಇದು 20 ಫೆಬ್ರವರಿ 1886 ರ ಪತ್ರಿಕೆಯಲ್ಲಿ ಪ್ರಕಟಿಸಿದ ಮಗುವೇ ಆಗಿರುತ್ತಾನೆ ಎಂದು ನಾನು ಯಾವುದೇ ಪತ್ರಿಕೆಯಲ್ಲಿ ಈ ಪ್ರಕಟಿಸಿಲ್ಲ." (ಮಕ್ತೂಬಾತ್ ಅಹ್ಮದ್, ಸಂಪುಟ-1, ಪುಟ-306)

**ಹಝ್ರತ್ ಅಖ್‌ದಸ್ ಅವರ ದೃಷ್ಟಿಯಲ್ಲಿ ಭವಿಷ್ಯವಾಣಿಯ ಮಹತ್ವ ಮತ್ತು ಗೌರವ**

ಅದೇ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಅಲ್ಲಾಹನ ವಾಗ್ದಾನಗಳು ಮತ್ತು ಭವಿಷ್ಯವಾಣಿಗಳು ಒಳಗೊಂಡ "ಸಿರಾಜ್ ಮುನೀರ್" ಹೆಸರಿನ ಒಂದು ಪತ್ರಿಕೆ ಬರೆಯಲು ನಿಶ್ಚಯಿಸಿದರು. ಅದರಲ್ಲಿ ಇತರ ಭವಿಷ್ಯವಾಣಿಗಳೊಂದಿಗೆ ವಾಗ್ದತ್ತ ಪುತ್ರನ ಭವಿಷ್ಯವಾಣಿಯ ಬಗ್ಗೆಯು ಬರೆಯಲು ಉದ್ದೇಶಿಸಿದ್ದರು. ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಹುಝೂರ್(ಅ) ಅವರಿಗೆ ಒಂದು ಪತ್ರದ ಮೂಲಕ ವಾಗ್ದತ್ತ ಪುತ್ರನ ಭವಿಷ್ಯವಾಣಿಯ ಕುರಿತು "ಸಿರಾಜ್ ಮುನೀರ್" ಪತ್ರಿಕೆಯಲ್ಲಿ ಪ್ರಕಟಿಸಿದಂತೆ ಸಲಹೆ ನೀಡಿದರು.

ಹಝ್ರತ್ ಅಖ್‌ದಸ್(ಅ) ಉತ್ತರವಾಗಿ ಬರೆದರು:

"ಶ್ರೀಯುತರು ಮೊದಲು ಪುತ್ರರಲ್ಲಿ ವಾಗ್ದತ್ತ ಪುತ್ರನ ಭವಿಷ್ಯವಾಣಿಯ ಕುರಿತು ಪತ್ರಿಕೆಯಲ್ಲಿ ಪ್ರಕಟಿಸದಂತೆ ಸಲಹೆ ನೀಡಿದ್ದರು. ನಾನು ಇಲ್ಲಿಯವರೆಗೆ ನಿಮ್ಮ ಸೇವೆಯಲ್ಲಿ ನಿಮ್ಮ ಪತ್ರದ ಉತ್ತರ ಕೊಡದೇ ಇರುವ ಕಾರಣವೇನೆಂದರೆ, ಅಲ್ಲಾಹನು ಈ ವಿಷಯದಲ್ಲಿ ನನ್ನ ಅಭಿಪ್ರಾಯಕ್ಕೂ ನಿಮ್ಮ ಅಭಿಪ್ರಾಯಕ್ಕೂ ತಾಳೆ ಹಾಕಲಿಲ್ಲ. **ಇನ್ನ ಲಿಲ್ಲಾಹಿ ವ ಇನ್ನ ಇಲೈಹಿ ರಾಜಿಊನ್**. ನನಗೆ ಅಲ್ಲಾಹನ ಸನ್ನಿಧಿಯಿಂದ ಈ ಕುರಿತು ಘೋಷಿಸುವ ಹಾಗೂ ಪ್ರಕಟಿಸುವ ಆಜ್ಞೆಯಿದೆ. ನನ್ನ ಮಾಸ್ಟರ್ ಮಾಹ್ಲಿನ್ ನನಗೆ ಹೇಳಿದಂತೆ, ನಾನು ಅದೇ ಕೆಲಸವನ್ನು ಮಾಡಲು ಒತ್ತಾಯಿಸಲ್ಪಟ್ಟಿದ್ದೇನೆ. ಲೌಕಿಕ ಅನುಕೂಲತೆಯ ಬೇಡಿಕೆಗಳೊಂದಿಗೆ ನನಗೆ ಯಾವುದೇ ಸಂಬಂಧವಿಲ್ಲ. ಅಥವಾ ಪ್ರಪಂಚದ ಗೌರವ ಮತ್ತು ಅವಮಾನದೊಂದಿಗೆ ನನಗೆ ಯಾವುದೇ ಸಂಬಂಧವಿಲ್ಲ. ಅದರ ಬಗ್ಗೆ ನನಗೆ ಯಾವುದೇ ಕಾಳಜಿ ಇಲ್ಲ ಅಥವಾ ಅದರ ಬಗ್ಗೆ ನನಗೆ ಯಾವುದೇ ಭಯವಿಲ್ಲ. ನಾನು ಪ್ರಕಟಿಸಲು ನಿಯೋಜಿಸಲಾದ ವಿಷಯಗಳನ್ನು ಈ ಬದಲಾಗುತ್ತಿರುವ ಯುಗವು ಕೀಳಾಗಿ ನೊಡಬಹುದು ಎಂದು ನನಗೆ ತಿಳಿಸಿದೆ. ಆದರೆ ಮುಂಬರುವ ಯುಗವು ಅದರಿಂದ ಹೆಚ್ಚು ಪ್ರಯೋಜನ ಪಡೆಯುತ್ತಾರೆ. (ಮಕ್ತೂಬಾತ್ ಅಹ್ಮದ್, ಸಂಪುಟ-1, ಪುಟ-304, 305)

ಹಝ್ರತ್ ಅಖ್‌ದಸ್(ಅ) ಅವರ ಈ ದೃಢತೆ, ಸಾಹಸ ನೋಡಿ ಅವರು ಈ ಭವಿಷ್ಯವಾಣಿ ಕೈಬಿಡಲು ಸಿದ್ಧರಿಲ್ಲ. ಮೌಲ್ವಿ ಸಾಹಿಬ್ ಇನ್ನೊಂದು ಪತ್ರ ಕಳುಹಿಸಿದರು ಮತ್ತು ಬರೆದರು. ಇಂತಹ ಭವಿಷ್ಯವಾಣಿಗಳಿಂದ ಇಸ್ಲಾಂ ಧರ್ಮಕ್ಕೆ ಯಾವುದೇ ಪ್ರಯೋಜನ ಇಲ್ಲ. ಅದರಿಂದ ಮುಸ್ಲಿಮರಿಗೆ ಅವಮಾನವಾಗುವುದು. ಮೌಲ್ವಿ ಸಾಹಿಬ್ ಈ ಅನುಮಾನದಿಂದ ಉಳಿಯಲು ಈ ಸಲ ಹೀಗೆ ಸಲಹೆ ನೀಡಿದರು. ಸಿರಾಜ್ ಮುನೀರ್ ಪ್ರಕಟಪಿಸುವ ಇರಾದೆಯೇ ಸದ್ಯ ಬಿಟ್ಟುಬಿಡಿರಿ. ಹಝ್ರತ್ ಅಖ್‌ದಸ್(ಅ) ಉತ್ತರವಾಗಿ ಹೇಳಿದರು.

'ನೀವು ಹೇಳುವುದೇನೆಂದರೆ ಸಿರಾಜ್ ಮುನೀರ್‌ನಲ್ಲಿ ಅದೇ ರೀತಿಯ ಭವಿಷ್ಯವಾಣಿಗಳಿದ್ದರೆ ನನ್ನ ಅಭಿಪ್ರಾಯವಾಗಿದೆ. ಸಿರಾಜ್ ಮುನೀರ್ ಪ್ರಕಟಿಸುವುದೇ ಕೈಬಿಡಬೇಕು. ಏಕೆಂದರೆ ಇಂತಹ ಕೃತಿಯಿಂದ ಮುಸಲ್ಮಾನರ ಅವಮಾನವಾಗುವುದು. ಅದಕ್ಕೆ ಉತ್ತರವಾಗಿ ಹೇಳುತ್ತೇನೆ. ನಿಸ್ಸಂಶಯವಾಗಿ ಸಿರಾಜ್ ಮುನೀರ್‌ನಲ್ಲಿ ಅದೇ ರೀತಿಯ ಭವಿಷ್ಯವಾಣಿಗಳಿವೆ. ಬದಲು ಅದಕ್ಕಿಂತ ಮಿಗಿಲಾದುದು ಇದೆ. ಆದರೆ ನಿಮ್ಮ ಎರಡನೇ ವಾಕ್ಯ" ನಿಮ್ಮ ಇಂತಹ ಭವಿಷ್ಯಗಳಿಂದ ಮುಸಲ್ಮಾನರ ಅವಮಾನವಾಗುವುದು. ಬುದ್ಧಿವಂತಿಕೆಯ ಮಾತಾಗಿರುವುದಿಲ್ಲ. ನಿಮ್ಮ ಈ ಮಾತು ಕೇವಲ ಕಾಲ್ಪನಿಕವಾಗಿದೆ.

ನಿಮ್ಮ ಈ ಮಾತಿನಿಂದ ಸಾಬೀತಾಗುತ್ತದೆ. ಪುತ್ರನ ಜನ್ಮದಿಂದ ಮುಸ್ಲಿಮರ ಅವಮಾನವಾಯಿತು. ಮುಂದೆ ಸಿರಾಜ್ ಮುನೀರ್ ಪ್ರಕಟವಾದರೆ ಇನ್ನಷ್ಟು ಅವಮಾನವಾಗುವುದು. ಹಾಗಾದರೆ ನಾನು ಹೇಳುತ್ತೇನೆ. ಭವಿಷ್ಯವಾಣಿಗಳ ಸತ್ಯವಾಗುವುದರಿಂದ ಮುಸಲ್ಮಾನರ ಅವಮಾನಕ್ಕೆ ಕಾರಣವಾದುದಾಗಿದೆ ಎಂದರೆ ಇಂತಹ ಎಷ್ಟು ಅವಮಾನಗಳಾದರೂ ಕಡಿಮೆಯೇ ಎನ್ನಬಹುದು. (ಮಕ್ತೂಬಾತ್ ಅಹ್ಮದ್, ಸಂಪುಟ-1, ಪುಟ-308, 309, ಹೊಸ ಎಡಿಶನ್ 2008 ಖಾದಿಯಾನ್)

ಮತ್ತೆ ಹುಝೂರ್(ಅ) ತನ್ನ ಪತ್ರಿಕೆ 22 ಮಾರ್ಚ್ 1886 ರಲ್ಲಿ ಪ್ರತಿಭಟನಾಕಾರರಿಗೆ ಉತ್ತರಿಸಿದರು. "ಅಜ್ಞಾನಿಯೂ ಸಹ ಭವಿಷ್ಯವಾಣಿಯ ಅರ್ಥವನ್ನು ಒಂದೇ ದೃಷ್ಟಿಕೋನದಿಂದ ನೋಡಿದರೆ, ಮಾನವ ಶಕ್ತಿಗಳಿಂದ ಮೀರಿದೆ ಎಂದು ಅರ್ಥಮಾಡಿಕೊಳ್ಳಬಹುದು. ಇದು ದೈವಿಕ ದೃಷ್ಟಾಂತವಾಗಿದೆ ಎಂದು ಯಾರೂ ಅನುಮಾನಿಸುವುದಿಲ್ಲ. ಅನುಮಾನವಿದ್ದರೆ ಇದೇ ರೀತಿಯ ಭವಿಷ್ಯವಾಣಿ ಪ್ರಸ್ತುತಪಡಿಸಲಿ. ಕಣ್ಣು ತೆರೆದು ನೋಡಲಿ ಇದು ಕೇವಲ ಭವಿಷ್ಯವಾಣಿ ಅಲ್ಲ. ಬದಲು ಒಂದು ಮಹತ್ತರ ದೈವಿಕ ದೃಷ್ಟಾಂತವಾಗಿದೆ. ಅದನ್ನು ಅಲ್ಲಾಹನು ನಮ್ಮ ನಬಿ ಕರೀಂ ಮುಹಮ್ಮದ್ ಮುಸ್ತಫಾ(ಸ) ರವರ ಸತ್ಯತೆ ಮತ್ತು ಗೌರವವನ್ನು ಜಾಹೀರುಪಡಿಸಲು ನೀಡಿದ್ದಾನೆ. ವಾಸ್ತವದಲ್ಲಿ ಈ ದೃಷ್ಟಾಂತ ಒಬ್ಬ ಮೃತನನ್ನು ಜೀವಂತಪಡಿಸುವುದಕ್ಕಿಂತ ಎಷ್ಟೋ ಪಟ್ಟು ಉತ್ತಮ ಮತ್ತು ಉನ್ನತಮಯವಾಗಿದೆ.

ಅಲ್ಲಾಹನು ತನ್ನ ಅನುಗ್ರಹದಿಂದ ಮತ್ತು ಹಝುರತ್ ಖಾತಮಲ್ ಅಂಬಿಯಾ(ಸ) ರವರ ಕಾರುಣ್ಯದಿಂದಾಗಿ ಈ ವಿನೀತನ ಪ್ರಾರ್ಥನೆಯನ್ನು ಸ್ವೀಕರಿಸಿ ಇಂತಹ ಅನುಗ್ರಹಪೂರ್ಣ ಆತ್ಮ ಕಳುಹಿಸುವ ವಾಗ್ದಾನ ಮಾಡಿದ್ದಾನೆ. ಅವನ ಆಂತರಿಕ ಮತ್ತು ಬಾಹ್ಯ ಅನುಗ್ರಹಗಳು ಭೂಮಿಯಾದ್ಯಂತ ಹರಡುವುದು. (ಮಜ್‌ಮುಅ ಇಶ್ತಿಹಾರಾತ್, ಸಂಪುಟ-1, ಪುಟ-114, 115)

**ಬಶೀರ್ ಪ್ರಥಮರ ಮರಣ ಮತ್ತು ಹಝ್ರತ್ ಅಖದಸ್(ಅ) ಅವರ ಹಖ್ಖಾನಿ (ದೈವಿಕ) ಭಾಷಣ**

ನವೆಂಬರ್ 4, 1888 ರಂದು ಸಾಹಿಬ್ಜಾದ ಬಶೀರ್ ಪ್ರಥಮರು ದೈವಿಕ ಆದೇಶದಿಂದ ನಿಧನಗೊಂಡಾಗ ವಿರೋಧಿಗಳಿಂದ ನಿಂಧನೆಯ ಬಿರುಗಾಳಿ ಎದ್ದಿತು. ಈ ಸಂದರ್ಭದಲ್ಲಿ ಹಝ್ರತ್ ಅಖದಸ್(ಅ) ಎಲ್ಲ ಟೀಕೆಗಳಿಗೆ ಉತ್ತರಿಸುತ್ತಾ, ಬಶೀರ್ ಸಾವಿನ ಕುರಿತು ಹಖ್ಖಾನಿ ಭಾಷಣ" ಎಂಬ ನಿಯತಕಾಲಿಕವನ್ನು ಪ್ರಕಟಿಸಿದರು. ಅದು ಹಸಿರು ಕಾಗದದಲ್ಲಿ ಪ್ರಕಟವಾದ ಕಾರಣ "ಹಸಿರು ಜಾಹಿರಾತು" ಹೆಸರಿನಿಂದಲೇ ಪ್ರಸಿದ್ಧವಾಯಿತು. ಈ ಜಾಹಶೀರಾತಿನಲ್ಲಿ ಹಝುರತ್ ಅಖದಸ್(ಅ) ಹೇಳಿದರು. ಈ ವಿನಮ್ರ ವ್ಯಕ್ತಿಯಿಂದ ಅನೇಕ ಜಾಹೀರಾತುಗಳು ಪ್ರಕಟವಾದವು. ಅವುಗಳಿಂದ ಯಾವೊಬ್ಬ ವ್ಯಕ್ತಿಯು ಮುಸ್ಲಿಹ್ ಮೌಊದ್ ಎಂಬುವರು ಈ ನಿಧನಗೊಂಡ ಹುಡುಗನೇ ಆಗಿದ್ದನು ಎಂಬ ಒಂದು ಅಕ್ಷರ ಸಹ ಪ್ರಸ್ತುತಪಡಿಸಲು ಸಾಧ್ಯವಿಲ್ಲ. (ಸಬ್ಜ್ ಇಶ್ತಿಹಾರ್, ರೂಹಾನಿ ಖಿಝಾಈನ್, ಸಂಪುಟ-2, ಪುಟ-448)

ಮತ್ತೇ ಹಝ್ರತ್ ಮಸೀಹ್ ವೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಮರಣಿಸಿದ ಮಗನ ವೈಯಕ್ತಿಕ ಸದ್ಗುಣಗಳನ್ನು ಸ್ಫೂರ್ತಿಯಿಂದ ಬಹಿರಂಗಪಡಿಸಲಾಗಿದೆ. ಮತ್ತು ಅವನ ಹೆಸರು ಮುಬಶ್ಶಿರ್, ಬಶೀರ್, ನೂರುಲ್ಲಾಹ್, ಸೈಬ್ ಮತ್ತು ಚಿರಾಗ್‌ದೀನ್ ಮುಂತಾದ ಹೆಸರುಗಳ ಆಧಾರದ ಮೇಲೆ ನಾವು ನೆನಪಿಟ್ಟುಕೊಳ್ಳುವುದು ಸಹ ಮುಖ್ಯವಾಗಿದೆ. ಇದಕ್ಕಾಗಿ ವಿವರವಾದ ಮತ್ತು ಸಮಗ್ರ ಜಾಹೀರಾತುಗಳನ್ನು ಸಹ ಪ್ರಕಟಿಸಲಾಗಿದೆ. ಅದರಲ್ಲಿ ವಾಗ್ದತ್ತ ಪುತ್ರ (ಮುಸ್ಲಿಹ್ ಮೌಊದ್) ಇದೇ ಹುಡುಗನಾಗಿದ್ದಾನೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದರು ಸಹ ವಿವೇಕ ಉಳ್ಳವರ ದೃಷ್ಟಿಯಲ್ಲಿ ನಮ್ಮ ಈ ಊಹೆ ಆಕ್ಷೇಪಕ್ಕೆ ಕಾರಣವಾಗುತ್ತಿರಲಿಲ್ಲ."(ಸಬ್ಜ್ ಇಶ್ತಿಹಾರ್, ರೂಹಾನಿ ಖಿಝಾಈನ್, ಸಂಪುಟ-2, ಪುಟ-450, 451)

ಅದೇ ಸಬ್ಜ್ ಇಶ್ತಿಹಾರ್ (ಹಸಿರು ಕಾಗದ) ದಲ್ಲಿ ಹುಝೂರ್(ಅ) ಅಲ್ಲಾಹನ ಕರುಣೆಯ ಎರಡು ಮಹತ್ತರವಾದ ವಿಧಾನಗಳನ್ನು ವಿವರಿಸಿದ್ದಾರೆ. ಹಝ್ರತ್ ಅಖದಸ್(ಅ) ರವರ ಈ ಬರಹ ಅತ್ಯಂತ ನಿರ್ಣಾಯಕವಾಗಿದೆ. ಹುಝೂರ್(ಅ) ಹೇಳುತ್ತಾರೆ.

ಅಲ್ಲಾಹನ ಕರುಣೆಯ ಅವತರಣಿಕೆ ಮತ್ತು ಆಧ್ಯಾತ್ಮಿಕ ಅನುಗ್ರಹಕ್ಕಾಗಿ ಎರಡು ಮಹತ್ತರವದ ವಿಧಾನಗಳಿವೆ.

1) ಪ್ರಪ್ರಥಮವಾಗಿ ಆಪತ್ತು ಮತ್ತು ದುಃಖಗಳನ್ನು ಅವತರಿಸಿ ಸಹನೆ ತೋರುವವರ ಮೇಲೆ ಕ್ಷಮೆ ಮತ್ತು ಕರುಣೆಯ ದ್ವಾರ ತೆರೆಯುತ್ತಾನೆ. ಉದಾಹರಣೆಗೆ ಸ್ವಯಂ ಅಲ್ಲಾಹನು ಹೇಳುತ್ತಾನೆ. **ವಬಶ್ಶಿರಿಸ್ಸಾಬಿರೀನ ಲ್ಲಝೀನ ಇಝಾ ಅಸಾಬತ್‌ಹುಮ್ಮುಸೀಬ ಖಾಲೂ ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ ಉಲಾಯಿಕ ಅಲೈಹಿಮ್ ಸಲವಾತುಮ್ಮಿರ್ರಬ್ಬಿಹಿಮ್ ವ ರಹ್ಮತುನ್, ವಉಲಾಯಿಕ ಹುಮುಲ್ ಮುಹ್ತದೂನ್** (ಸೂರತುಲ್ ಬಖರ: 155) ಅಂದರೆ ಸತ್ಯವಿಶ್ವಾಸಿಗರ ಮೇಲೆ ವಿವಿಧ ವಿಪತ್ತುಗಳನ್ನು ಹಾಕಿ ಪರೀಕ್ಷಿಸುವುದು ದೈವಿಕ ವಿಷಯವಾಗಿದೆ. ಸಹನಾಶೀಲರ ಮೇಲೆ ನಮ್ಮ ಕರುಣೆ ಅವತರಿಸುತ್ತದೆ ಮತ್ತು ಅವರಿಗಾಗಿ ಸಫಲತೆಯನ್ನು ದಯಪಾಲಿಸುತ್ತೇವೆ.

2) ಎರಡನೆಯ ವಿಧನ ಕರುಣೆ ಅವತರಿಸುವುದು ಪ್ರವಾದಿಗಳು, ಸಜ್ಜನರು ಮತ್ತು ಖಲೀಫರಾಗಿದ್ದಾರೆ. ಅವರ ನೇತೃತ್ವದಲ್ಲಿ ಜನರು ಮಾರ್ಗದರ್ಶನ ಪಡೆಯುತ್ತಾರೆ ಮತ್ತು ಅವರನ್ನು ಅನುಸರಿಸಿ ಮುಕ್ತಿಯನ್ನು ಪಡೆಯುತ್ತಾರೆ. ಹಾಗೆ ಅಲ್ಲಾಹನು ಬಯಸುವನು ಈ ವಿನಮ್ರನ ಸಂತಾನದ ಮೂಲಕ ಈ ಎರಡೂ ವಿಧಾನಗಳು ಪ್ರಕಟವಾಗಲಿ. ಹಾಗೆ ಪ್ರಥಮವಾಗಿ ಅವನು ಕರುಣೆತೋರಲು ಬಶೀರನನ್ನು ಕಳುಹಿಸಿದನು. ಅವನಿಂದ **ಬಶ್ಶರಿಸ್ಸಾಬಿರೀನ್** ದೃಶ್ಯ ಪ್ರಕಟವಾಗಲಿ....

ಮತ್ತೊಂದು ವಿಧಾನ ಕರುಣೆ ಅವತರಿಸುವುದು ಅದರ ಬಗ್ಗೆ ನಾವು ಈಗಾಗಲೇ ವಿವರಿಸಿದ್ದೇವೆ ಅದನ್ನು ಪೂರ್ಣಗೊಳಿಸಲು ಸರ್ವಶಕ್ತನಾದ ಅಲ್ಲಾಹನು ಎರಡನೇ ಬಶೀರನ್ನು ಕಳುಹಿಸಬೇಕು ಉದಾಹರಣೆಗೆ ಬಶೀರ್

ಪ್ರಥಮನ ನಿಧನದಿಂದ ಮುಂಚೆ 10 ಜುಲೈ 1888ರ ಜಾಹಿರಾತಿನಲ್ಲಿ ಅದರ ಬಗ್ಗೆ ಭವಿಷ್ಯವಾಣಿ ನಿಡಲಾಗಿತ್ತು ಮತ್ತು ಅಲ್ಲಾಹನು ಈ ವಿಧೇಯನ ಮೇಲೆ ವ್ಯಕ್ತ ಪಡಿಸಿರುವುದೇನೆಂದರೆ ಮತ್ತೊಂದು ಬಶೀರ್ ನಿಮಗೆ ನೀಡಲಾಗುವುದು ಆತನ ಹೆಸರು ಮಹ್ಮೂದ್ ಆಗಿರುವುದು ಆತನು ತನ್ನ ಕಾರ್ಯಗಳಲ್ಲಿ ದೃಢಸಂಕಲ್ಪವುಳ್ಳವಾನಿಗಿರುವನು **ಯಖ್ಲುಖುಲ್ಲಾಹು ಮಾ ಯಶಾಉ."**
(ಸಬ್ಜ್ ಇಶ್ತಿಹಾರ್, ರೂಹಾನಿ ಖಝಾಈನ್, ಸಂಪುಟ–2, ಪುಟ–461, 463 ಅಡಿಟಿಪ್ಪಣಿ)

ಈ ಸಬ್ಜ್ ಇಶ್ತಿಹಾರ್ (ಹಸಿರು ಕಾಗದ) ಮಸೀಹ್ ಮೌಊದ್ ಭವಿಷ್ಯವಾಣಿ ಮನವರಿಕೆ ಮಾಡಿಕೊಳ್ಳಲು ಒಂದು ಕೀಲಿಗೈಯಾಗಿದೆ. ಇದೇ ಹೆಸರು ಜಾಹೀರಾತಿನಲ್ಲಿ ಅಲ್ಲಾಹನು ಎರಡು ರೀತಿಯ ಕರುಣೆಗಳ ವಿವರ ನೀಡಿದ್ದನ್ನು ಪ್ರಸ್ತಾಪಿಸಿ ಹುಝೂರ್ ಹೇಳಿದರು. ಅಲ್ಲಾಹನು ಈ ವಿನಮ್ರನ ಸಂತಾನ ಮೂಲಕ ಈ ಎರಡೂ ವಿಧಾನಗಳನ್ನು ಜಾಹೀರು ಪಡಿಸಲು ಬಯಸಿದ್ದಾನೆ. ಸ್ಪಷ್ಟವಿದೆ, ಮುಸ್ಲಿಹ್ ಮೌಊದ್‌ನ ಅಸ್ತಿತ್ವ ಹಝ್ರತ್ ಮಸೀಹ್ ಮೌಊದ್(ಅ) ರವರ ದೈಹಿಕ ಸಂತಾನದಿಂದಲೇ ಬರಬೇಕಾಗಿತ್ತು. ಹೊರತು ಭವಿಷ್ಯದಲ್ಲಿ ಯಾವುದೇ ಕಾಲದಲ್ಲಿ ಆಧ್ಯಾತ್ಮಿಕ ನೆಲೆಯಲ್ಲಿ ಅಲ್ಲ. ಬಶೀರ್ ಅವರ ಬಗ್ಗೆ ಹುಝೂರ್(ಅ) ಹೀಗೂ ಹೇಳಿದರು. ಅವನು ನಬಿ, ರಸೂಲ್ ಅವಲಿಯಾ ಮತ್ತು ಖಲೀಫರ ಸ್ಥಾನ ಅಲಂಕರಿಸುವವನು ಇದೀಗ ನಬಿ ರಸೂಲರ ಸ್ಥಾನದಲ್ಲಿ ಸ್ವಯಂ ಹಝ್ರತ್ ಅಖದಸ್ ಆಗಿದ್ದರು. ಕಾರಣ ಈ ವಾಗ್ದತ್ತ ಪುತ್ರ ಅವಲಿಯಾ ಅಥವಾ ಖಲೀಫನ ಸ್ಥಾನದಲ್ಲಿ ಆಗಬೇಕಿತ್ತು. ಅವರ ಅನುಸರಣೆಯನ್ನೇ ಹುಝೂರ್ ಮುಕ್ತಿಪಡೆಯುವುದು. ಮಾರ್ಗದರ್ಶಣ ಪಡೆಯುವುದು ಎಂದಿದ್ದಾರೆ.

**ಭವಿಷ್ಯವಾಣಿಯ ರೂವಾರಿ**

ಹಝ್ರತ್ ಅಖದಸ್(ಅ) ತನ್ನ ಬರಹಗಳಲ್ಲಿ ವಿವಿದೆಡೆ ತನ್ನ ಸುವಾರ್ತಾ ಬೋಧಕ ಮಕ್ಕಳ ಬಗ್ಗೆ ಉಲ್ಲೇಖಿಸಿದ್ದಾರೆ ಮತ್ತು ಪ್ರತಿಯೊಬ್ಬ ಮಗ ಅಥವಾ ಮಗಳ ಜನನದ ಬಗ್ಗೆ ಪ್ರಸಕ್ತ ಅಥವಾ ಜಾಹೀರಾತನ್ನು ಉಲ್ಲೇಖಿಸಿದ್ದಾರೆ. ಆದರೆ ಹಸಿರು ಜಾಹೀರಾತಿನಲ್ಲಿ ಜನಿಸಿದ ಮಗ ಅವರ ಜನನದ ಸುದ್ಧಿಯನ್ನು ಯಾವಾಗಲೂ ಭವಿಷ್ಯವಾಣಿಯ ರೂವಾರಿ ಹಝ್ರತ್ ಮಿರ್ಝಾ ಬಶೀರುದ್ದೀನ್ ಮೊಹ್ಮದ್ ಅಹ್ಮದ್ ಆಗುವರು ಎಂದೇ ಉಲ್ಲೇಖಿಸಿದ್ದಾರೆ. ಕೆಳಗಿನ ಭಾಗಗಳನ್ನು ಇದಕ್ಕೆ ಪುರಾವೆಯಾಗಿ ಪ್ರಸ್ತುತಪಡಿಸಲಾಗಿದೆ.

ಹುಝೂರ್(ಅ) ತನ್ನ ಗ್ರಂಥ "ಸಿರಾಜ್ ಮುನೀರ್'ನಲ್ಲಿ ಸತ್ಯವಾದ ಭವಿಷ್ಯಗಳ ವಿವರ ನೀಡುತ್ತಾ ಹೇಳುತ್ತಾರೆ.

"ಐದನೇ ಭವಿಷ್ಯವಾಣಿ ನಾನು ತನ್ನ ಮಗ ಮೆಹ್ಮೂದನ ಜನನದ ಬಗ್ಗೆ ಮಾಡಿದ್ದೆ. ಅವನು ಈಗ ಜನಿಸುವನು. ಅವನ ಹೆಸರು ಮೆಹ್ಮೂದ್ ಎಂದಾಗುವುದು. ಅವನ ಭವಿಷ್ಯವಾಣಿಯ ಪ್ರಕಟಣೆಗಾಗಿ ಹಸಿರು ಕಾಗದದ ಜಾಹೀರಾತು ಪ್ರಕಟಿಸಲಾಗಿತ್ತು. ಅದು ಇಂದಿಗೂ ಲಭ್ಯವಿದೆ ಮತ್ತು ಸಾವಿರಾರು ಜನರಲ್ಲಿ ಹಂಚಲ್ಪಟ್ಟಿವೆ. ಹಾಗೆ ಆ ಪುತ್ರನು ಭವಿಷ್ಯವಾಣಿಯ ಅವಧಿಯಲ್ಲೇ ಹುಟ್ಟಿರುವನು. ಈಗ ಅವನು 9ನೇ ವಯಸ್ಸಿನಲ್ಲಿದ್ದಾನೆ. (ಸಿರಾಜ್ ಮುನೀರ್, ರೂಹಾನಿ ಖಝಾಈನ್, ಸಂಪುಟ–12, ಪುಟ–36)

ಸಿರಾಜ್ ಮುನೀರ್ ಪುಸ್ತಕದ ಅದೇ ಬರಹದ ಟಿಪ್ಪಣಿಯಲ್ಲಿ ಹುಝೂರ್ ಮತ್ತೆ ಪ್ರಸ್ತಾಪಿಸುತ್ತಾರೆ. "ಹಸಿರು ಜಾಹೀರಾತಿಯಲ್ಲಿ ಸ್ಪಷ್ಟ ಶಬ್ದಗಳಲ್ಲಿ, ಆತಂಕವಿಲ್ಲದೆ ಗಂಡು ಮಗು ಜನನವಾಗುವ ವಾಗ್ದಾನವಿತ್ತು. ಅದರಂತೆ ಮೆಹ್ಮೂದ್ ಹುಟ್ಟಿದನು. ಎಷ್ಟೊಂದು ಮಹತ್ತರವಾದ ಈ ಭವಿಷ್ಯವಾಗಿದೆ. ಅಲ್ಲಾಹನ ಭಯವಿದ್ದರೆ ಶುದ್ಧ ಮನಸ್ಸಿನಿಂದ ಯೋಚಿಸಿ.

ತನ್ನ ಗ್ರಂಥ "ಅಂಜಾಮ್ ಆಥಮ್" ನಲ್ಲಿ ಹುಝೂರ್(ಅ) ಹೇಳುತ್ತಾರೆ. "ಮತ್ತೊಂದು ದೃಷ್ಟಾಂತವೆಂದರೆ ಮೂರು ಗಂಡು ಮಕ್ಕಳಿದ್ದಾರೆ, ಪ್ರತಿಯೊಬ್ಬನು ಹುಟ್ಟುವ ಮೊದಲು ಅವರ ಬಗ್ಗೆ ಸುದ್ದಿ ನೀಡಲಾಗಿದೆ. ಹಾಗೆ ಹಿರಿಯ ಮಗ ಮೆಹ್ಮೂದ್‌ನ ಜನನದ ಬಗ್ಗೆ ಈ ಹಸಿರು ಜಾಹೀರಾತಿನಲ್ಲಿ ಮೆಹ್ಮೂದ್ ಹೆಸರು ಸಹಿತ ಸ್ಪಷ್ಟವಾಗಿ ನಮೂದಿಸಲಾಗಿದೆ. ಮೊದಲು ನಿಧನಗೊಂಡ ಹುಡುಗನ ಬಗ್ಗೆ ಪ್ರಕಟಿಸಿದ ಜಾಹೀರಾತು ಹಲವು ಹಸಿರು ಪುಟಗಳಲ್ಲಿದೆ. ಮಧ್ಯಮನಾದ ಬಶೀರ್ ಅವನ ಸುದ್ದಿ ಬಿಳಿ ಜಾಹೀರಾತಿನಲ್ಲಿದೆ. ಹಸಿರು ಜಾಹೀರಾತಿನ ಮೂರು ವರ್ಷಗಳ ಅನಂತರ ಪ್ರಕಟಿಸಲಾಗಿತ್ತು, ಶರೀಫ್ ಎಲ್ಲರಿಗಿಂತ ಕಿರಿಯ ಹುಡುಗನ ಜನನದ ವಿಷಯ ಝಿಯಾವುಲ್ ಹಖ್ ಮತ್ತು ಅಕ್ವಾರುಲ್ ಇಸ್ಲಾಂನದಲ್ಲಿದೆ. (ಅನುಬಂಧ ಅಂಜಾಮ್ ಆಥಮ್, ರೂಹಾನಿ ಖಝಾಈನ್, ಸಂಪುಟ–11, ಪುಟ–299)

ಅದೇ ರೀತಿ ಹಝ್ರತ್ ಅಖ್‌ದಸ್(ಅ) ತನ್ನ ಗ್ರಂಥ ಸಿರ್ರುಲ್ ಖಿಲಾಫಿನಲ್ಲಿ ನುಡಿಯುತ್ತಾರೆ. "ಅನುವಾದ: ನಾನು ನಿನ್ನ ಮುಂದೆ ಒಂದು ವಿಚಿತ್ರವಾದ ಕಥೆ ವಿವರಿಸುತ್ತೇನೆ. ನನ್ನ ಚಿಕ್ಕ ಮಗನ ಹೆಸರು ಬಶೀರ್ ಎಂದಾಗಿತ್ತು. ಅಲ್ಲಾಹನು, ಅವನಿಗೆ ಮೊಲೆಯುಣಿಸುವ ವಯಸ್ಸಿನಲ್ಲಿ ಮರಣ ನೀಡಿದನು. ಆಗ ಅಲ್ಲಾಹನು ನನಗೆ ದಿವ್ಯವಾಣಿಯ ಮೂಲಕ ತಿಳಿಸಿದನು. ನಾವು ಅವನನ್ನು ಉಪಕಾರದ ದೃಷ್ಟಿಯಿಂದ ಮರಳಿ ಕಳುಹಿಸುವೆನು. ಅಂತೆಯೇ ಮಗುವಿನ ತಾಯಿ ಸ್ವಪ್ನದಲ್ಲಿ ಕಂಡಳು. ಬಶೀರ್ ಬಂದು ಹೇಳುತ್ತಾನೆ. ನಾನು ನಿಮ್ಮೊಡನೆ ಅತ್ಯಂತ ಪ್ರೀತಿಯಿಂದ ಭೇಟಿಯಾಗುವೆನು ಮತ್ತು ಶೀಘ್ರವಾಗಿ ಬೇರ್ಪಡುವುದಿಲ್ಲ. ಈ ದಿವ್ಯವಾಣಿ ಮತ್ತು ಸ್ವಪ್ನದ ನಂತರ ಅಲ್ಲಾಹನು ನನಗೆ ಎರಡನೇ ಮಗ ದಯಪಾಲಿಸಿದನು. ಆಗ ನಾನು ಅರುಹಿದೆ. ಇವನು ಆ ಬಶೀರನೇ ಆಗಿದ್ದಾನೆ. ಅಲ್ಲಾಹನು ತನ್ನ ಸುದ್ದಿಯಲ್ಲಿ ಸತ್ಯವಂತನಾಗಿದ್ದಾನೆ. ಹಾಗೆ ನಾನು ಈ ಮಗುವಿನ ಹೆಸರು ಬಶೀರ್ ಎಂದೇ ಇಟ್ಟಿದೆ ಮತ್ತು ಅವನ ಶರೀರದಲ್ಲಿ ಬಶೀರ್ ಪ್ರಥಮನ ರೂಪವೇ ಕಾಣುತ್ತದೆ. ಹಾಗೆ ಅಲ್ಲಾಹನ ಸುನ್ನತ್ ಸ್ವಪ್ನದ ಮೂಲಕ ಸಾಬೀತಾಯಿತು. ಅವನು ಎರಡು ದಾಸರನ್ನು ಒಂದೇ ಹೆಸರಿನಲ್ಲಿ ಸೇರಿಸುವವನಾಗಿದ್ದಾನೆ. (ಸಿರ್ರುಲ್ ಖಿಲಾಫ್, ರೂಹಾನಿ ಖಝಾಈನ್, ಸಂಪುಟ–8, ಪುಟ–381).

ಹಸಿರು ಕಾಗದದಲ್ಲಿ ತನ್ನ ಪುತ್ರ ಹಝ್ರತ್ ಮಿರ್ಝಾ ಬಶೀರುದ್ದೀನ್ ಮೆಹ್ಮೂದ್ ಅಹ್ಮದ್ ಸಾಹಿಬ್ ಅವರ ಜನನದ ವಿವರ ನೀಡುತ್ತಾ ಹುಝೂರ್ ಅಖ್‌ದಸ್(ಅ) ತನ್ನ ಗ್ರಂಥ "ತಿರ್‌ಯಾಖುಲ್ ಖುಲೂಬ್" ನಲ್ಲಿ ಹೇಳುತ್ತಾರೆ.

ನನ್ನ ಮೊದಲ ಪುತ್ರ ಈಗ ಜೀವಂತವಾಗಿದ್ದಾನೆ ಅವನ ಹೆಸರು ಮೆಹ್ಮೂದ್ ಎಂದಾಗಿದೆ. ಅವನು ಇನ್ನು ಹುಟ್ಟಿರಲಿಲ್ಲ. ನನಗೆ ದಿವ್ಯ ಸ್ವಪ್ನದ ಮೂಲಕ ಅವನ ಜನನದ ಬಗ್ಗೆ ಸುವಾರ್ತೆ ನೀಡಲಾಗಿತ್ತು. ಮಸೀದಿಯ ಗೋಡೆಯ ಮೇಲೆ ಅವನ ಹೆಸರು "ಮೊಹ್ಮೂದ್" ಎಂದು ಬರೆಯಲಾಗಿತ್ತು. ಆಗ ನಾನು ಈ ಭವಿಷ್ಯವಾಣಿ ಪ್ರಕಟಿಸಲು ಹಸಿರು ಕಾಗದಗಳ ಮೇಲೆ ಒಂದು ಜಾಹೀರಾತು ಪ್ರಕಟಿಸಿದೆ. ಅದರ ತಾರೀಖು ಒಂದನೇ ಡಿಸೆಂಬರ್ 1888 ಆಗಿದೆ. (ತಿರ್‌ಯಾಖುಲ್ ಖುಲೂಬ್, ರೂಹಾನಿ ಖಝಾಈನ್, ಸಂಪುಟ–15, ಪುಟ–214)

ತುರ್‌ಯಾಖಿಲ್ ಖುಲೂಬ್‌ನಲ್ಲಿಯೇ ಹುಝೂರ್(ಅ) ಇನ್ನೊಂದು ಕಡೆಯಲ್ಲಿ ಹೇಳುತ್ತಾರೆ. ನನ್ನ ಮಗನಾದ ಮೆಹ್ಮೂದ್ ಅವನ ಜನನವಾದ ನಂತರ ನಾನು ಒಂದು ಜಾಹೀರಾತು ಹತ್ತು ಜುಲೈ 1668 ರಲ್ಲಿ ಮತ್ತು ಇನ್ನೊಂದು ಜಾಹೀರಾತು ಒಂದನೇ ಡಿಸೆಂಬರ್ 1888 ರಲ್ಲಿ ಹಸಿರು ಕಾಗದದ ಮೇಲೆ ಪ್ರಕಟಿಸಲಾಗಿತ್ತು. ಹಸಿರು ಕಾಗದದ ಜಾಹೀರಾತಿನಲ್ಲಿ ಇದು ಸಹ ಬರೆಯಲಾಗುವುದು. ಈ ಜನನವಾದ ಹುಡುಗನ ಹೆಸರು ಮೆಹ್ಮೂದ್ ಎಂದು ಇಡಲಾಗುವುದು. ಈ ಜಾಹೀರಾತು ಮೆಹ್ಮೂದ್ ಹುಟ್ಟಿದ ಮೊದಲೇ ಲಕ್ಷಾಂತರ ಜನರಲ್ಲಿ ಪ್ರಕಟಿಸಲಾಗಿತ್ತು. ಅಂದಹಾಗೆ ಇಲ್ಲಿಯವರೆಗೆ ನಮ್ಮ ವಿರೋಧಿಗಳ ಮನೆಗಳಲ್ಲಿ ನೂರಾರು ಹೆಸರುಗಳ ಜಾಹಿರಾತುಗಳು ಬಿದ್ದಿವೆ. ಅದರಂತೆಯೇ ಹತ್ತನೇ ಜುಲೈ 1888ರ ಜಾಹಿರಾತಿನಲ್ಲಿ ಸಹ ಪ್ರತಿಯೊಬ್ಬರ ಮನೆಯಲ್ಲಿ ಇರುವವು. ಹೀಗೆ ಈ ಭವಿಷ್ಯವಾಣಿಯು ಪ್ರಖ್ಯಾತ ಜಾಹೀರಾತುಗಳ ಮೂಲಕ ಪರಿಪೂರ್ಣ ರೀತಿಯಲ್ಲಿ ಮುಸ್ಲಿಮರ, ಕ್ರೈಸ್ತರ ಮತ್ತು ಹಿಂದೂಗಳ ಯಾವುದೇ ಹಣದ ಬಾಕಿ ಇಲ್ಲದಂತೆ, ಎಲ್ಲರಿಗೂ ತಲುಪಿಸಿದರು. ಆಗ ಅಲ್ಲಾಹನ ಅನುಗ್ರಹದಿಂದ 12 ಜನರಿ 1889, 9 ಜಮಾದಿಲ್ ಅವ್ವಲ್ 1306 ಹಿಜರಿಯಲ್ಲಿ ಶನಿವಾರ ದಿನದಂದು ಮೆಹ್ಮೂದನ ಜನನವಾಯಿತು."
(ತುರಿಯಾಬುಲ್ ಖುಲೂಬ್, ರೂಹಾನಿ ಖಝಾಈನ್, ಸಂಪುಟ–15, ಪುಟ–219)

ತನ್ನ ಮೇರು ಕೃತಿ ಹಖೀಖತುಲ್ ವಹಿಯಲ್ಲಿ ಹುಝೂರ್(ಅ) ಹಸಿರು ಜಾಹೀರಾತಿಗಾಗಿ ಸಮಾನ ಎಂದು ವಿವರಿಸಿದರು. ಹುಝೂರ್(ಅ) ಹೇಳುತ್ತಾರೆ.

"ಹಾಗೆ ನನ್ನ ಮೊದಲ ಹುಡುಗ ತೀರಿ ಹೋದಾಗ ಮೂಢ ಮೌಲ್ವಿಗಳು ಮತ್ತು ಅವರ ಮಿತ್ರರು, ಕ್ರೈಸ್ತರು, ಹಿಂದೂಗಳು ಅವನು ನಿಧನ ಆದುದಕ್ಕೆ ಸಂತೋಷಪಟ್ಟರು. ಅವರಿಗೆ ಮತ್ತೆ ಮತ್ತೆ ತಿಳಿಸಲಾಗಿತ್ತು. 20 ಫೆಬ್ರವರಿ 1886 ರಲ್ಲಿ ಹೀಗೂ ಸಹ ಭವಿಷ್ಯವಾಣಿ ಮಾಡಲಾಗಿತ್ತು. ಕೆಲ ಹುಡುಗರು ನಿಧನಗೊಳ್ಳುವರು ಎಂದು. ಹೀಗೆ ಸಣ್ಣ ವಯಸ್ಸಿನಲ್ಲಿ ಮಕ್ಕಳು ಮರಣ ಹೊಂದುವುದು ವಿಧಿಯಾಗಿತ್ತು. ಆದರೂ ಆ ಜನರು ನಿಂದನೆಯಿಂದ ದೂರ ಉಳಿಯಲಿಲ್ಲ. ಆಗ ಅಲ್ಲಾಹನು ಇನ್ನೊಬ್ಬ ಮಗನ ಸುವಾರ್ತೆ ನೀಡಿದನು. ಹಾಗೆ ನನ್ನ ಹಸಿರು ಜಾಹೀರಾತಿನ ಪುಟ ಸಂಖ್ಯೆ ಏಳರಲ್ಲಿ ಆ ಎರಡನೇ ಮಗು ಹುಟ್ಟುವ ಬಗ್ಗೆ ಈ ಸುವಾರ್ತೆ ಇದೆ. ಅವನ ಎರಡನೆಯ ಹೆಸರು ಮೆಹ್ಮೂದ್ ಎಂದಾಗಿದೆ. ಅವನು ಇಲ್ಲಿಯವರೆಗೆ ಅಂದರೆ ಅದು ಒಂದನೇ ಸೆಪ್ಟೆಂಬರ್ 1988 ಆಗಿದೆ, ಹುಟ್ಟಿರಲಿಲ್ಲ. ಆದರೆ ಅಲ್ಲಾಹನು ತನ್ನ ವಾಗ್ದಾನದಂತೆ ತನ್ನ ಅವಧಿಯೊಳಗೆ ಅವಶ್ಯವಾಗಿ ಹುಟ್ಟುವನು, ಭೂವ್ಯಾಕಾಶ ಪಲ್ಲಟಗೊಳ್ಳಬಹುದು. ಆದರೆ ಅವನ ವಾಗ್ದಾನಗಳು ಪಲ್ಲಟವಾಗುವುದು ಅಸಾಧ್ಯ. ಇದಾಗಿದೆ ಬರಹ ಹಸಿರು ಜಾಹೀರಾತು ಪುಟ 7ರ ಮೇಲೆ, ಅದರಂತೆ ಜನವರಿ 1889 ರಲ್ಲಿ ಮಗು ಹುಟ್ಟಿತು. ಅವನ ಹೆಸರು ಮೆಹಮೂದ್ ಎಂದಿಡಲಾಯಿತು. ಮತ್ತು ಅವನು ಅಲ್ಲಾಹನ ಅನುಗ್ರಹದಿಂದ ಇಲ್ಲಿಯವರೆಗೆ ಜೀವಂತನಾಗಿದ್ದಾನೆ. ಈಗ 17ನೇ ವಯಸ್ಸಿನಲ್ಲಿದ್ದಾನೆ. (ಹಖೀಖತುಲ್ ವಹಿ, ರೂಹಾನಿ ಖಝಾಈನ್, ಸಂಪುಟ–22, ಪುಟ–473–473)

ಹಖೀಖತುಲ್ ವಹಿಯಲ್ಲಿ ಹುಝೂರ್(ಅ) ಪುಟ ಸಂಖ್ಯೆ 34ನೇ ದೃಷ್ಟಾಂತದಲ್ಲಿ ಹಸಿರು ಜಾಹೀರಾತಿನ ಆಧಾರದಲ್ಲಿ ಹಝ್ರತ್ ಸಾಹಿಬ್ಜಾದ ಮಿರ್ಝಾ ಬಶೀರುದ್ದೀನ್ ಮೆಹಮೂದ್ ಅಹ್ಮದ್ ಸಾಹಿಬ್‌ರವರ ಜನ್ಮದ

ವಿವರ ಹೀಗೆ ನೀಡಿದ್ದಾರೆ. "ನಾನು ಹಸಿರು ಜಾಹೀರಾತಿನಲ್ಲಿ ಸಾವಿರಾರು ಮಿತ್ರರಲ್ಲಿ ಮತ್ತು ಶತ್ರುಗಳಲ್ಲಿ ಈ ಭವಿಷ್ಯವಾಣಿ ಪ್ರಕಟಿಸಿದ್ದೆ. ಇನ್ನೂ 70 ದಿನಗಳೂ ಮಗುವಿನ ಸಾವಿನಲ್ಲಿ ಕಳೆದಿರಲಿಲ್ಲ. ಈ ಮಗು ಹುಟ್ಟಿದೆ ಮತ್ತು ಮಗುವಿನ ಹೆಸರು ಮೆಹಮೂದ್ ಅಹ್ಮದ್ ಎಂದಿಡಲಾಗಿದೆ.
(ಹಖೀಖತುಲ್ ವಹಿ, ರೂಹಾನಿ ಖಝಾಈನ್, ಸಂಪುಟ-22, ಪುಟ-227)

ಪ್ರಾರಂಭದಲ್ಲೇ ವಿವರಿಸಲಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಹಸಿರು ಜಾಹೀರಾತಿನಲ್ಲಿ ಅಲ್ಲಾಹನ ಎರಡು ಕರುಣೆಗಳ ವಿಧಗಳ ಬಗ್ಗೆ ವಿವರ ನೀಡಿದ್ದಾರೆ. ಮೊದಲನೇ ವಿಧಕ್ಕೆ ದಿವಂಗತ ಬಶೀರ್ ಪ್ರಥಮ ಅದಕ್ಕೆ ಉದಾಹರಣೆಯಾಗಿದ್ದ. ಕರುಣೆಯ ಎರಡನೆಯ ವಿಧ (ಅಂದರೆ ನಬಿ, ರಸೂಲ್, ಅವಲಿಯಾ ಮತ್ತು ಖಲೀಫರು) ಅದಕ್ಕಾಗಿ ಎರಡನೇ ಬಶೀರ್ ನೀಡುವ ವಾಗ್ದಾನ ಮಾಡಿದರು. ಅವನ ಹೆಸರು ಮೆಹ್‌ಮೂದ್ ಎಂದು ತೋರಿಸಿದನು. ಈ ಮಾತು ನನಗೆ ಸ್ಪಷ್ಟಗೊಂಡಿದೆ. ಹುಝೂರ್(ಅ) ತನ್ನ ಒಬ್ಬ ಮಗನ ಹೆಸರೇ ಬಶೀರ್ ಮತ್ತು ಮಹ್ಮೂದ್ ಎಂದಿಟ್ಟರು. ಮತ್ತು ಯಾವ ಪುತ್ರನ ಹೆಸರು ಮೆಹ್‌ಮೂದ್ ಎಂದಿಡಲಿಲ್ಲ. ಹಾಗೆ ಹಸಿರು ಜಾಹಿರಾತಿನಲ್ಲಿ ಅದೇ ಬಶೀರ್ ಮತ್ತು ಮೆಹ್‌ಮೂದನಿಗೆ ಹುಝೂರ್ ದೃಢ ನಿರ್ಧಾರ ಉಳ್ಳವನು ಎಂದು ಕರೆದಿದ್ದರು.

ಹಝ್ರತ್ ಮಸೀಹ್ ಮೌಊದ್(ಅ) ಇದೇ ವಾಗ್ದತ್ತ ಪುತ್ರನ ಬಗ್ಗೆ ಇನ್ನೂ ಇವರ ಸ್ಥಳಗಳಲ್ಲೂ ವಿವರಿಸಿದರು. ಉದಾಹರಣೆಗೆ ಹುಝೂರ್(ಅ) ತನ್ನ ಗ್ರಂಥ "ಆಯಿನ ಕಮಾಲಾತೆ ಇಸ್ಲಾಂನಲ್ಲಿ ವಾಗ್ದತ್ತ ಪುತ್ರ (ಮುಸ್ಲಿಹ್ ಮೌಊದ್) ಭವಿಷ್ಯವಾಣಿಯನ್ನು ವಿವರಿಸಿ ಕೆಳಗೆ ಟಿಪ್ಪಣಿಯಲ್ಲಿ ಬರೆಯುತ್ತಾರೆ.

ಅನುವಾದ: ಹಝ್ರತ್ ರಸೂಲುಲ್ಲಾಹ್(ಸ) ಈ ಸುವಾರ್ತೆ ನೀಡಿದ್ದಾಗಿದೆ. ವಾಗ್ದತ್ತ ಮಸೀಹರು ಆಗಮಿಸಿದಾಗ ಮದುವೆ ಮಾಡಿಕೊಳ್ಳುವವನು ಮತ್ತು ಅವನಿಗೆ ಸಂತಾನವು ಆಗುವುದು ಅದರಲ್ಲಿ ವಿವರಿಸಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಅಲ್ಲಾಹನು ಅವರಿಗೆ (ವಾಗ್ದತ್ತ ಮಸೀಹರಿಗೆ) ಒಬ್ಬ ಸಜ್ಜನ ಪುತ್ರ ನೀಡುವನು. ಅವನು ತನ್ನ ತಂದೆಯ ಸಾದೃಶ್ಯರೂಪವಾಗುವನು ಮತ್ತು ತನ್ನ ತಂದೆಯ ವಿರೋಧವಾಗಿ ನಡೆದುಕೊಳ್ಳುವುದಿಲ್ಲ. ಅವನು ಅಲ್ಲಾಹ ಗೌರವಸ್ಥ ದಾಸರಲ್ಲಿ ಪರಿಗಣಿಸಲ್ಪಡುವನು. ಅಲ್ಲಾಹನು ತನ್ನ ಸಂದೇಶವಾಹಕರಿಗೆ ಸಂತಾನದ ಸುವಾರ್ತೆ ಅವನು ಸಜ್ಜನ ಆದ ವಿಧಿ ಪಡೆದಾಗಲೇ ನೀಡುತ್ತಾನೆ. ಈ ವಾಗ್ದತ್ತ ಪುತ್ರನ ಸುವಾರ್ತೆ ನನಗೆ ಹಲವು ವರ್ಷ ಹಿಂದೆಯೇ ಕೊಡಲಾಗಿತ್ತು. ತನ್ನ ದಾವೆ (ಮಸೀಹ ಮಹದಿ) ಯ ಮೊದಲೇ. (ಆಯಿನಾ ಕಮಾಲಾತೆ ಇಸ್ಲಾಮ್, ರೂಹಾನಿ ಖಝಾಈನ್, ಸಂಪುಟ-5, ಪುಟ-578 ಟಿಪ್ಪಣಿ).

ಮತ್ತೆ ಹುಝೂರ್(ಅ) ತನ್ನ ಗ್ರಂಥ ಇಜಾಝುಲ್ ಮಸೀಹ್‌ನಲ್ಲಿ ನುಡಿಯುತ್ತಾರೆ.

"ಅನುವಾದ: ನಾವು (ಅಂದರೆ ಹಝ್ರತ್ ಮಸೀಹ್ ಮೌಊದ್(ಅ) ಈ ಲೋಕದಿಂದ ಅಗಲಿದಾಗ ಮತ್ತೆ ಅಂತ್ಯ ದಿನದವರೆಗೆ ಯಾವ ಮಸೀಹರು ಬರುವುದಿಲ್ಲ. ಆಕಾಶದಿಂದಲೂ ಇಳಿಯುವುದಿಲ್ಲ. ಗುಹೆಯಿಂದಲೂ ಹೊರಡುವುದಿಲ್ಲ. ಅವನ ವಾಗ್ದತ್ತ ಪುತ್ರನ ಹೊರತು ಅವನ ಬಗ್ಗೆ ಮೊದಲೇ ತನ್ನ ಪ್ರಭುವಿನ ಗ್ರಂಥದಲ್ಲಿ ವಿವರ ಬಂದಿದೆ. (ಇಜಾಝುಲ್ ಮಸೀಹ್, ರೂಹಾನಿ ಖಝಾಈನ್, ಸಂಪುಟ-18, ಪುಟ-73)

ಮತ್ತು ಅದರ ಟಿಪ್ಪಣಿಯಲ್ಲಿ ಹುಝೂರ್(ಅ) **ಫಯತಝುವ್ವಜು ವಯೂಲದು ಲಹು** ಹದೀಸಿನ ಆಧಾರ ನೀಡಿದ್ದಾರೆ.

ಹುಝೂರ್(ಅ) ತನ್ನ ವಾಗ್ದತ್ತ ಪುತ್ರನ ಭವಿಷ್ಯವಾಣಿಯನ್ನು ಹಝುರತ್ ರಸೂಲುಲ್ಲಾಹ್(ಸ) ರವರ ಹದೀಸು **ಫಯತಝುವ್ವಜು ವ ಯೂಲದು ಲಹು** ಯಿಂದ ಜೋಡಿಸಿರುವುದು ಸಾಬೀತುಪಡಿಸುತ್ತದೆ. ಈ ಪುತ್ರ ದೈಹಿಕ ಸಂತಾನ ಆಗಬೇಕಿತ್ತು. ಭವಿಷ್ಯದಲ್ಲಿ ಆಧ್ಯಾತ್ಮಿಕ ನೆಲೆಯಲ್ಲಿ ಯಾವುದೇ ಕಾಲದ ವಿವರ ಇದ್ದರೆ ಈ ಭವಿಷ್ಯವಾಣಿಯನ್ನು ಈ ಹದೀಸಿಗೆ ಜೋಡಿಸುವ ಅಗತ್ಯವಿರಲಿಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ.

"ಅಲ್ಲಾಹನು ನನಗೆ ಸಂದೇಶ ನೀಡಿರುವನು. ನಾನು ನಿನ್ನ ಜಮಾಅತಿಗಾಗಿ ನಿನ್ನ ವಂಶದಿಂದಲೇ ಒಬ್ಬ ವ್ಯಕ್ತಿಯನ್ನು ನಿಯುಕ್ತಗೊಳಿಸುವೆನು. ಮತ್ತು ಅವನಿಗೆ ನನ್ನ ಸಾಮಿಪ್ಯ ಹಾಗೂ ದಿವ್ಯವಾಣಿಯಿಂದ ವಿಶಿಷ್ಟಗೊಳಿಸುವೆನು ಮತ್ತು ಅವನ ಮೂಲಕ ಧರ್ಮ ಅಭಿವೃದ್ಧಿಗೊಳ್ಳುವುದು. ಹಲವು ಜನರು ಸತ್ಯವನ್ನು ಸ್ವೀಕರಿಸುವರು. ಆದುದರಿಂದ ಆ ದಿನಕ್ಕಾಗಿ ಕಾಯಿರಿ ಮತ್ತು ನಿಮಗೆ ನೆನಪಿರಲಿ. ಪ್ರತಿಯೊಬ್ಬರು ಅವನಿಂದ ಗುರುತಿಸಲ್ಪಡುವರು, ಸಮಯಕ್ಕಿಂತ ಮುಂಚೆ ಅವನು ನಿಮಗೆ ಸಾಮಾನ್ಯ ಮನುಷ್ಯನಂತೆ ಕಂಡು ಬರಬಹುದು. ಅಥವಾ ಮೋಸವಾಡುವವರ ದೃಷ್ಟಿಯಲ್ಲಿ ನಿಂಧನೆಗೆ ಅರ್ಹರೆಂದು ಕಂಡು ಬರಬಹುದು. ಸಮಯಕ್ಕಿಂತ ಮುಂಚೆ ಒಬ್ಬ ಪರಿಪೂರ್ಣಗೊಳ್ಳುವ ಮನುಷ್ಯನು ಸಹ ಹೊಟ್ಟೆಯಲ್ಲಿ ಕೇವಲ ಒಂದು ವೀರ್ಯ ಅಥವಾ ಗರ್ಭಾಶಯದಲ್ಲಿ ಅಂಟಿಕೊಳ್ಳುವ ಮಾಂಸಪಿಂಡವಾಗಿರುತ್ತಾನೆ.

(ರಿಸಾಲಾ ಅಲ್ ಮಸೀಯ್ಯತ್, ರೂಹಾನಿ ಖಝಾಈನ್, ಸಂಪುಟ-20, ಪುಟ-306 ಟಿಪ್ಪಣಿ)

ಹಸಿರು ಜಾಹೀರಾತಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಈ ದ್ವಿತೀಯ ಬಶೀರ್ ಮತ್ತು ಮೆಹಮೂದನಿಗೆ ಪ್ರವಾದಿಗಳ, ಸಂದೇಶವಾಹನಕ್ಕೆ ಸಜ್ಜನರ ಹಾಗೂ ಖಲೀಫರ ಅನುಗ್ರಹಿತ ವಂಶ ಎಂದು ಹೇಳಿರಬೇಕು. ಹಾಗೆಯೇ ರಿಸಾಲಾ ಅಲ್ ವಸೀಯ್ಯತ್‌ನಲ್ಲಿ ಈ ಮಾತನ್ನು ಪ್ರಸ್ತಾಪಿಸಿ "ಅವನು ಅಲ್ಲಾಹನ ಶಕ್ತಿಯ ಸಾಕ್ಷಾತ್ ರೂಪವಾಗಿದ್ದಾನೆ. ನನ್ನ ನಂತರ ಕೆಲ ಬೇರೆ ವ್ಯಕ್ತಿಗಳು ಬರಬಹುದು. ಅವರು ದ್ವಿತೀಯ ಶಕ್ತಿಯ ಪ್ರಕಟಣೆ ಆಗುವರು." ದ್ವಿತೀಯ ಶಕ್ತಿಯ ಪ್ರಕಟಣೆಯ ವ್ಯಕ್ತಿಗಳಲ್ಲಿ ತನ್ನ ವಾಗ್ದತ್ತ ಪುತ್ರನನ್ನು ಸಹ ಸೇರಿಸಿದರು. ಹಾಗೆ ಇದೇ ಭವಿಷ್ಯವಾಣಿಯ ಪ್ರಕಾರ ದ್ವಿತೀಯ ಶಕ್ತಿಯ ಮೊದಲ ಪ್ರಕಟಣೆಯು ಹಝ್ರತ್ ಹಕೀಮ್ ಮೌಲಾನ ನೂರುದ್ದೀನ್ ಸಾಹಿಬ್(ರ) ಅವರ ನಿಧನ ನಂತರ ಅಲ್ಲಾಹನು ಹಝ್ರತ್ ಅಖದಸ್(ಅ) ಅವರ ವಂಶದಿಂದಲೇ ಆ ವಾಗ್ದತ್ತ ಪುತ್ರ ಅಂದರೆ ಬಶೀರ್ ದ್ವಿತೀಯರು ದ್ವಿತೀಯ ಶಕ್ತಿಯ ದ್ವಿತೀಯ ಪ್ರಕಟಣೆಯಾಗಿ ಆಯ್ಕೆಗೊಂಡರು. ಹಝುರತ್ ಅಖದಸ್ (ಅ) ಹೇಳಿದಂತೆ "ಪ್ರತಿಯೊಬ್ಬರು ಅವರಿಂದ ಗುರುತಿಸಲ್ಪಡುವರು: ಹಾಗೆ ಬಂದ ಸಮಯವು ಸಾಬೀತು ಮಾಡಿ ತೋರಿತು. ಅದೇ ಮಿರ್ಝಾ ಬಶೀರುದ್ದೀನ್ ಮೆಹ್ಮೂದ್ ಅಹ್ಮದ್ ಅವರೇ ಅಲ್ ಮುಸ್ಲಿಹ್ ಮೌಊದ್ ಆಗಿರುವರು ಎಂದು ಮತ್ತು ಅಲ್ಲಾಹನು ಮುಸ್ಲಿಹ್ ಮೌಊದ್‌ರವರ ಭವಿಷ್ಯವಾಣಿಗೋಸ್ಕರ ಯಾವ ಕುರುಹುಗಳನ್ನು ನೀಡಿದ್ದನೋ. ಅವು ಒಂದು ಮಾಡಿ ಎಲ್ಲವೂ ಹಝುರತ್ ಸಾಹಿಬ್ಝಾದ ಮಿರ್ಝಾ ಬಶೀರುದ್ದೀನ್ ಮೆಹಮೂದ್ ಅಹ್ಮದ್(ರ) ಅವರ ವ್ಯಕ್ತಿತ್ವದಲ್ಲಿ ಪೂರ್ಣಗೊಂಡವು.

1906 ರಲ್ಲಿ ಹಝುರತ್ ಸಾಹಿಬ್ಝಾದ ಮಿರ್ಝಾ ಬಶೀರುದ್ದೀನ್ ಮೆಹ್ಮದ್ ಅಹ್ಮದ್ ಸಾಹಿಬ್ ಅಲ್ ಮುಸ್ಲಿಹ್ ಮೌಊದ್(ರ) ಒಂದು ಖಾಸಗಿ ಕೆಲಸ ನಿಮಿತ್ತ ಲಾಹೋರ್‌ಗೆ ಹೋಗಿದ್ದರು. ಆ ಸಂದರ್ಭದಲ್ಲಿ ಮುನ್ಶಿ ಮೆಹಬೂಬ್ ಆಲಂ ಸಂಪಾದಕರು ಪೈಸಾ ಪತ್ರಿಕೆ, ಸಾಹಿಬ್ಝಾದ ಸಾಹಿಬರ ಆಗಮನ ಕುರಿತು ವಾರ್ತೆ ನೀಡುತ್ತಾ ವ್ಯಂಗ್ಯ ಮಾಡಿ ಬರೆದರು. "ಹಿರಿಯ ಮಗ ಸಂತಾನ ಉಳ್ಳವನಾಗಿದ್ದೇನೆ. ಆದರೆ Middle ಫೇಲ್ ಆಗಿದ್ದಾನೆಂದು ತಿಳಿದುಬಂದಿದೆ. ಮಿರ್ಝಾಜಿಯ ನಂತರ ಇದೇ ಹುಡುಗ ಅವರ ಉತ್ತರಾಧಿಕಾರಿ ಆದರೆ ಧರ್ಮವನ್ನು ಚೆನ್ನಾಗಿ ಮುನ್ನಡೆಸುತ್ತಾನೆ.
(ಆಧಾರ ಅಖ್ಬಾರ್ ಅಲ್ ಹಕಮ್, 17 ಜುಲೈ 1906, ಪುಟ-2. ಕಲಂ-4)

ಪೈಸಾ ಪತ್ರಿಕೆಯ ಇದೇ ವಾರ್ತೆಯನ್ನು ಮುಂದಿಟ್ಟುಕೊಂಡು ಅಲ್-ಹಕಮ್ ಪತ್ರಿಕೆಯ ಸಂಪಾದಕರಾಗಿದ್ದ ಹಝ್ರತ್ ಶೇಖ್ ಯಾಖೂಬ್ ಅಲಿ ಇರ್ಫಾನಿ ಸಾಹಿಬ್(ರ) ತಮ್ಮ ಪತ್ರಿಕೆಯಲ್ಲಿ ಅದಕ್ಕೆ ತಕ್ಕುದಾದ ಉತ್ತರ ನೀಡಿದ್ದರು. ಆದರೆ ಇನ್ನೊಂದು ಉತ್ತರ ಅಲ್ಲಾಹನು ಅದೇ ಹುಡುಗನ ಬಗ್ಗೆ, ಅವರ ಬಗ್ಗೆ ಹೇಳಲಾಗಿತ್ತು. "ಮಿರ್ಝಾಜಿಯ ನಂತರ ಇದೇ ಹುಡುಗ ಅವರ ಉತ್ತರಾಧಿಕಾರಿಯಾದರೆ ಧರ್ಮ ಚೆನ್ನಾಗಿ ನಡೆಸುತ್ತಾರೆ." ಅಹ್ಮದಿಯಾ ಜಮಾಅತಿನ ಎರಡನೇ ಖಲೀಫರಾಗಿ ಲೋಕಕ್ಕೆ ತೋರಿಸಿದರು. ಅವರ ಮೂಲಕವೇ ಅಹ್ಮದಿಯತ್ ಲೋಕದ ಮೂಲೆ ಮೂಲೆಯವರೆಗೆ ತಲಪಿತು. ಅವರ ವ್ಯಕ್ತಿತ್ವದಿಂದಲೇ ಸಮುದಾಯಗಳು ಅನುಗ್ರಹಿತರಾದರು. ಅವರ ವ್ಯಕ್ತಿತ್ವದಿಂದಲೇ ಇಸ್ಲಾಂ ಧರ್ಮದ ಗೌರವ ಮತ್ತು ಪವಿತ್ರ ಖುರ್‌ಆನ್‌ನ ಉನ್ನತಿ ಜನರಿಗೆ ತಿಳಿಯಿತು. ಅವರ ಮಸೀಹಿ ಆತ್ಮದಿಂದಲೇ ಮತ್ತು ರೂಹುಲ್ ಖುದುಸ್ (ಪವಿತ್ರಾತ್ಮ) ರ ಅನುಗ್ರಹದಿಂದ ಹಲವರು ರೋಗಗಳಿಂದ ಮುಕ್ತರಾದರು. ಅವರ ತೀಕ್ಷ್ಣ ಬುದ್ದಿ ಮತ್ತು ಜ್ಞಾನದಿಂದ ಒಂದು ಲೋಕವೇ ಪ್ರಯೋಜನ ಪಡೆಯಿತು. ಮತ್ತು ಖೈದಿಗಳ ಬಿಡುಗಡೆಗೆ ಕಾರಣರಾದರು. ಇದೇ ಹಡುಗ ಶತ್ರುಗಳ ಮತ್ತು ದ್ವೇಷಭರಿತ ವಿರೋಧ, ಶಾಪಗಳು, ಬೈಯ್ಯುಗಳು, ದ್ವೇಷ ಮತ್ತು ಪಿತೂರಿಗಳ ನಡುವೆ ಪುಟಿದೆದ್ದು ಭೂಮಿಯ ಮೂಲೆ ಮೂಲೆಯವರೆಗೆ ಖ್ಯಾತಿ ಪಡೆದರು.

ಹಝ್ರತ್ ಅಖದಸ್(ಅ) ರವರ ಈ ಮಾತು ಎಷ್ಟು ಸ್ಪಷ್ಟವಾಗಿ ಪೂರ್ಣಗೊಂಡಿದೆ. ನಾನು ಬಲ್ಲೆನು ಯಾವ ಮಾತುಗಳನ್ನು ಪ್ರಕಟಪಡಿಸಲು ನಾನು ನಿಯುಕ್ತಗೊಂಡಿದ್ದೇನೆ. ಬದಲಾಗುತ್ತಿರುವ ಈ ಕಾಲ ಅನುಮಾನಗಳಿಂದ ತುಂಬಿದೆ. ಅವರು ಎಷ್ಟೇ ಅನುಮಾನ ಮತ್ತು ಎಂತಹ ಅಪಹಾಸ್ಯದಿಂದ ನೋಡಲಿ. ಆದರೆ ಭವಿಷ್ಯದ ಕಾಲವು ಅವನಿಂದ ಬಹಳಷ್ಟು ಪ್ರಯೋಜನ ಪಡೆಯುತ್ತದೆ." (ಮಕ್ತೂಬಾತ್ ಅಹ್ಮದ್, ಸಂಪುಟ-1, ಪುಟ-305, ಹೊಸ ಸಂಚಿಕೆ)

ಓ ಅಲ್ಲಾಹನ ಪವಿತ್ರ ಮಸೀಹ್ ವ ಮಹದಿ! ನಿಮ್ಮ ಮೇಲೆ ಸಾವಿರಾರು ಅನುಗ್ರಹಗಳು ಮತ್ತು ಸಾವಿರಾರು ಸಲಾಂ (ಶಾಂತಿ) ಇರಲಿ, ನಾವು ನಿಮ್ಮ ಮಾರ್ಗದರ್ಶಿತ ಕುರುಹುಗಳನ್ವಯ ಆ ಮುಸ್ಲಿಹ್ ಮೌಊದ್ (ವಾಗ್ದತ್ತ ಪುತ್ರ) ರನ್ನು ಗುರುತಿಸಿದೆವು. ಮತ್ತು ಅವರ ಅನುಗ್ರಹಿತ ವ್ಯಕ್ತಿತ್ವದಿಂದ ಲಾಭಾನ್ವಿತರಾದೆವು ಮತ್ತು ಮುಕ್ತಿ ಹಾಗೂ ಯಶಸ್ಸಿನ ಮಾರ್ಗಗಳಿಂದ ಸೂಚಿತರಾದೆವು.

*************

## ಶುದ್ಧಿ ಆಂದೋಲನ ಮತ್ತು ಮುಸ್ಲಿಹ್ ಮೌಊದ(ರ) ರ ಭವಿಷ್ಯವಾಣಿಯೊಂದಿಗೆ ಅದರ ವಿಶೇಷ ಸಂಬಂಧ

(ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ(ರ))

ಇಪ್ಪತ್ತನೇ ಶತಮಾನದ ಹೊಸ್ತಿಲಿನಲ್ಲಿ ಕೆಲ ನಿಷ್ಠಾವಂತ ಮುಸ್ಲಿಂ ಮುಖಂಡರಿಗೆ ಈ ದುಃಖದಾಯಕ ಸುದ್ದಿ ತಲುಪಿತು. ನದ್ವತುಲ್ ಉಲಮಾ ಮತ್ತು ಅಲಿಗಢ ಮುಸ್ಲಿಂ ವಿಶ್ವವಿದ್ಯಾನಿಲಯದ ಆಸುಪಾಸಿನಲ್ಲಿ ವಾಸಿಸುವ ಕೆಲ ಮಲ್ಕಾನ್ ರಾಜಪೂತರನ್ನು ಹಿಂದೂ ಪಂಡಿತರು "ಶುದ್ಧಿ" ಮೂಲಕ ಇಸ್ಲಾಮಿನಿಂದ ದೂರ ಮಾಡುತ್ತಿದ್ದಾರೆ. ಮೌಲಾನ ಶಿಬ್ಲಿ ನೋಮಾನಿ ಅವರಿಗೆ ಈ ಸುದ್ದಿಯಿಂದ ಎಷ್ಟೊಂದು ವ್ಯಥೆಯಾಯಿತೆಂದರೆ ಅವರ ರೋಷದಿಂದ ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು.

ನಾನು ಇಲ್ಲಿಂದ ಹೊರಡುವಾಗ ನನ್ನ ಸ್ಥಿತಿ ಹೇಗಿತ್ತು. ಈ ನದ್ವದ ವಿದ್ಯಾರ್ಥಿಗಳು ಇಲ್ಲಿ ಕುಳಿತುಕೊಂಡಿದ್ದಾರೆ. ಅವರುಗಳು ಇದಕ್ಕೆ ಸಾಕ್ಷಿಯಾಗಿದ್ದಾರೆ. ನಾನು ಆ ಸಮಯ ಎಲ್ಲ ರೀತಿಯ ಬಯ್ಗುಳಗಳನ್ನು ಬಳಸಿ ಹೇಳಿದ್ದೆ. ಈ ನಾಚಿಕೆಗೆಕೆಟ್ಟವರೆ! ಓ ನತದೃಷ್ಟರೇ! ನೀರಿನಲ್ಲಿ ಮುಳುಗಿ ಸಾಯಿರಿ. ಇಂತಿಂತಹ ಘಟನೆಗಳು ಎದುರಾಗಿವೆ. ಸದ್ಯಕ್ಕೆ ಬೆಂಕಿ ಹಚ್ಚಿರಿ ಮತ್ತು ಅಲಿಗಢವನ್ನು ಮಣ್ಣು ಮಾಡಿರಿ, ಇದೇ ಪದಗಳು ಆಗ ನಾನು ಬಳಸಿದ್ದೆ, ಇಂದು ಸಹ ಇದೇ ಹೇಳುತ್ತಿದ್ದೇನೆ. (ಹಯಾತ್ ಶಿಬ್ಲಿ, ಪುಟ 557–558)

ಈ ಸ್ಥಿತಿಯನ್ನು ನಿವಾರಿಸಲು ಅವರು ಏಪ್ರಿಲ್ 1912 ರಂದು ಅವರು ಲಖ್ನೌದಲ್ಲಿ ಭಾರತದ ಎಲ್ಲಾ ಮುಸ್ಲಿಂ ಮುಖಂಡರ ಒಂದು ಸುದ್ದಿಗೋಷ್ಠಿ ಏರ್ಪಡಿಸಿದರು. ಅಲ್ಲಾಹ್ ಶಿಬ್ಲಿಯರ ಜಿವನ ಚರಿತ್ರೆ ಬರೆದಿರುವ ಮೌಲಾನ ಸಯ್ಯದ್ ಸುಲೇಮಾನ್ ನದ್ವಿ ಈ ಘಟನೆಯ ವಿವರ ನೀಡುತ್ತಾ ಹೇಳುತ್ತಾರೆ. "ಮೌಲಾನಾ ಬಯಸುತ್ತಿದ್ದರು. ಇಸ್ಲಾಮಿನ ಪ್ರಚಾರದ ಕಾರ್ಯ ಎಲ್ಲ ಪಂಥಗಳು ಸೇರಿ ಮಾಡಬೇಕು. ಅದಕ್ಕಾಗಿಯೇ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹಿಬ್) ಅವರು ಖಲೀಫರಾಗಿ ಖಾದಿಯಾನಿನಲ್ಲಿದ್ದಾರೆ ಮತ್ತು ಖಾಜಾ ಕಮಾಲುದ್ದೀನ್ ಸಾಹಿಬ್ ಅವರನ್ನು ಸಹ ಭಾಗವಹಿಸುವಿಕೆಯಿಂದ ದೂರ ಮಾಡಲಿಲ್ಲ. ಹಾಗೆ ಅದೇ ಸಮಾವೇಶದ ನಡುವೆ ಮೌಲಾನರವ ಮೇಲೆ ಆರೋಪ ಹೊರಿಸಲಾಯಿತು. ಅವರು ಖಾದಿಯಾನಿಗಳಿಗೆ ಸಮಾವೇಶದಲ್ಲಿ ಏಕೆ ಕರೆದರು? ಅವರಿಗೆ ಭಾಷಣದ ಅನುಮತಿ ಏಕೆ ಕೊಟ್ಟರು?. (ಹಯಾತ್ ಶಿಬ್ಲಿ, ಪುಟ–569)

ಅದರ ಪರಿಣಾಮ ಮೌಲಾನ ಶಿಬ್ಲಿ ಅವರ ಮೆಲೆ ಏನಾಯಿತೆಂದರೆ ಮೌಲಾನಾ ರೋಗಗ್ರಸ್ಥರಾದರು. ಅಸಮಾಧಾನಗೊಂಡು ಮೌಲ್ವಿ ಅಬ್ದುಸ್ಸಲಾಮ್ ಸಾಹಿಬ್ ಮತ್ತು ಸೀರತ್ ತೆಗೆದುಕೊಂಡು ಮುಂಬಯಿ ಹೊರಟು ಹೋದರು. ಎರಡು ಮೂರು ತಿಂಗಳ ವಿಚಾರ ಮಥನದ ನಂತರ ಜುಲೈ 1913 ರಂದು ನದ್ವದಿಂದ ರಾಜಿನಾಮೆ ನೀಡಿ ಹೊರ ಬಂದರು. ಹೀಗೆ ಎಲ್ಲ ಯೋಜನೆಗಳು ಅಸ್ತವ್ಯಸ್ತವಾಯಿತು. (ಹಯಾತೆ ಶಿಬ್ಲಿ, ಪುಟ–573).

ಈ ಘಟನೆಯ ನಂತರ ಮಲ್ಕಾನದ ಹಿಂದೂ ಪಂಡಿತರು ಸತತ ಪ್ರಯತ್ನ ಮಾಡಿ "ಶುದ್ಧಿ' ಯಲ್ಲಿ ತೊಡಗಿಕೊಂಡರು. ಆದರೆ ಮುಸಲ್ಮಾನ ಉಲಮಾಗಳು ಖಾದಿಯಾನಿಗನ್ನು ಇಸ್ಲಾಮಿ ಜಿಹಾದಿನಲ್ಲಿ ಸೇರಿಸಲಿಲ್ಲ ಎಂಬ ವಿಜಯದ ಸಮತೋಷದಲ್ಲಿ ಮನೆಯಲ್ಲಿ ಮಲಗಿಕೊಂಡರು. ಸಮಯ ಕಳೆಯುತ್ತಾ ಹೋಯಿತು. ಕೊನೆಗೆ ಮಾರ್ಚ್ 1923 ರ ಒಂದು ಅಶುಭ ಮುಂಜಾನೆ ಭಾರತದ ಮುಸಲ್ಮಾನರ ಮೇಲೆ ಹೇಗೆ ಉದಯವಾಯಿತೆಂದರೆ ಆರ್ಯ ಸಮಾಜದ ಮುಖಂಡರು ತಮ್ಮ ವಿಜಯದ ಪತಾಕೆ ಹಾರಿಸತೊಡಗಿದರು. ಇಸ್ಲಾಮಿನ ಕಡು ವೈರಿ ಶ್ರದ್ಧಾನಂದಾ ತುಂಬಾ ಗರ್ವದಿಂದ ಹೀಗೆ ಘೋಷಣೆ ಕೂಗುತ್ತಿದ್ದ.

"ಆಗ್ರಾದ ಆಸುಪಾಸಿನ ರಜಪೂತರನ್ನು ಬಹು ವೇಗವಾಗಿ ಶುದ್ಧಿಗೊಳಿಸಲಾಗುತ್ತಿದೆ. ಇಲ್ಲಿಯವರೆಗೆ ನಲ್ವತ್ತು ಸಾವಿರ ಮೂರು ನೂರ ಮಲ್ಕಾನ ರಾಜಪೂತರು, ಗೋಜರ್ ಮತ್ತು ಜಾಟ್ ಹಿಂದೂಗಳಾಗಿದ್ದಾರೆ. ಇಂತಹ ಜನರು ಭಾರತದ ಎಲ್ಲ ಭಾಗಗಳಲ್ಲಿ ಲಭ್ಯವಿರುತ್ತವೆ. ಇವರು ಐವತ್ತು ಅರವತ್ತು ಲಕ್ಷಗಳಿಗಿಂತ ಕಡಿಮೆ ಇಲ್ಲ. ಹಿಂದೂ ಸಮಾಜ ಅವರನ್ನು ತಮ್ಮೊಂದಿಗೆ ಸೇರಿಸುವ ಕಾರ್ಯ ಮುಂದುವರೆಸಿದರೆ ಅದರ ಸಂಖ್ಯೆ ಒಂದು ಕೋಟಿಯಾಗುವುದರಲ್ಲಿ ಯಾವ ಸಂಶಯವು ಇಲ್ಲ.
(ಅಖ್ಬಾರ್ ಪ್ರತಾಪ್ ಲಾಹೋರ್, 16 ಮಾರ್ಚ್ 1923, ಪುಟ 14).

ಈ ಘೋಷಣೆ ಒಂದು ಭಯಾನಕ ಅಣುಬಾಂಬಿನ ಸ್ಫೋಟಕ್ಕಿಂತ ಕಡಿಮೆಯೇನೂ ಆಗಿರಲಿಲ್ಲ. ಅದು ಪೂರ್ವದಿಂದ ಪಶ್ಚಿಮದ ಭಾರತದ ಮುಸ್ಲಮಾನರಿಗೆ ದಿಗಿಲುಂಟಾಗುವಂತೆ ಮಾಡಿತು ಮತ್ತು ಅವರ ಎದೆಗೂಡುಗಳು ಸೀಳಿಹೋಗುವಂತೆ ಹಾಗೂ ಮನಕಲುಕುವ ರೀತಿಯಲ್ಲಿ ಎಚ್ಚರಿಸದಂತಾಯಿತು. ಹಿಂದೂಗಳು ಕೇವಲ ಈ ಘೋಷಣೆಗೆ ಇಲ್ಲಿಲ್ಲ. ಬದಲು ಈ ಶುದ್ಧಿ ಆಂದೋಲನ ಇಡೀ ಭಾರತದಲ್ಲಿ ಪಸರಿಸಲು ಒಂದು ಶಂಖೆಯನ್ನು ಬಾರಿಸಿದರು. ಅದರ ಪರಿಣಾಮವೇನಾಯಿತೆಂದರೆ ಮುಸಲ್ಮಾನರಲ್ಲಿ ಎಲ್ಲ ಕಡೆಯೂ ಹಾಹಾಕಾರ ಉಂಟಾಯಿತು. ಮುಸ್ಲಿಂ ಪತ್ರಿಕೆಗಳು ಬಹಳ ಪ್ರಭಾವಿತ ರೀತಿಯಲ್ಲಿ ಮತ್ತು ದುಃಖತಪ್ತ ರೀತಿಯಲ್ಲಿ ತನ್ನ ಉಲಮಾಅ ಮತ್ತು ಇತರ ಮುಖಂಡರೊಡನೆ ಮನವಿ ಮಾಡತೊಡಗಿದರು. ಅವರು ತಮ್ಮ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಮರೆತು ಇಸ್ಲಾಮಿನ ಸೇವೆಗಾಗಿ ಮುಂದಾಗಬೇಕು, ಯಾವ ಪಂಥಕ್ಕೆ ಎಷ್ಟು ಸೇವೆಯ ಭಾಗ್ಯ ದೊರೆಯುತ್ತದೆಯೋ ಅಷ್ಟು ಸೇವೆ ಮಾಡಿ ಮುಸಲ್ಮಾನರಿಗೆ ಧರ್ಮ, ಪರಿತ್ಯಾಗ ಮಾಡುವುದರಿಂದ ರಕ್ಷಿಸಬೇಕು. ಹಾಗೆ ಮುಸಲ್ಮಾನರ ವಿವಿಧ ಪಂಥಗಳಿಂದ ಹಲವು ಆಂದೋಲನಗಳನ್ನು ಪ್ರಾರಂಭಿಸಲಾಯಿತು. ಮತ್ತು ಲಕ್ಷಾಂತರ ರೂಪಾಯಿಯ ಚಂದಾ ಜಮಾ ಮಾಡಲು ಅಲ್ಲಲ್ಲಿ ಬಿತ್ತಿ ಪತ್ರಗಳನ್ನು ಭಿತ್ತಲಾರಂಭಿಸಲಾಯಿತು. ಅದೇ ರೀತಿ ಹೋರಾಡಲು ಮುಜಾಹಿದೀನ್‌ಗಳಿಗೆ ಕರೆ ನೀಡಲಾಯಿತು. ಶಿಯಾ ಅವರು ಒಂದು ಬೇರೆ ಆಂದೋಲನ ಪ್ರಾರಂಭಿಸಿದರು. ಯಾವುದೇ ರೀತಿಯಲ್ಲಿ ಈ ಭಯಾನಕ ಧರ್ಮ ಪರಿತ್ಯಾಗದ ಗಾಳಿಯನ್ನು ನಿಲ್ಲಿಸಬೇಕು ಎಂದು. ಆ ಸಮಯ ಒಂದು ಸುಪ್ರಸಿದ್ಧ ಪತ್ರಿಕೆಯ ಸಂಪಾದಕರು ಹಝುರತ್ ಮಿರ್ಝಾ ಬಶೀರುದ್ದೀನ್ ಮೊಹಮ್ಮದ್ ಅಹ್ಮದ್ ಅವರಿಗೂ ಸಹ ಕರೆಕೊಟ್ಟರು. ಓ ಇಸ್ಲಾಮಿನ ಪ್ರತಿ ಅನುಕಂಪ ತೋರುವರೆ! ಇಂದು ನೀವು ಎಲ್ಲಿದ್ದೀರಿ ಇಂದು ಇಸ್ಲಾಮಿಗೋಸ್ಕರ ತ್ಯಾಗ ಮಾಡುವ ಮೈದಾನವು ನಿಮ್ಮನ್ನು ಕರೆಯುತ್ತಿದೆ. ಇಂದು ಸಮಯವಿದೆ.

ನೀವು ಮತ್ತು ನಿಮ್ಮ ಜಮಾಅತ್ ತಮ್ಮ ದಾವೆಯ ಸತ್ಯತೆಯ ಪುರಾವೆ ಒದಗಿಸಬೇಕಾಗಿದೆ. ಅದಾಗ್ಯೂ ಈ ಕರೆಗಿಂತ ಒಂದೆರಡು ದಿನಗಳ ಮೊದಲೇ ಅಂದರೆ 7 ಮಾರ್ಚ್ 1923 ರಂದು ಹಜರತ್ ಖಲೀಫತುಲ್ ಮಸೀಹ್ ಸಾನಿ(ರ) ಅದೇ ವಿಷಯದಲ್ಲಿ ಜಮಾಅತಿನ ಸದಸ್ಯರನ್ನು ಸಂಬೋಧಿಸಿ ಅವರಿಗೆ ಈ ನಿರ್ದೇಶನ ನಿಡಲಾಗಿತ್ತು. ಜಮಾಅತ್‌ನ ಸದಸ್ಯರು ಎಲ್ಲ ರೀತಿಯ ತ್ಯಾಗಕ್ಕಾಗಿ ಸಿದ್ಧರಾಗಬೇಕು. ಧರ್ಮ ಪರಿತ್ಯಾಗದ ಈ ಪಿಡುಗಿನ ವಿರುದ್ಧ ಹೋರಾಡಲು ಮೊದಲೇ ಒಂದು ಯೋಜನೆ ಸಿದ್ಧಗೊಳಿಸಲಾಗಿತ್ತು. ಆದರೆ ಏಕಿಲ್ ಅಮೃತ್ಸರ್ ಅವರ ಈ ಕರೆಯ ಮೇಲೆ ತಮ್ಮ ಅಬಿಮಾನ ವ್ಯಕ್ತಪಡಿಸಲು ತುರ್ತಾಗಿ ಒಂದು ಪತ್ರಿಕೆಯ ಮೂಲಕ 9 ಮಾರ್ಚ್ ರಂದು ಅದಕ್ಕೆ ಉತ್ತರ ಬರೆದರು. ತಮ್ಮ ಪ್ರಯತ್ನಗಳ ಒಂದು ಸಂಕ್ಷಿಪ್ತ ನೋಟ ಪ್ರದರ್ಶಿಸಿದರು. ಈ ಕುರಿತು ಮೊದಲೇ ಆಂದೋಲನ ಪ್ರಾರಂಬಿಸಲಾಗಿತ್ತು. ಅದರ ಅಂಗವಾಗಿ ಭಾರತದ ಮುಸಲ್ಮಾನರಿಗೆ 20 ಲಕ್ಷ ರೂಪಾಯಿಗಳನ್ನು ಸಂಗ್ರಹಿಸಲು ಗಮನ ಸೆಳೆದರು. ಮತ್ತು ಹೇಳಿದರು. ಎಲ್ಲ ಗ್ರಂಥಗಳು ತಮ್ಮ ತಮ್ಮ ಪಾಲಿನ ಮೊತ್ತ ಸ್ವಯಂ ಸಂಗ್ರಹಿಸಿ ಸ್ವಯಂ ಖರ್ಚಿನ ಬಂದೋಬಸ್ತ್ ಮಾಡಿಕೊಳ್ಳಲಿ, ಹೀಗೆ ಎಲ್ಲ ಪಂಥಗಳ ಅಡಿಯಲ್ಲಿ ಪ್ರತ್ಯೇಕವಾಗಿ ತಂಡಗಳನ್ನು ರಚಿಸಿ ಈ ಸಾಮೂಹಿಕ ಜವಾಬ್ಧಾರಿಯನ್ನು ಪಾಲಿಸಲು ಹೊರಡಲಿ. ಸಂಖ್ಯೆಗೆ ಅನುಗುಣವಾಗಿ 20 ಲಕ್ಷ ರೂಪಾಯಿ ಬೇರೆ ಮುಸಲ್ಮಾನರ ತುಲನೆಯಲ್ಲಿ ಅಹ್ಮದಿಯಾ ಜಮಾಅತಿನ ಭಾಗ 160ನೇ ಭಾಗದಷ್ಟು ಅಂದರೆ ಕೇವಲ 13000 ರೂಪಾಯಿಗಳಾಗುತ್ತವೆ. ಆದರೆ ಈ ಕೆಳಗಿನ ಎರಡು ಕಾರ್ಯಗಳನ್ನು ಲೆಕ್ಕಿಸಿದರೆ ಈ ತ್ಯಾಗದಲ್ಲಿ ಅಹ್ಮದಿಯಾ ಜಮಾಅತಿನ ಭಾಗ ಇನ್ನಷ್ಟು ಕಡಿಮೆಯಾಗುತ್ತದೆ.

1. ಜಮಾಅತಿನಲ್ಲಿ ಕೋಟ್ಯಾಧಿಪತಿ ಒಂದು ಕಡೆ ಇರಲಿ. ಲಕ್ಷಾಧಿಪತಿ ಸಹ ಯಾರೂ ಇಲ್ಲ. ಅದೇ ಜಾಗದಲ್ಲಿ ಬೇರೆ ಮುಸಲ್ಮಾನರ ಪಂಥಗಳಲಿ ಹಲವು ಕೋಟ್ಯಾದಿಪತಿಗಳು, ಲಕ್ಷಾದಿಪತಿಗಳಿದ್ದಾರೆ.

2. ಈಗಾಗಲೇ ಅಹ್ಮದಿಯಾ ಜಮಾಅತಿನ ಮಹಿಳೆಯರು ಇಸ್ಲಾಮಿನ ಸೇವೆಯ ಒಂದು ಅತ್ಯಂತ ಮುಖ್ಯ ಜವಾಬ್ಧಾರಿ ಬರ್ಲಿನ್ ಮಸೀದಿಯ ನಿರ್ಮಾಣ ಕಾರ್ಯದಲ್ಲಿ 50 ಸಾವಿರ ರೂಪಾಯಿಗಳ ವಾಗ್ದಾನ ನೀಡಿರುತ್ತಾರೆ. ಅವರಿಗೆ ಈ ಹೊಣೆ ತೀರಿಸಲು ಕಾರ್ಯಪ್ರವೃತ್ತರಾಗಿದ್ದಾರೆ.

ಅದಾಗ್ಯೂ ಈ ಕೆಲಸಗಳ ನಡುವೆಯೂ, ಈ ಕಾರ್ಯದ ಬೇಡಿಕೆಯನ್ನು ಮನಗೊಂಡು ಹಝ್ರತ್ ಇಮಾಮ್ ಜಮಾಅತ್ ಅಹ್ಮದಿಯಾ ಹದಿಮೂರು ಸಾವಿರ ರೂಪಾಯಿಗಳಲ್ಲಿ ಕಡಿತಗೊಳಿಸುವ ಬದಲು, ಅವರು ತಮ್ಮ ಜಮಾಅತಿನ ಆತ್ಮೀಯತೆ ಮತ್ತು ತ್ಯಾಗದ ಮಟ್ಟ ಅನುಸಾರವಾಗಿ ಶುದ್ಧಿ ಆಂದೋಲನದಲ್ಲಿ 50 ಸಾವಿರ ರೂಪಾಯಿಗಳನ್ನು ಜಮಾ ಮಾಡಲು ಒಪ್ಪಿರುತ್ತಾರೆ. ಅದು ಇಸ್ಲಾಮಿನ ಪರವಾಗಿ ಶುದ್ಧಿ ಆಂದೋಲನದ ದಿಕ್ಕು ಬದಲಾಯಿಸಲು ಖರ್ಚು ಮಾಡಲಾಗುವುದು.

ಹಝ್ರತ್ ಖಲೀಫತುಲ್ ಮಸೀಹರು ಧರ್ಮ ಪರಿತ್ಯಾಗದ ಈ ಪಿಡುಗನ್ನು ತಡೆಗಟ್ಟಲು ಅಹ್ಮದಿಯಾ ಜಮಾಅತಿನ ವತಿಯಿಂದ 50 ಸಾವಿರ ರೂಪಾಯಿಗಳ ವಾಗ್ದಾನ ಮಾಡುವ ಆ ಸಮಯದ ಜಮಾಅತಿನ ಸ್ಥಿತಿಗತಿಯ ಮೇಲೆ ಒಂದು ದೃಷ್ಟಿ ಹಾಯಿಸುವುದು ಉಚಿತ ಎಂದು ಭಾವಿಸುತ್ತೇನೆ ಇಂದಿನ ಲೆಕ್ಕದಲ್ಲಿ ಹೇಳುವುದಾದರೆ 50 ಸಾವಿರ ರೂಪಾಯಿ ಒಂದು ಸಾಧಾರಣ

ಮೊತ್ತವಾಗಿದೆ. ಜಮಾಅತಿನಲ್ಲಿ ಇಂತಹ ಹಲವು ವ್ಯಕ್ತಿಗಳು ದೊರೆಯಬಹುದು ಅದರಲ್ಲಿ ಒಬ್ಬರೆ ಬೇಕಾದರೆ ಧರ್ಮ ಸೇವೆಗಾಗಿ ಪ್ರಸ್ತುತಪಡಿಸಬಹುದಾಗಿದೆ ಮತ್ತು ಪ್ರಸ್ತುತಪಡಿಸುತ್ತಿದ್ದಾರೆ. ಆದರೆ ಆ ಸಮಯ ಪರಿಸ್ಥಿತಿಗಳು ಇದಕ್ಕೆ ಬೇರೆಯೇ ಆಗಿತ್ತು. ಮೊದಲಿಗೆ ಹೇಳುವುದಾದರೆ ಈ ಹೊತ್ತಿಗೆ ಮತ್ತು ಆ ಹೊತ್ತಿಗೆ ರೂಪಾಯಿ ಬೆಲೆಯಲ್ಲಿ ಭವ್ಯಾಕಾಶದಷ್ಟು ವ್ಯತ್ಯಾಸವಿದೆ. ಎರಡನೆಯದಾಗಿ ಹೇಳುವುದಾದರೆ ಆಗ ಜಮಾಅತಿನ ಸಾಂಪತ್ತಿಕ ಸ್ಥಿತಿ ತುಂಬಾ ಹದಗೆಟ್ಟಿತ್ತು. ಸಂಪನ್ಮೂಲಗಳು ಅತ್ಯಂತ ಕಡಿಮೆ ಮತ್ತು ಮಿತಿಯಲ್ಲಿದ್ದವು.

ಶುದ್ಧಿ ಆಂದೋಲನ ಕೇವಲ ಒಂದು ವರ್ಷ ಮೊದಲು ಅಂದರೆ ಮಾರ್ಚ್ 1922ರ ಮಶಾವರತ್‌ನ ವರದಿಯ ಮೇಲೆ ದೃಷ್ಟಿ ಹಾಯಿಸಿದರೆ ಗೊತ್ತಾಗುತ್ತದೆ. ಈ ವಿಷಯ ವಿಧಿಬದ್ಧವಾಗಿ ಚರ್ಚೆಯಲ್ಲಿ ಒಳಗೊಂಡಿತ್ತು. ಅಹ್ಮದಿಯಾ ಜಮಾಅತಿನಲ್ಲಿ ತಲೆದೋರುವ ಆರ್ಥಿಕ ಮುಗ್ಗಟ್ಟು ಹೇಗೆ ನಿವಾರಿಸಬೇಕು.

ಅಂಜುಮನ್‌ನ ಬಡತನದ ಸ್ಥಿತಿ ಹೇಗಿತ್ತೆಂದರೆ ಕಾರ್ಯಗಳಿಗೆ ಸಂಬಳ ನೀಡಲು ಹಣವಿರಲಿಲ್ಲ. ಅವರಿಗೆ ನೀಡುವ ತಿಂಗಳುಗಟ್ಟಲೆಯ ಸಾಲ ಅಂಜಮನ್ ಮೇಲಿತ್ತು. ಹೀಗೆ ಅಂಜುಮನ್‌ನ ಸಾಲ ಕಡಿಮೆ ಆಗುವ ಬದಲು ದಿನೇ ದಿನೇ ಅಪಾಯಕರ ವೇಗದಲ್ಲಿ ಹೆಚ್ಚಾಗುತ್ತಾ ಹೋಗುತ್ತಿತ್ತು. ಅಹ್ಮದಿಯಾ ಜಮಾಅತ್ ಈ ತನ್ನ ಬಡತನ ಮತ್ತು ಅಸಹಾಯಕತೆಯ ಹೊರತಾಗಿಯೂ ಜಾಗತಿಕವಾಗಿ ಇಸ್ಲಾಮಿನ ವಿಜಯದ ಹೋರಾಟದಲ್ಲಿ ಸಕ್ರಿಯವಾಗಿತ್ತು. ಅದಕ್ಕೆ ಬೇಕಾದ ಸಾಂಪತ್ತಿಕ ಹೊಣೆ ಪಾಲಿಸುವುದು ಒಂದೆಡೆ ಇರಲಿ, ಅದರ ಅಗತ್ಯತೆಗಳು ಸಹ ಪೂರೈಸುವ ಸಾಮರ್ಥ್ಯ ಜಮಾಅತಿಗೆ ಇರಲಿಲ್ಲ. ಅಹ್ಮದಿ ಮುಬಲ್ಲಿಗ್ಹೀನರು ಅತ್ಯಂತ ಕರುಣಾಜನಕ ಸ್ಥಿತಿಯಲ್ಲಿ ತಮ್ಮ ಜೀವನ ಸಾಗಿಸುತ್ತಿದ್ದರು. ವಿದೇಶಗಳಲ್ಲಿ ಮುಬಲ್ಲಿಗ್ಹೀನರು ಅಸ್ವಸ್ಥರಾದರೆ ಅವರ ಚಿಕಿತ್ಸೆಗಾಗಿಯೂ ಹಣವಿರಲಿಲ್ಲ. ಇಂತಹ ಸಾಂಪತ್ತಿಕ ಕೊರತೆಯಲ್ಲೂ ಅಹ್ಮದಿಯಾ ಜಮಾಅತಿನ ವಾಷಿಕ ಬಜೆಟ್ ಯಾವ ರೀತಿ ಮಾಡಲಾಯಿತು ಮತ್ತು ಅತ್ಯಂತ ಕೊರತೆ ಬಜೆಟ್‌ನಲ್ಲಿ ಯಾವ ರೀತಿಯ ಕಷ್ಟಗಳನ್ನು ಎದುರಿಸಬೇಕಾಯಿತು ಅದರ ವಿವರ ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯರು ಮಜ್ಲಿಸ್ ಶೂರಾದ ಭಾಷಣದಲ್ಲಿ ಹೀಗೆ ಹೇಳುತ್ತಾರೆ.

ಇಂದು ಇನ್ನೊಂದು ಕಮಿಟಿ ರಚಿಸಿದೆ. ಅದು 3 ರಿಂದ 4 ಸಾವಿರ ರೂಪಾಯಿಗಳನ್ನು ಕಡಿಮೆಗೊಳಿಸಿತು. ಮತ್ತೆ ಆ ಬಜೆಟ್ ನನ್ನ ಮುಂದೆ ಬಂತು. ನಾನು ಅದರಲ್ಲಿ 30 ಸಾವಿರ ಕಡಿಮೆ ಮಾಡಿದೆ. ಇಷ್ಟೊಂದು ಕಡಿಮೆಗೊಳಿಸಿದಾಗಲೂ, ಹುಡುಗರ ಸ್ಕಾಲರ್‌ಶಿಪ್‌ನಲ್ಲಿ ಇನ್ನೂ ಕಡಿಮೆ ಮಾಡಲಾಗದಷ್ಟು ಕಡಿಮೆ ಮಾಡಿದೆ. ಆಗಲೂ ಕಾರ್ಯಕರ್ತರಿಗೆ ಮೊದಲು ಸಿಗುವಷ್ಟು ಸಂಬಳ ಸಹ ಸಿಗುತ್ತಿಲ್ಲ. ಬಡವರಿಗೆ ದೊರೆಯುತ್ತಿದ್ದ ಬರಹ ಭತ್ಯೆ ಮುಕ್ತಾಯಗೊಳಿಸಲಿಲ್ಲ. ಬದಲು ಯಾರ ಸಂಬಳ 60 ಮೇಲಿತ್ತು. ಅವರಿಗೆ 15% ಮತ್ತು ಯಾರ ಸಂಬಳ 100 ಮೇಲಿತ್ತು ಅವರಿಗೆ 20% ಕಡಿಮೆ ಮಾಡಲಾಯಿತು. ನಾನು ಅವರಿಗೆ ತ್ಯಾಗ ಮಾಡಲು ಹೇಳಿದೆ. ಅವರೆಲ್ಲರೂ ಸಂತೋಷದಿಂದ ಒಪ್ಪಿದರು. ಅದಾಗ್ಯೂ ಇಲ್ಲಿಯ ಜನರಿಗೆ ಕಡಿಮೆ ಸಂಬಳ ದೊರೆಯುತ್ತದೆ. ಸರಕಾರ ದ್ವಿಗುಣ ಅಥವಾ ಮೂರುಪಟ್ಟು ಹೆಚ್ಚಿಸಿದರೆ ನಾವು ಕಡಿತಗೊಳಿಸಿದೆವು ಆದರೂ ಅದರಿಂದ ಒತ್ತಡ ಕಡಿಮೆಯಾಗುವ ಬದಲು ಈಗಲೂ ಎಷ್ಟೋ ತಿಂಗಳುಗಳ ಸಂಬಳ ಕೊಡದಂತಾಗಿದೆ. ಮೊದಲಿನ ಮೂರು ತಿಂಗಳುಗಳ ಸಂಬಳ ಬಾಕಿ ಇತ್ತು. ಈಗ ಐದು ತಿಂಗಳ ಸಂಬಳ ಬಾಕಿ ಇದೆ. ಇದೀಗ ಸ್ಥಿತಿ ಹೇಗಿದೆ ಎಂದರೆ ಅವರು ಸಾಲ ಮಾಡಿ ತಿಂದ ಕಾರಣ ಅಂಗಡಿಗಳು ದಿವಾಳಿ ಎದ್ದಿವೆ. ಇತ್ತ ಐದ್ಯೆದು ತಿಂಗಳುಗಳ ಸಂಬಳ ಸಿಗುತ್ತಿಲ್ಲ. ಅತ್ತ ಅಂಗಡಿಗಳಲ್ಲಿ ಬಂಡವಾಳ ಇಲ್ಲ. ಹೀಗೆ ಎಷ್ಟೋ ಜನರಿಗೆ ಎಷ್ಟೆಷ್ಟೋ ದಿನಗಳು ಹಸಿವಿನಿಂದಿರಬೇಕಾಗುತ್ತದೆ. ಈಗಷ್ಟೇ ಒಬ್ಬ ವ್ಯಕ್ತಿ ಹೇಳಿದ ಅವನು ನನ್ನ ಬಳಿಯಿಂದ ಹೋಗುತ್ತಿದ್ದ ಅವನು ಹಸಿವಿನಲ್ಲಿದ್ದ. ನಾನು ಅವನ ಮುಖ ನೋಡಿಯೆ ಗುರುತಿಸಿದೆ. ನಿಜವಾಗಿಯೂ ಅವನು ಎಷ್ಟೋ ದಿನಗಳಿಂದ ಹಸಿವಿನಿಂದಿದ್ದ. ಅವನು ಒಂದಿಷ್ಟು ನೀಡಿದ. ಆದರೆ ಅರ್ಧ, ಇನ್ನೊಬ್ಬನಿಗೆ ರಸ್ತೆಯಲ್ಲಿ ಕೊಟ್ಟುಬಿಟ್ಟ. ಅದೇ ರೀತಿ ಇನ್ನೊಬ್ಬನ ಬಗ್ಗೆ ತಿಳಿಯಿತು. ಅವನು ಹಸಿವಿನಿಂದ ಮೂರ್ಛೆತಪ್ಪಿ ಹೋಗಿದ್ದ. ನಾನು ತನ್ನ ಮನೆಯ ಊಟ ಅವನಿಗಾಗಿ ಕಳುಹಿಸಿದೆ ಮತ್ತು ಹೇಳಿದೆ. ಅವನಿಗೆ ಊಟ ಮಾಡಿಸಿ ಬರಬೇಕು. ನಾನು ಭಾವಿಸುತ್ತೇನೆ. ಇಂತಹ ನಿಷ್ಠಾವಂತರಿದ್ದಾರೆ. ಹಸಿವಿನಿಂದ ಸಾಯಬಹುದು. ಆದರೆ ಕೆಲಸ ಬಿಡುವುದಿಲ್ಲ. ಹೀಗಾದರೆ ಇಂತಹ ಕಾರ್ಯಕರ್ತರು ಹಸಿವಿನಿಂದ ಸಾಯುವ ತನಕ ನಮ್ಮ ಜಮಾಅತಿಗೆ ಬರಲಿಕ್ಕಿಲ್ಲವೇ. ಅಂತೂ ಸಾಂಪತ್ತಿಕ ದೃಷ್ಟಿಯಿಂದ ಇಂತಹ ಕಡು ಸಮಯ ನಮ್ಮ ಮೇಲೆ ಬಂದಿದೆ. (ವರದಿ ಮಜ್ಲಿಸ್ ಮಶಾವರತ್, 1922, ಪುಟ 18,19).

ಇಂತಹ ಸಂದಿಗ್ಧ ಸಮಯದಲ್ಲಿ ಹಝುರತ್ ಖಲೀಫತುಲ್ ಮಸೀಹ್ ದ್ವಿತೀಯರು(ರ) ಅಹ್ಮದಿಯಾ ಜಮಾಅತಿನ ಮಹಿಳೆಯರ ಮುಂದೆ ಬರ್ಲಿನ್ ಮಸೀದಿಯ ಯೋಜನೆ ಮುಂದಿಟ್ಟರು. ಅವರು ಜಮಾಅತಿನ ಮೇಲೆ ಸ್ಪಷ್ಟಪಡಿಸಿದರು. ನಾವು ನಮ್ಮ ಸಾಂಪತ್ತಿಕ ಕಷ್ಟಗಳನ್ನು ಧರ್ಮದ ಅವಶ್ಯತೆಗಳ ತಡೆಯಾಗಲು ಬಿಡುವುದಿಲ್ಲ. ಇಂದು ಜರ್ಮನಿಯಲ್ಲಿ ಇಸ್ಲಾಂ ಧರ್ಮದ ಸೇವೆಗೋಸ್ಕರ ಒಂದು ಹೊಸ ಹಾಗೂ ವಿಶಾಲ ಅಧ್ಯಾಯ ತೆರೆದಿದೆ. ಅವರ ಅವಶ್ಯಕತೆಗಳನ್ನು ಯಾವ ಕಾರಣದಿಂದಲೂ ಕಡೆಗಾಣಿಸಲು ಸಾಧ್ಯವಿಲ್ಲ. ಮಹಾಯುದ್ಧದ ನಂತರ ಜರ್ಮನ್ ಸಮುದಾಯದಲ್ಲಿ ಮಾನಸಿಕ ದೃಷ್ಟಿಯಿಂದ ಎಂತಹ ಪರಿಸ್ಥಿತಿಗಳು ಉಂಟಾಗಿವೆ ಎಂದರೆ ಯೂರೋಪಿನ ಇತರ ದೇಶಗಳಿಗೆ ಹೋಲಿಸಿದರೆ ಇಲ್ಲಿ ಇಸ್ಲಾಂ ಸ್ವೀಕರಿಸುವ ಸಾಧ್ಯತೆ ಹೆಚ್ಚಾಗಿವೆ. ಹಾಗೆ ಅವರು ಜಮಾಅತ್ ಆರ್ಥಿಕ ಮುಗ್ಗಟ್ಟಿನಲ್ಲಿದ್ದರೂ ಬರ್ಲಿನ್ ಮಸೀದಿ ನಿರ್ಮಾಣಕ್ಕಾಗಿ ಚಂದಕ್ಕಾಗಿ ಕರೆ ನಿಡಿದರು. ಅಹ್ಮದಿ ಮಹಿಳೆಯರಿಗೆ ಸ್ವಯಂ ತನ್ನ ಕಡೆಯಿಂದ ಐವತ್ತು ಸಾವಿರ ರೂಪಾಯಿಗಳನ್ನು ಸಂಗ್ರಹಿಸುವ ಹೊಣೆ ನೀಡಿದರು. ತಮ್ಮ ಪತಿಯವರಿಂದ ಏನೂ ಬೇಡಬಾರದು. ಈ ಶರತ್ತು ಹಾಕಲು ಕಾರಣವೆಂದರೆ ಪುರುಷರಿಗೆ ಇನ್ನಷ್ಟು ಸಾಂಪತ್ತಿಕ ಹೊಣೆ ಹೊರುವ ತಾಕತ್ತು ಇರಲಿಲ್ಲ ಮಹಿಳೆಯರ ಪರಿಶ್ರಮದಲ್ಲಿ, ತಮ್ಮ ಉಳಿತಾಯದ ಹಣದಿಂದ ಮತ್ತು ಆಭರಣಗಳು ಮಾರಾಟ ಮಾಡಿ ಇಸ್ಲಾಮಿನ ಈ ಮುಖ್ಯ ಅಗತ್ಯ ಪೂರೈಸುವ ಭರವಸೆ ಇತ್ತು. ಹಾಗೆಯೇ ಆಯಿತು. ಆದರೆ ಇದೊಂದು ಬೇರೆಯೇ ಕಥೆಯಾಗಿದೆ. ಅದರ ವಿವರ ಬೇರೆ ಉಚಿತ ಸಂದರ್ಭ ನೋಡಿ ಮಾಡಲಾಗುವುದು. ಸದ್ಯ ಅದರ ವಿವರ ಏಕೆ ನೀಡಲಾಗಿದೆ ಎಂದರೆ ಶುದ್ಧಿ ಆಂದೋಲನದ ಬಗ್ಗೆ ಅಧ್ಯಯನ ಮಾಡುವ ಓದುಗನು ಅಂದಾಜಿಸಬಹುದು. ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯರು(ರ) ಮಲಾನಾ ಜಿಹಾದಿಗಾಗಿ ಜಮಾಅತಿನ ವತಿಯಿಂದ ಘೋಷಿಸಿದ 50 ಸಾವಿರ ರೂಪಾಯಿಯ ಸಮಯದಲ್ಲಿ ಜಮಾಅತ್ ಯಾವ ಪರಿಸ್ಥಿತಿಯಲ್ಲಿತ್ತು. ಆಗ ಅದರ ಬೆಲೆ ಅದರ ಸ್ಥಾನ ಏನಿತ್ತು. ಇದರ ಹೊರತಾಗಿ ಈ ಪರಿಸ್ಥಿತಿಗಳು ಈ ಮಾತಿಗೆ ಸಾಕ್ಷಿಯಾಗಿವೆ. ಅವರಿಗೆ ತನ್ನ ಪ್ರಭುವಿನ ಅನುಗ್ರಹ ಮತ್ತು ಸಹಾಯದ ಬಗ್ಗೆ ಎಷ್ಟೊಂದು ಅಸಾಮಾನ್ಯ ರೀತಿಯ ವಿಶ್ವಾಸ ಮತ್ತು ಭರವಸೆಯಿತ್ತು.

ಅವರಿಗೆ ದೃಢವಾದ ವಿಶ್ವಾಸವಿತ್ತು. ಇದು ಅಲ್ಲಾಹನದೇ ಕಾರ್ಯಗಳಾಗಿವೆ. ಅವನೇ ಅದನ್ನು ಪೂರೈಸುವ ವಿಧಾನಗಳು ಒದಗಿಸುವನು. ಹಾಗೆ ಆಗ ಲೋಕವು ಈ ವಿಚಿತ್ರವಾದ ಪವಾಡ ತನ್ನ ಕಣ್ಣಾರೆ ಕಂಡಿತು. ಹಸಿವಿನಿಂದ ಬಳಲುತ್ತಿದ್ದ ಈ ಜಮಾಅತ್ ತನ್ನ ಅವಶ್ಯಕತೆಗಳ ಮೇಲೆ ಹೇಗೆ ಇಸ್ಲಾಮಿನ ಅಗತ್ಯಗಳನ್ನು ಮನಗಂಡಿತು. ಮತ್ತು ಎಲ್ಲ ರೀತಿಯ ತ್ಯಾಗಗಳನ್ನು ಉತ್ಸಾಹದಿಂದ ನಿಷ್ಠೆಯಿಂದ ಒಪ್ಪಿಕೊಂಡರು. ನಿಶ್ಚಯವಾಗಿಯೂ ಇದು ಅಲ್ಲಾಹನ ಅನುಗ್ರಹವೇ ಆಗಿತ್ತು. ಆ ಅನುಗ್ರಹ ಈ ಮೂಲಕ ಜಾಹಿರಾಯಿತು. ಜಮಾಅತಿಗೆ ಅಲ್ಲಾಹನು ಎಂತಹದೊಂದು ಮಹತ್ತರವಾದ ಮಾರ್ಗದರ್ಶಕರನ್ನು ನೀಡಿದ್ದನೆಂದರೆ ಅವರು ಇಸ್ಲಾಮಿನ ಸೇವೆಗೋಸ್ಕರ ಆ ತ್ಯಾಗಮಯಿಗಳ ರಕ್ತದ ಒಂದೊಂದು ಕಣ ಸಹ ಹೀರಿ ಪ್ರಸ್ತುತಪಡಿಸಲು ಸಿದ್ಧರಾಗಿದ್ದರು. ಅವರು ಎಂತಹ ಮಾರ್ಗದರ್ಶಕ ರಾಗಿದ್ದನೆಂದರೆ ತ್ಯಾಗದ ಪ್ರತಿಯೊಂದು ಕ್ಷೇತ್ರದಲ್ಲೂ ಮೊದಲು ತಾನು ಹೆಜ್ಜೆ ಇಡುತ್ತಿದ್ದರು. ಅವರ ವ್ಯಕ್ತಿತ್ವದಲ್ಲಿ ವಿಚಿತ್ರವಾದ ವಿಶಾಲತೆಯಿತ್ತು. ಅವರ ಭಾಷೆಯಲ್ಲಿ ವಿಚಿತ್ರ ರೀತಿಯ ಪವಾಡವಿತ್ತು. ಅವರು ಇಸ್ಲಾಮಿನ ಸೇವೆಗಾಗಿ ತ್ಯಾಗ ಮಾಡಲು ಜಮಾಅತಿಗೆ ಕರೆ ನೀಡುವಾಗ ಹರದಯಗಳ ಸ್ಥಿತಿ ಹೀಳತೀರದ ರೀತಿಯಲ್ಲಿದ್ದವು. ಸೇವೆಯ ಉತ್ಸಾಹದಿಂದ ಎದೆಗಳು ಸೀಳಿ ಹೋಗುತ್ತಿದ್ದವು ಮತ್ತು ಹೃದಯವು ಉಮ್ಮಡಿಸಿ ಉಮ್ಮಡಿಸಿ ಮಹಮ್ಮದರ ಧರ್ಮದ ಮೇಲೆ ಬಲಿಯಾಗಲು ಶಿರಗಳನ್ನು ಒಪ್ಪಿಸುತ್ತಿದ್ದರು. ಜಮಾಅತ್ ಆತ್ಮೀಯತೆಯಿಂದ ಅವರನ್ನು ಹಿಂಬಾಲಿಸುತ್ತಿತ್ತು. ಪ್ರತಿಯೊಬ್ಬ ಅಹ್ಮದಿಯು ಇನ್ನೊಬ್ಬರಿಂದ ಹೆಜ್ಜೆ ಮುಂದೆ ಹಾಕಲು ಹವಣಿಸುತ್ತಿದ್ದರು. ದುರ್ಬಲರಾಗಿದ್ದವರು ಎದ್ದುಬಿದ್ದು ಬಲಿದಾನದತ್ತ ಸಾಗುತ್ತಿದ್ದರು ಮತ್ತು ವಿಕಲಾಂಗರು ಹಿಗೆ ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಿದ್ದರು.

ವೋ ಖುಷ್ ಖಿಸ್ತಹೋಉಸ್ ಮಜ್ಲಿಸ್ ಮೇ ಗಿರ್‌ಪಡಕೆ ಜಾನ್‌ಹುಂಚೆ
ಕಭೀ ಪಾನಾಂ ಪೆ ಸರ್‌ರಖಾ ಕಭೀ ದಾಮನ್ ಸೇ ಜಾಲಿಪ್ಟೆ
ಮೇರೆ ಹಮ್‌ರಾಝ್ ಪರ್ ವೋ ಪರಸಕಿಸ್ತಾ ಕ್ಯಾ ಕರೆಂ ಜಿನ್ ಕೇ
ಹವಾ ಮೆ ಉಡ್‌ಗಯೆ ನಾಲೆ, ಗಯಿಮ ಬೇಕಾದ್ ಫರಯಾದೇಂ
(ಆ ಸಭೆಯಲ್ಲಿ ಎದ್ದು ಬಿದ್ದು ತಲುಪಿದವರು ಭಾಗ್ಯವಂತರು
ಒಮ್ಮೆ ಕಾಲಿನ ಮೇಲೆ ಶಿರವಿಟ್ಟಾಗ ಒಮ್ಮೆ ಮಡಿಲನ್ನು ಸೇರಿದರು.
ನನ್ನ ಮಿತ್ರನೇ ಆದರ ಆ ರೆಕ್ಕೆ ಇಲ್ಲದಾದರೂ ಏನು ಮಾಡಬೇಕು.
ಅವರ ದುಃಖಗಳು ಗಾಳಿ ಸೇರಿತು. ಅವರ ಕರೆ ವ್ಯರ್ಥವಾಯಿತು.)

ಯಾವ ರೀತಿ ಯಾವ ತರಹದಲ್ಲಿ ಅವರು ಈ ಆಂದೋಲನವನ್ನು ಜಮಾಅತಿನಲ್ಲಿ ನಡೆಸಿದರು ಮತ್ತು ಆರ್ಯ ಸಮಾಜದ ತುಲನೆಯಲ್ಲಿ ಮುಷ್ಟಿಯಿಟ್ಟು ತ್ಯಾಗ ಮಾಡಿದವರನ್ನು ಯಾವ ರೀತಿಯ ವಿಶ್ವಾಸ ತುಂಬಿ ಏಕೀಕೃತರನ್ನಾಗಿ ನಿಲ್ಲಿಸಿದರು, ಅದು ಅಹ್ಮದಿಯಾ ಇತಿಹಾಸದಲ್ಲಿ ಸದಾ ಸುವರ್ಣ ಅಕ್ಷರಗಳಿಂದ ಬರೆಯಲು ಯೋಗ್ಯವಾಗಿದೆ.

ಪ್ರಪ್ರಥಮವಾಗಿ ಅವರು ಈ ಕಾರ್ಯಯೋಜನೆಯನ್ನು ಕ್ರಮಬದ್ಧವಾಗಿ ನಿಯೋಜಿಸಿದರು ಮತ್ತು ತಕ್ಷಣದಿಂದ ಪರಿಸ್ತಿತಿಗಳನ್ನು ಅಧ್ಯಯನ ಮಾಡಲು

ಬುದ್ಧಿವಂತ ಯುವ ವಿದ್ಯಾವಂತರನ್ನು ಧಾರ್ಮಿಕ ಶಿಕ್ಷಣ ಕ್ಷೇತ್ರಕ್ಕೆ ಕಳುಹಿಸಿದರು. ಆನಂತರ ಖುತುಬಗಳ ಮತ್ತು ಭಾಷಣಗಳ ಮೂಕಲ ಜಮಾಅತಿಗೆ ಈ ವಿಷಯ ಕುರಿತು ಪೂರ್ಣ ರೀತಿಯ ಜ್ಞಾನ ನೀಡಿದರು. ಬರುವ ಅಪಾಯಗಳಿಂದ ಎಚ್ಚರಿಸಿದರು. ತುಂಬಾ ಒಳ್ಳೆಯ ರೀತಿಯಲ್ಲಿ ಸ್ಪಷ್ಟಪಡಿಸಿದರು ನಮಗೆ ಒಂದು ಅತ್ಯಂತ ಬಲಿಷ್ಠ ಶತ್ರುವನ್ನು ಎದುರಿಸಬೇಕಾಗಿದೆ. ಅದು ಸಂಖ್ಯಾ ಬಲದಿಂದಾಗಲಿ, ಸಂಪತ್ತಿನಿಂದಾಗಲಿ, ಲೌಕಿಕ ರೀತಿಯಲ್ಲಾಗಲಿ ನಮಗೆ ಅವರೊಂದಿಗೆ ಯಾವ ಸಮಾನತೆಯೂ ಇಲ್ಲ. ಅನಂತರ ಇಸ್ಲಾಮಿನ ಪ್ರಾಥಮಿಕ ಕಾಲದ ಮುಜಾಹಿದ್ ಮುಸ್ಲಿಮರ ಮಹೋನ್ನತವಾದ ತ್ಯಾಗಗಳನ್ನು ಸ್ಮರಿಸಿಕೊಟ್ಟು ಅವರ ಹೃದಯಗಳಲ್ಲಿ ಯಾವ ರೀತಿಯ ಕುತುಹಲ ಉಂಟು ಮಾಡಿದರೆಂದರೆ, ಹಿರಿಯರು, ಕಿರಿಯರು, ಪುರುಷರು, ಮಹಿಳೆಯರು, ಯುವಕರು ಮಕ್ಕಳು ಎಲ್ಲರೂ ತಮ್ಮ ಸರ್ವಸ್ವವನ್ನು ಇಸ್ಲಮಿಗಾಗಿ ತ್ಯಾಗ ಮಾಡಲು ಸಿದ್ಧರಾದರು. ಆದರೆ ಖಲೀಫರು(ರ) ಅವರನ್ನು ಮತ್ತು ಅವರ ಭಾವನೆಗಳನ್ನು ರಸ್ತೆಯಲ್ಲಿ ಲಗಾಮಿಲ್ಲದ ಕುದುರೆಯಂತೆ ಹೋಗಲು ಬಿಡಲಿಲ್ಲ. ಪ್ರತಿಭಟನೆ ರೀತಿಯಲ್ಲಿ ಅವರ ಉತ್ಸಹವನ್ನು ವ್ಯರ್ಥವಾಗಲು ಅನುಮತಿ ನೀಡಲಿಲ್ಲ. ಖಾದಿಯಾನಿನ ಗಲ್ಲಿಗಳಲ್ಲಿ ಉತ್ಸಹಭರಿತ ಘೋಷಣೆಗಳ ಯಾವ ಸದ್ದು ಮೊಳಗಲಿಲ್ಲ ಆರ್ಯ ಸಮಾಜದ ವಿರುದ್ಧ ಆರೋಪ ಪ್ರತ್ಯಾರೋಪದ ಆಂದೋಲನ ನಡೆಸಲಿಲ್ಲ ಆದರೆ ಸಮುದಾಯವು ದೃಢ ನಿಶ್ಚಯದಿಂದ ದೃಢ ಹೆಜ್ಜೆಯೊಂದಿಗೆ ಮುಂದಾಗಲು ಸಿದ್ಧಗೊಂಡಿತು. ಮೊಟ್ಟ ಮೊದಲಿಗೆ ಅವರು ಜಮಾಅತಿನ ಗಮನ (ದುಆ) ಪ್ರಾರ್ಥನೆಯತ್ತ ಸೆಳೆದರು. ಮತ್ತು ಅವರಿಗೆ ಚೆನ್ನಾಗಿ ಮನದಟ್ಟು ಮಾಡಿಸಿದರು. ಪ್ರಾರ್ಥನೆಯಿಲ್ಲದೆ ಯಾವ ಫಲವು ದೊರೆಯುವುದಿಲ್ಲ. ಅಷ್ಟೇ ಅಲ್ಲ ಸತ್ಕರ್ಮಗಳ ಭಾಗ್ಯವು ದೊರೆಯುವುದಿಲ್ಲ. ಎಲ್ಲ ಪುರುಷರು, ಮಹಿಳೆಯರು, ವೃದ್ಧರು ಮತ್ತು ಮಕ್ಕಳು ತಮ್ಮ ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಪ್ರಾರ್ಥನೆಗಳಲ್ಲಿ ತೊಡಗಿದರು. ಎಲ್ಲಾ ಅಹ್ಮದಿ ವಸತಿಗಳು ರಾತ್ರಿಯನ್ನು ಹಗಲನ್ನಾಗಿ ಮಾಡಿದರು. ರಾತ್ರಿಗಳಲ್ಲಿ ಅಲ್ಲಾಹನ ಆಸ್ಥಾನದಲ್ಲಿ ನೋವಿ ಹುಂಕಾರ ಮನೆ ಮನೆಯಿಂದ ಎದ್ದಿತು. (ತಹಜ್ಜುದ್) ರಾತ್ರಿ ಸಾಷ್ಟಾಂಗವೆರಗಿ ಇಸ್ಲಾಮಿನ ವಿಜಯಕ್ಕಾಗಿ ಪ್ರಾರ್ಥನೆ ಮಾಡತೊಡಗಿದರು. ಅಲ್ಲಾಹನ ಧರ್ಮ, ಸಹಾಯಕ್ಕಾಗಿ ಹೆಜ್ಜೆ ಮುಂದೆ ಹಾಕುವವರು, ಅಲ್ಲಾಹ ಸಹಾಯಕ್ಕೆ ನೇರವಾಗಿ ಬೇಡಿದರು.

ಪ್ರಾರ್ಥನೆಗಳತ್ತ ಗಮನ ಸೆಳೆದ ನಂತರ ಅವರು ಜಮಾಅತಿಗೆ ಸಾಂಪತ್ತಿಕ ಮತ್ತು ಜೀವತ್ಯಾಗದ ಕಡೆ ಕರೆ ನೀಡಿದರು ಮತ್ತು ಮುಂಬರುವ ಕಷ್ಟಗಳಿಂದಲೂ ಚೆನ್ನಾಗಿ ಅರಿವು ಮುಡಿಸಿಕೊಟ್ಟರು. ಎಲ್ಲ ರೀತಿಯ ಅಪಾಯಗಳಿಂದ ಎಚ್ಚರಿಕೆ ನೀಡಿ ಹೇಳಿದರು. ಈ ಮಾರ್ಗದಲ್ಲಿ ತುಂಬಾ ಕಠಿಣ ಸಮಯ ಬರಲಿಕ್ಕಿದೆ. ಕೆಲವೊಮ್ಮೆ ಹಸಿವು, ಕೆಲವೊಮ್ಮೆ ಬಾಯಾರಿಕೆ, ಕೆಲವೊಮ್ಮೆ ಬಿಸಿಲು ಮತ್ತು ಕೆಲವೊಮ್ಮೆ ಚಳಿಯಲ್ಲಿ ಕೆಲವೊಮ್ಮೆ ಬರಿಕಾಲಿನಲ್ಲಿ ಮತ್ತು ಒಮ್ಮೊಮ್ಮೆ ಹರಿದ ಬಟ್ಟೆಯೊಂದಿಗೆ. ಒಮ್ಮೆ ತನ್ನ ಭಾರವ ಎತ್ತುತ್ತ, ಒಮ್ಮೆ ಇತರರ ಭಾರ ಎತ್ತಿ ನಿಮಗೆ ದಿನಗಳ, ವಾರಗಳ, ತಿಂಗಳುಗಟ್ಟಲೆ ಸಮಯ ಕಳೆಯಬೇಕಾಗುವುದು. ಭಿಕ್ಷುಕರ ರೀತಿಯಲ್ಲಿ ಊರೂರು ತಿರುಗಿ ತಮ್ಮ ದಾರಿತಪ್ಪಿದ ಸಹೋದರರನ್ನು ಮತ್ತೊಮ್ಮೆ ಇಸ್ಲಾಮಿನತ್ತ ಕರೆಯಬೇಕಾಗುವುದು. ಬಯ್ಗುಳಗಳನ್ನು ಆಲಿಸಿ ಸಹನೆ ತೋರಬೇಕಾಗುವುದು. ಪೆಟ್ಟುಗಳನ್ನು ತಿಂದು ತಿಂದು ದುಆ ಯಾಚಿಸಬೇಕಾಗುವುದು. ಔಷಧಿಯಿಲ್ಲದೆ ಎಲ್ಲ ರೋಗಗಳನ್ನು ಎದುರಿಸಬೇಕಾಗುವುದು. ಮೈಮುರಿದು ಶ್ರಮ ವಹಿಸಬೇಕಾಗುವುದು. ಹೆಂಡತಿ, ಮಕ್ಕಳು ಮತ್ತು ಮನೆಯ ಆರಾಮಗಳ ಭಾವನೆ ಸಹ ಮನದಿಂದ ತೆಗೆದು ಹಾಕಬೇಕಾಗುವುದು. ಇದೆಲ್ಲ ಸ್ಪಷ್ಟಪಡಿಸಿದ ನಂತರ ಅವರು ದೃಢಪಡಿಸಿದರು. ಈ ರೀತಿ ನೀವು ಇಸ್ಲಾಂ ಧರ್ಮದ ಸೇವೆಗೋಸ್ಕರ ತ್ಯಾಗಗಳನ್ನು ಮಾಡುವುದರಲ್ಲಿ ಮುಂದುವರೆಯುವುದಾದರೆ ನಾವು ನಿಮಗೆ ಸುವಾರ್ತೆ ನೀಡುತ್ತೇನೆ. ಅಲ್ಲಾಹನು ನಿಮ್ಮೊಂದಿಗೆ ಇರುವನು ಮತ್ತು ಲೋಕದ ಯಾವ ಶಕ್ತಿಯು ಎಷ್ಟೇ ಶಕ್ತಿಶಾಲಿ ಇರಲಿ, ಸಂಪತ್ತಿರಲಿ, ಜನಬಲವಿರಲಿ, ನಿಮಗೆ ಸೋಲಿಸುವುದು ಅಸಾಧ್ಯ. ನೀವು ಅಲ್ಲಾಹನಿಗೆ ಪ್ರಿಯರಾಗುವಿರಿ ಮತ್ತು ಇಹಪರದ ಎಲ್ಲ ಅನುಗ್ರಹಗಳು ನಿಮಗೆ ದಯಪಾಲಿಸಲಾಗುವುದು.

ಅವರು(ರ) ಕಠಿಣ ಪರಿಸ್ಥಿತಿಗಳಲ್ಲಿಯೂ ಭಯವಿಲ್ಲದೆ ಎದುರಿಸುವಂತಹ ಧೀಮಂತ ಹೋರಾಟಗಾರರನ್ನು ಜಮಾಅತಿನಲ್ಲಿ ತಯಾರುಮಾಡಿದರು. ತಾವು ಮೊದಲೇ ಅವರನ್ನು ಎಚ್ಚರಿಸಿದರು. ನಿಮ್ಮ ಎದುರಾಳಿಗಳು ಕೇವಲ ಪರಕೀಯರು ಆಗಲಾರರು. ಬದಲು ಸ್ವಯಂ ನಿಮ್ಮ ಸಹೋದರರ ಮುಸಲ್ಮಾನರು ಅಂದುಕೊಳ್ಳುವವರು ನಿಮ್ಮ ಎದುರು ಫತ್ವಗಳ ಆಂದೋಲನ ನಡೆಸುವರು, ನಿಮ್ಮ ಮುಂದೆಯೂ ಒಂದು ಶತ್ರು ಇರುವುದು ಮತ್ತು ನಿಮ್ಮ ಹಿಂದೆ ಸಹ ಒಬ್ಬ ಶತ್ರು ಇರುವನು. ಎಲ್ಲಾ ಕಡೆಯಿಂದ ನಿಮ್ಮ ಮೇಲೆ ಆಕ್ರಮಣ ಮಾಡಲಾಗುವುದು. ನಿಮ್ಮನ್ನು ಕಾಫಿರ್, ಮುಲ್‌ಹಿದ್ ದಜ್ಜಾಲ್ ಎನ್ನುವರು. ಮತ್ತು ತಮ್ಮ ತಬ್‌ಲೀಗ್ ನಿಂದ ಪ್ರಭಾವಿತಗೊಂಡು ಇಸ್ಲಾಂ ಸ್ವೀಕರಿಸುವುದಕ್ಕಿಂತ ಧರ್ಮ ಪರಿತ್ಯಾಗ ಮಾಡಿ ಆರ್ಯ, ಬ್ರಹ್ಮ ಸಮಾಜ, ಅಥವಾ ಕ್ರೈಸ್ತರಾಗುವುದು ಎಷ್ಟೋ ಲೇಸು ಎನ್ನುವರು. ಆದರೆ ಒಂದೆಡೆ ಲೌಕಿಕ ಅಪಾಯಗಳಿಂದ ಸರಿಯಾಗಿ ತಿಳುವಳಿಕೆ ನೀಡುತ್ತಿದ್ದರು. ಅಲ್ಲಿ ಅಲ್ಲಾಹನ ಘನತೆ ಗೌರದ ನಕ್ಷೆ ಯಾವ ರೀತಿ ಬಿಂಬಿಸುತ್ತಿದ್ದರೆಂದರೆ ಅವರ ಹೃದಯಗಳು ಅಲ್ಲಾಹನ ಭಯದಿಂದ ತುಂಬಿ ಹೋಗುತ್ತಿದ್ದವು ಮತ್ತು ಲೌಕಿಕ ಜೀವನ, ಲೌಕಿಕ ಬೇಗೆ ಲೆಕ್ಕಸುತ್ತಲೇ ಇರಲಿಲ್ಲ. ಅವರ ಕುತುಬಗಳು ಆಲಿಸುವ ಪ್ರತಿಯೊಬ್ಬ ವ್ಯಕ್ತಿ ಮತ್ತು ಅವರ ಆಂದೋಲನದ ಬಗ್ಗೆ ಅಧ್ಯಯನ ಮಾಡಿದ ಪ್ರತಿ ವ್ಯಕ್ತಿ ಸ್ವಯಂ ತ್ಯಾಗಭಾವನೆಯೊಂದಿಗೆ ತನ್ನ ಜೀವನ ಎಲ್ಲ ಸಂಪತ್ತು ಈ ಸೇವೆಗೋಸ್ಕರ ಸಮರ್ಪಿಸುತ್ತಿದ್ದ.

ಆ ಸಂದರ್ಭದಲ್ಲಿ ಅವರು ಜಮಾಅತಿನಿಂದ ಯಾವ ಉನ್ನತಮಟ್ಟದ ತ್ಯಾಗದ ಭರವಸೆ ಹೊಂದಿದ್ದರೋ. ಮತ್ತು ಯಾವ ಉನ್ನತ ಮಟ್ಟ ಸಾದಿಸಬೇಕೆನ್ನುತ್ತಿದ್ದರೋ. ಅದರ ಅಂದಾಜು ಹಝ್ರತ್ ಶೇಕ್ ಮುಹಮ್ಮದ್ ಅಹ್ಮದ್ ಸಾಹಿಬ್ ಮಝ್‌ಹರ್ ಬಿ.ಎ ಎಲ್.ಎಲ್.ಬಿ ಅವರ ವರದಿಯಿಂದ ತಿಳಿಯಬಹುದು. ಅದನ್ನು ಕೆಳಗೆ ನಮೂದಿಸಲಾಗುತ್ತದೆ. ಹಝ್ರತ್ ಶೇಖ್ ಸಾಹಿಬ್ ಹೇಳುತ್ತಾರೆ.

1923 ರ ಮಿಸ್ ಮಶಾವರತ್ (ಕಾರ್ಯಕಾರಿಣಿ ಸಭೆ) ನಲ್ಲಿ ನಾನು ಉಪಸ್ತಿತನಿದ್ದೆ. ಹುಝೂರ್ ಸುರ್ಧದಿಯ ಬಗ್ಗೆ ಭಾಷಣ ಮಾಡಿದರು ಮತ್ತು ಒಂದು ಸಂದರ್ಭದಲ್ಲಿ ಹೇಳಿದರು. ಆರ್ಯ ಸಮುದಾಯವು ತನ್ನ ಹಣ ಸಂಪತ್ತು ಬಲದಿಂದ ಶುದ್ಧಿಯನ್ನು ಯಶಸ್ವಿಗೊಳಿಸಬಯಸಿದರೆ, ನನ್ನ ಅಂದಾಜಿನ ಪ್ರಕಾರ ಈ ಸಮಯ ನನ್ನ ಜಮಾಅತಿನ ಒಟ್ಟು ಆಸ್ತಿಯ ಬೆಲೆ ಎರಡು ಕೋಟಿ ರೂಪಾಯಿಗಳ ಸಮೀಪವಿರಬಹುದು. ನನ್ನ ಜಮಾಅತ್, ಇವೆಲ್ಲ ಸಂಪತ್ತು ಆಸ್ತಿ ಈ ಶುದ್ಧಿ ಆಂದೋಲನ ವಿರುದ್ಧ ತ್ಯಾಗ ಮಾಡಲು ಹಿಂಜರಿಯೆನು. ಈ ಮಾತಿನಿಂದ ಹುಝೂರರ ದೃಢ ನಿರ್ಧಾರ ಮತ್ತು ಜಮಾಅತಿಗೆ ಇಂತಹ ತರಬೇತಿ ನೀಡುವುದು ಮತ್ತು ಈ ದೃಡನಿಶ್ಚಯ ಜಮಾಅತ್ ಸಂತೋಷದಿಂದ ತನ್ನ ಎಲ್ಲವನ್ನು ತ್ಯಾಗ ಮಾಡುವುದು ಎಂಬುದು ಸಾಬೀತಾಗಿದೆ. ಹಾಗೆ ನಂತರ ಘಟಿಸಿದ ಘಟನೆಗಳು ಅದೇ ವಿಧೇಯತೆಯನ್ನು ಸಾಬೀತುಪಡಿಸುತ್ತದೆ. ಸಮಿಅನ ವತನ ಪ್ರಖಾರ ಹುಝೂರರ ಈ ವಾಕ್ಯಗಳು ಪ್ರಕಟಗೊಂಡಿವೆಯೇ ಇಲ್ಲವೋ ಗೊತ್ತಿಲ್ಲ. ಆದರೆ ಇಷ್ಟು ಮಾತ್ರ ಸರಿಯಾಗಿ ನೆನಪಿಸಿದೆ ಮತ್ತು ನಾನು ಎಷ್ಟೋ ಸಂದರ್ಭಗಳಲ್ಲಿ ಮಿತ್ರರಿಗೆ ಮತ್ತು ಇತರ ವ್ಯಕ್ತಿಗಳೊಡನೆ ವಿವರ ನೀಡಿದ್ದೇನೆ. 1923ರ ಮಶಾವರತ್ ನಂತರ ಈ ವಿನೀತನಿಗೂ ಶುದ್ಧಿಯ ಕ್ಷೇತ್ರಗಳಲ್ಲಿ ಕಾರ್ಯ ಮಾಡುವ ಭಾಗ್ಯ ಅಲ್ಲಾಹನು ಒದಗಿಸಿದ್ದಾನೆ.

ಅಂದಹಾಗೆ ಆವೇಶ ಮತ್ತು ಭಾವನೆಗಳನ್ನು ಸಮತೋಲನಗೊಳಿಸಿ ನಡೆಸುವುವವನೇ ಅತ್ಯುತ್ತಮ ಮಾರ್ಗದರ್ಶಕನಾಗುತ್ತಾನೆ. ಅವರು ಈ ಎಲ್ಲಾ ಅವಧಿಗಳಲ್ಲಿ ಈ ಸಮತೋಲನವನ್ನು ಎಷ್ಟು ಚೆನ್ನಾಗಿ ನಿಭಾಯಿಸಿದರೆಂದರೆ, ವೀಕ್ಷಕನು ನಿಸ್ಸಂಶಯವಾಗಿ ಮರ್‌ಹಬಾ, ಅಲ್ಲಾಹ್ ಅಕ್ಬರ್ ಎಂಬ ಘೋಷಣ ಹಾಕುತ್ತಾನೆ. ಒಂದೆಡೆ ಜಮಾಅತಿನ ಮುಂದೆ ಒಂದು ಉತ್ತಮವಾದ ಯೋಜನೆಯನ್ನು ಮಂದಿಟ್ಟಿದರು ಮತ್ತು ಭಾವಾನಾತ್ಮಕವಾಗಿಯೂ ಬುದ್ಧಿವಂತಿಕೆಯಿಂದ ಹೊಸ ಅನುಭವಕ್ಕೆ ಕೈಹಾಕುವಂತೆ ಮಾಡಿದರು. ಒಂದನೆಯದಾಗಿ ನಿಝಾಮನ ರೀತಿಯಲ್ಲಿ ಬಹು ಚಿಂತನೆಯೊಂದಿಗೆ ಶ್ರಮವಹಿಸಿ ಎಲ್ಲಡೆ ನೀರಿನ ಆಣೆಕಟ್ಟು ರೀತಿಯಲ್ಲಿ ಒಂದು ಒಂದು ಹನಿ ಬೆಳೆಗಳನ್ನು ಬೆಳೆಸಲು ಉಪಯೋಗಿಸಿಕೊಳ್ಳುವಂತೆ ಮಾಡಿದರು. ಇನ್ನೊಂದೆಡೆ ಅವರು ಭಾವನೆಗಳನ್ನು ತಮ್ಮ ಉತ್ತೇಜಿತ ಭಾಷಣಗಳಿಂದ ಒಂದು ಉತ್ಸಾಹ ತುಂಬಿದರು. ಪ್ರತಿಯೊಂದು ಹೃದಯದಲ್ಲಿ ತ್ಯಾಗಭಾವನೆ ಮೂಡಿತು. ಈ ರೀತಿ ಅವರು ಕಟ್ಟುನಿಟ್ಟಿನ ಎಂತಹದೊಂದು ನಿಯಮ ರೂಪಿಸಿದರೆಂದರೆ ಅದು ಪ್ರಳಯ ರೀತಿ ನಾಶ ಹೊಂದುವ ಬದಲು ನಿಯಮಗಳ ಅಡಿಯಲ್ಲಿ ಭೂಮಿಯಲ್ಲ. ಫಲವತ್ತಾಗುವಂತೆ ಮಾಡಿದರು. ಆಗ ಭಾವನೆಗಳು ಹೇಗಿದ್ದವು ಎಂದರೆ ಅವರು ಬಯಸಿದರೆ ಸುಮಾರು ನಿಷ್ಠಾವಂತರನ್ನು ಶುದ್ಧಿ ಆಂದೋಲನಲ್ಲಿ ತೊಡಗಿಸಿಕೊಳ್ಳುತ್ತಿದ್ದರು ಆದರೆ ಅವರಿಗೆ ತಿಳಿಸಿದ್ದರು. ಹೀಗೆ ಮಾಡುವುದರಿಂದ ಲಾಭಕ್ಕಿಂತ ನಷ್ಟವೇ ಹೆಚ್ಚಾಗುವುದು. ಸ್ವಲ್ಪದರಲ್ಲೇ ಸಮುದಾಯದ ಎಲ್ಲ ಶಕ್ತಿ ಕ್ಷೀಣಗೊಂಡು ಉತ್ಸಾಹ ಕುಂದಬಹುದಾಗಿತ್ತು. ಹಾಗೆ ಅವರು ಪ್ರಾರಂಭದಲ್ಲಿ ಕೇವಲ ಒಂದೂವರೆ ಸಾವಿರ ಮುಜಾಹಿದೀನ್‌ಗಳಿಗೆ ಕರೆ ನೀಡಿದರು. ಅದಾಗ್ಯೂ ಕೆಲವೇ ದಿನಗಳಲ್ಲಿ ಒಂದೂವರೆ ಸಾವಿರ ಸಮೀಪ ಯುವಕರು, ವೃದ್ಧರು ತಮ್ಮನ್ನು ತಾವು ಪ್ರಸ್ತುತಪಡಿಸಿದರು. ಆದರೆ ಅವರು ಅತ್ಯಂತ ಜಾಣ್ಮೆಯಿಂದ ಪರಿಸ್ಥಿತಿಗನುಗುಣವಾಗಿ ಆಯ್ಕೆ ಮಾಡಿಕೊಂಡರು ಮತ್ತು ಅವರನ್ನು ವಿವಿಧ ಗುಪುಗಳಲ್ಲಿ ವಿಂಗಡಿಸಿ ಪ್ರತಿಯೊಂದು ಗುಂಪಿಗೆ ಒಬ್ಬ ಅಮೀರ್ ನಿಯುಕ್ತಗೊಳಿಸಿದರು. ಅವರು ತಮ್ಮ ಕ್ಷೇತ್ರದಲ್ಲಿದ್ದು ಕೊಟ್ಟ ಹೊಣೆಗಾರಿಕೆಯನ್ನು ಪಾಲಿಸುವಂತೆ ಮಾಡಿದರು. ಇವೆಲ್ಲದರ ಮೇಲೆ ಮು. ಚೌಧರಿ ಫತಹ ಮುಹ್ಮದ್ ಸಾಹಿಬ್ ಸಯ್ಯಾಲ್(ರ) ಅವರನ್ನು ಅಮೀರನನ್ನಾಗಿ ಮಾಡಿದರು. ಅವರಿಗೆ ಕೊಟ್ಟ ನಿಯಮಿತ ನಿರ್ದೇಶನಗಳ ಸಾರಾಂಶ ಹೀಗಿತ್ತು. ಅಮೀರನ ಅನುಸರಣೆ ಯಾವುದೇ ಕಾರಣಕ್ಕೂ ಮೀರಬಾರದು. ಆಕ್ರೋಶ ಆವೇಶಕ್ಕೆ ಒಳಗಾಗಬಾರದು. ಎಂತಹ ಒತ್ತಡ ಬಂದರೂ ಗೊಂದಲದಿಂದ ದೂರವಿರಬೇಕು.

ಹೊಡೆತ ತಿಂದರೂ ಕೈ ಎತ್ತಬಾರದು. ಕನಿಷ್ಟ ಮೂರು ತಿಂಗಳಿಗಾದರೂ ಸೇವೆಗೆ ಒಳಗಾಗಬೇಕು. ಈ ಅವಧಿಯಲ್ಲಿ ಖರ್ಚುಗಳನ್ನು ಸ್ವಯಂ ವಹಿಸಿಕೊಳ್ಳಬೇಕು. ಸ್ಥಳೀಯ ಜನರ ಮೇಲೆ ಯಾವುದೇ ರೀತಿಯ ಸಾಂಪತ್ತಿಕ ಅಥವಾ ವೈಯಕ್ತಿಕ ಒತ್ತಡ ಹೇರಲು ಅನುಮತಿ ಇರುವುದಿಲ್ಲ. ಊಟ ಸಿಗಲಿಲ್ಲ ಎಂದರೆ ಕಡಲೆ ತಿನ್ನಬೇಕು. ಕಡಲೆಯು ದೊರೆಯಲಿಲ್ಲ ಎಂದರೆ ಮರಗಳ ಎಲೆಗಳನ್ನು ತಿಂದು ಬದುಕಬೇಕಾಗಿದೆ. ಒಟ್ಟು ಸ್ಥಳೀಯ ಜನರಿಂದ ಬೇಡಿ ತಿನ್ನುವ ಭಾವನೆಯು ಬರಬಾರದು. ಕೇವಲ ನಾಲಿಗೆ ಮಾತುಗಳಿಂದ ಕೆಲಸ ತೆಗೆದುಕೊಳ್ಳಬಾರದು. ಬದಲು ಸಾಧ್ಯವಾದಷ್ಟು ಕ್ಷೇತ್ರದ ಬಡವರತ್ತ ದಾರಿದೀಪವನ್ನಾಗಿ ಮಾಡಿಕೊಂಡು ಎಲ್ಲ ಜನರು ಈ ಆಂದೋಲನದಲ್ಲಿ ಭಾಗವಹಿಸಿದ್ದರು. ಅವರು ತಮ್ಮ ಶಿಸ್ತು ಹಾಗೂ ತ್ಯಾಗದ ಅಸಾಮಾನ್ಯ ಮಾದರಿಯನ್ನು ಯಾವ ರೀತಿ ತೋರಿಸಿಕೊಟ್ಟರೆಂದರೆ ಇಸ್ಲಾಮಿನ ಪ್ರಾರಂಭಿಕ ಕಾಲದ ನೆನಪುಗಳು ಮರುಕಳಿಸಿದಂತಾಯಿತು.

ಮುಜಾಹಿದ್ದೀನ್ ಶತಪ್ರತಿಶತ ತಮ್ಮ ಖರ್ಚು ಸ್ವಯಂ ತಾನೇ ವಹಿಸಿಕೊಂಡರೂ, ಈ ಖರ್ಚಿನ ಹೊರತಾಗಿಯೂ ಅವರಿಗೆ ಕಾರ್ಯಕ್ಷೇತ್ರದಲ್ಲಿ ತನ್ನ ಕೇಂದ್ರೀಯ ವ್ಯವಸ್ಥೆಯ ಅಗತ್ಯವಾದ ಸಾಹಿತ್ಯ ವಿವರಣೆ ಮತ್ತು ಪರಿಸ್ಥಿತಿಗಳ ಸುದ್ದಿ ಪ್ರಚಾರ ಮತ್ತು ಅಗತ್ಯಕ್ಕನುಸಾರ ಮೊಕದ್ದಮೆಗಳನ್ನು ನಿರ್ವಹಿಸಲು, ಸರಕಾರಿ ಅಧಿಕಾರಿಗಳೊಡನೆ ಸಂಪರ್ಕ ಸಾಧಿಸಲು ಹೆಚ್ಚಿನ ಹಣದ ಅಗತ್ಯವಿತ್ತು. ಅದೇ ಕಾರಣದಿಂದ ಅವರು ಜಮಾಅತಿನಲ್ಲಿ ಐವತ್ತು ಸಾವಿರ ರೂಪಾಯಿಗಳ ಚಂದಾ ಕೊಡಲು ಕೋರಿದರು. ಆ ಕೋರಿಕೆಗೂ ಜಮಾಅತ್ ಆಶ್ಚರ್ಯಕರ ರೀತಿಯಲ್ಲಿ ಸ್ಪಂದಿಸಿತು. ಕೆಲವೇ ಅವಧಿಯಲ್ಲಿ ಈ ಬೇಡಿಕೆಯನ್ನು ಪೂರೈಸಿ ಒಂದು ಲೋಕವೇ ಬೆರಗಾಗುವಂತೆ ಮಾಡಿದರು. ಆ ಸಮಯ ಈ ಸಂಪತ್ತಿನ ಬೇಡಿಕೆ ಸಣ್ಣ ಮಾತೇನೂ ಆಗಿರಲಿಲ್ಲ. ಅದಕ್ಕೆ ಭಾರತದ ಅಹ್ಮದಿಯೇತರು ಮತ್ತು ಅನುಸಿಮ್ ಮಾಧ್ಯಮಗಳು ಸಹ ಈ ವಿಷಯ ಗಂಭೀರವಾಗಿ ಪರಿಗಣಿಸಿದರು ಮತ್ತು ಈ ಸಣ್ಣದಾದ ಜಮಾಅತ್ ಇಷ್ಟೊಂದು ದೊಡ್ಡ ಮೊತ್ತ ಪೂರೈಸಬಹುದೇ ಅಥವಾ ಇಲ್ಲವೇ ಎಂದು ಕಾದು ಕುಳಿತಿದ್ದರು. ನಿಸ್ಸಂಶಯವಾಗಿಯೂ ಆ ಸಮಯಕ್ಕೆ ಜಮಾಅತಿಗೆ ಇದು ಅತಿದೊಡ್ಡ ಮೊತ್ತವಾಗಿತ್ತು. ಒಂದು ಅಸಾದಾರಣ ರೀತಿ ಮನುಷ್ಯ ಇಷ್ಟೊಂದು ಸಣ್ಣದ ಜಮಾಅತ್ ಇಷ್ಟೊ ದೊಡ್ಡ ತ್ಯಾಗ ಮಾಡಬಹುದು ಎಂದು ಊಹಿಸಲು ಸಾಧ್ಯವಿರಲಿಲ್ಲ. ಆದರೆ ಲೋಕವು ಈ ದೃಶ್ಯ ಆಶ್ಚರ್ಯಚಕಿತನಾಗಿ ನೋಡಿತು. ಜಮಾಅತ್ ಎಲ್ಲ ರೀತಿಯಿಂದಲೂ ಅವರೊಡನೆ ಸಹಕರಿಸಿ ಮತ್ತು ಎಲ್ಲ ಕರೆಗಳಿಗೆ ಓಗೊಟ್ಟಿತು. ಕೇವಲ ತ್ಯಾಗಗಳನ್ನು ಪ್ರಸ್ತುತಪಡಿಸಲಿಲ್ಲ. ಅದನ್ನು ಯಾವ ಘನ ಮತ್ತು ನಿಷ್ಠೆ ವಿಶ್ವಾಸ ಭಾವನೆಯಿಂದ ಪ್ರಸ್ತುತ ಪಡಿಸಿತೆಂದರೆ ಅದನ್ನು ನೆನಪಿಸಿಕೊಂಡರೆ ಇಂದು ಸಹ ಕಣ್ಣುಗಳು ತೇವಗೊಳ್ಳುತ್ತವೆ. ಮತ್ತು ಹೃದಯಾಂತರಾಳದಿಂದ ಆ ಮುಜಾಹಿದೀನ್‌ಗಳಿಗೆ ಸ್ವಯಂ ಪ್ರೇರಿತವಾಗಿ ಪ್ರಾರ್ಥನೆ ಮಾಡುತ್ತದೆ. ಅಲ್‌ಫಝಲ್ 15 ಮಾರ್ಚ್ 1923ರಲ್ಲಿ ಒಬ್ಬ ವೃದ್ಧ ತಂದೆಯ ಭಾವನೆಗಳು ಹೀಗೆ ವ್ಯಕ್ತವಾಗಿದೆ.

10 ಮಾರ್ಚ್‌ನಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯರು(ರ) ಅಸರ್ ನಮಾಝ್ ನಂತರ ಮಸೀದಿಗೆ ಆಗಮಿಸಿದರು. ಆಗ ಖ್ವಾರಿ ನಯೀಮುದ್ದೀನ್ ಸಾಹಿಬ್ ಬಂಗಾಳಿ (ಅವರು ಓರ್ವ ವೃದ್ಧ ಸಜ್ಜನರಾಗಿದ್ದರು) ಏನೋ ಹೇಳಲು ಅನುಮತಿ ಕೋರಿದರು. ಅನುಮತಿ ದೊರೆತ ನಂತರ ತನ್ನ ಬಂಗಾಳಿ ಭಾಷೆ ಮತ್ತು ಉರ್ದುವಿನಲ್ಲಿ ಉತ್ಸಾಹಪೂರ್ಣ ಭಾಷಣ ಮಾಡಿದರು.

ಖ್ವಾರಿ ಸಾಹಿಬ್ ಹೇಳಿದರು....... ನನ್ನ ಮಕ್ಕಳಾದ (ಮೌಲ್ವಿ) ಝಿಲ್ಲುರ್ ರಹ್ಮಾನ್ ಮತ್ತು ಮಲೆವುರ್ ರಹ್ಮಾನ್ (ಬಿ.ಎ ವಿದ್ಯಾರ್ಥಿಗಳು) ಅವರೇನು ನನಗೆ ಹೇಳಲಿಲ್ಲ. ಆದರೆ ಅಂದಾಜಿನ ಮೇರೆಗೆ ಹುಝೂರ್ ನಿನ್ನೆ ರಾಜಪೂತಾನದಲ್ಲಿ ಹೋಗಿ ತಬ್ಲೀಗ್ ಮಾಡಲು ಜೀವಿತಾರ್ಪಣೆ ಗೋಸ್ಕರ ಕರೆ ಕೊಟ್ಟಿದ್ದಾರೆ. ಮತ್ತು ಅಲ್ಲಿಯ ಪರಿಸ್ಥಿತಿ ಗನುಗುಣವಾಗಿ ಒಡ್ಡಿದ ಶರತ್ತುಗಳನ್ನು ನೋಡಿ ಅವರ ಮನಸ್ಸಿನಲ್ಲಿ ಬರಬಹುದು. ತಮ್ಮನ್ನು ತಾವು ಹುಝೂರರ ಸೇವೆಗೆ ಅರ್ಪಿಸಿದರೆ ನಾನು ಅವರ ವೃದ್ಧ ತಂದೆಯಾಗಿದ್ದೆ ಎಂದು ಸಂಕಟಪಡಬಹುದು. ಆದರೆ ನಾನು ಹುಝೂರರ ಮುಂದೆ ಅಲ್ಲಾಹನನ್ನು ಸಾಕ್ಷಿವಹಿಸಿ ಹೇಳುತ್ತೇನೆ. ನನಗೆ ಅವರು ಹೋಗುವುದರಿಂದ ಅಲ್ಲಿ ಅವರು ಕಷ್ಟಗಳನ್ನು ಎದುರಿಸುವುದರಿಂದ ನನಗೆ ಸ್ವಲ್ಪವು ದು:ಖ ಇಲ್ಲ. ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇವರಿಬ್ಬರು ಸಹ ಅಲ್ಲಾಹನ ಮಾರ್ಗದಲ್ಲಿ ಸೇವೆ ಸಲ್ಲಿಸುತ್ತಾ ಹತರಾದರೂ ಒಂದು ಭಾಷ್ಪ ಸಹ ಸುರಿಯುವುದಿಲ್ಲ. ಬದಲು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುವೆನು. ಮತ್ತು ಇವರಿಬ್ಬರು ಅಷ್ಟೇ ಅಲ್ಲ ನನ್ನ ಮೂರನೆಯ ಮಗ ಮೊಹಬೂಬು ರಹ್ಮಾನ್ ಸಹ ಇಸ್ಲಾಂ ಧರ್ಮದ ಸೇವೆಯಲ್ಲಿ ಹತರಾದರೂ. ನನಗೆ ಹತ್ತು ಮಕ್ಕಳಿದ್ದರೆ ಅವರೂ ಸಹ ಹತರಾದೆ ನಾನು ಯಾವ ದುಃಖವು ಪಡುವುದಿಲ್ಲ. ಮಕ್ಕಳ ಸಂಕಟದಲ್ಲಿ ಸಂತೋಷಪಡುವುದು ದೊಡ್ಡ ಮಾತೇನಲ್ಲ ಎಂದು ಹೇಳಬಹುದು. ಕೆಲ ಜನರಿಗೆ ಕೆಲ ರೋಗದಿಂದಲೂ ತಮ್ಮ ಸ್ನೇಹಿತರ ಸಾವಿನಲ್ಲೂ ನಗುತ್ತಿರುತ್ತಾರೆ. ಆದರೆ ನಾನು ಹೇಳುವೆನು. ನಾನು ಸಹ ಅಲ್ಲಾಹನ ಮಾರ್ಗದಲ್ಲಿ ಹತನಾದರೆ ನನಗೆ ಅದು ಸಹ ಸಮತೋಷದ ಮಾತಾಗುವುದು.

ತೋರಿಕೆ ಮತ್ತು ಆಡಂಬರ ವಿನಾಶದ ಮಾತಾಗಿವೆ ಎಂಬುದುನ್ನು ನಾನು ತಿಳಿದಿರುತ್ತೇನೆ. ಆದುದರಿಂದ ನಾನು ಹುಝೂರರೊಂದಿಗೆ ವಿನಂತಿಸಿ ಕೊಳ್ಳುತ್ತೇನೆ. ನನಗಾಗಿ ಪ್ರಾರ್ಥಿಸಬೇಕು. ಅಲ್ಲಾಹನು ನನ್ನನ್ನು ತೋರಿಕೆ ಮತ್ತು ಆಡಂಬರದಿಂದ ರಕ್ಷಿಸುವಂತಾಗಲಿ ಮತ್ತು ನನಗೆ ಆತ್ಮೀಯತೆ ನೀಡುವಂತಾಗಲಿ ಬಂಗಾಳಿ ಜನರು ಚಿತ್ತ ಶಕ್ತಿಯುತವಾಗಿರುವುದಿಲ್ಲ. ಆದರೆ ವಾಗ್ದತ್ತ ಮಸೀಹರ ಮೇಲೆ ವಿಶ್ವಾಸ ತಂದ ಕಾರಣ ನಮ್ಮ ಹೃದಯಗಳು ಶಕ್ತಿಯನ್ನು ಹೊಂದಿವೆ. ಮತ್ತು ನಮ್ಮ ವಿಶ್ವಾಸವು ನಮ್ಮ ದುರ್ಬಲತೆಯನ್ನು ಹೋಗಲಾಡಿಸಿದೆ. (ಅಖ್ಬಾರ್ ಅಲ್‌ಫಝಲ್, 15 ಮಾರ್ಚ್ 1923, ಪುಟ 11)

ಇಂತಹ ಹಲವು ಉದಾಹರಣೆಗಳನ್ನು ಪ್ರಸ್ತುತಪಡಿಸಬಹುದಾಗಿದೆ. ಅವರ ಬಳಿ ಕೇವಲ ಏನೂ ಇರಲಿಲ್ಲ. ಅವರು ತನ್ನ ಮನೆ ಅಥವಾ ಭೂಮಿ ಅಥವಾ ಬಂಡವಾಳ ಮಾರಾಟ ಮಾಡಿ ಈ ಜಿಹಾದಿನಲ್ಲಿ ಭಾಗವಹಿಸಿದ್ದಾರೆ. ಡಾ. ಮನ್‌ಸೂರ್ ಅಹ್ಮದ್ ಸಾಹಿಬರ ಬಳಿ ಕೇವಲ ಒಂದು ಎಮ್ಮೆಯಿತ್ತು ಅದನ್ನು ಸಿಕ್ಕ ಬೆಲೆಯಲ್ಲಿ ಮಾರಾಟ ಮಾಡಿದರು. ನೋಡಲಿಕ್ಕೆ ಅದು ನಷ್ಟದ ವ್ಯವಹಾರವಾಗಿತ್ತು ಆದರೆ ತುಂಬಾ ಸಂತೋಷದಿಂದ ಹೇಳುತ್ತಿದ್ದರು. ಸಮಯಕ್ಕೆ ಸರಿಯಾಗಿ ಗ್ರಾಹಕ ಲಭ್ಯವಾಗಿತ್ತು. ಕೆಲ ಬಡವರು ಪತ್ರಗಳನ್ನು ಬರೆದು ಏನೆಲ್ಲ ಅವರ ಬಳಿಯಿದೆ. ಅದನ್ನು ಮಾರಾಟ ಮಾಡಿ ಜಿಹಾದಿನಲ್ಲಿ ಭಾಗವಹಿಸ ಬಯಸುತ್ತಿದ್ದರು. ಝೀರ ಫೇರೋಝ್‌ಪುರ್‌ನ ಓರ್ವ ಬಡವರಾದ ಅಲಿ ಶೆರ್ ಸಾಹಿಬ್ ಹುಝೂರರ ಸೇವೆಯಲ್ಲಿ ಬರೆದರು.

"ನಿಮ್ಮ ಆಜ್ಞೆ ಆಲಿಸಿದೆ. ನಾನು ಒಬ್ಬ ಬಡ ಮನುಷ್ಯನಾಗಿದ್ದೇನೆ. ಹುಝೂರರ ಶರತ್ತುಗಳನ್ನು ಸ್ವೀಕರಿಸಲು ಅರ್ಹನಲ್ಲ. ಅದಕ್ಕೆ ನಮಗೆ ತುಂಗಾ ವಿಷಾದ ಇದೆ. ನಲ್ವತ್ತು ರೂಪಾಯಿಗಳ ಸಾಲ ಇದೆ. ಆದರೆ ಒಂದು ಮನೆ ಇದೆ, ತಮ್ಮ ಆಜ್ಞೆಯಿದ್ದರೆ ಅದನ್ನು ಮಾರಾಟ ಮಾಡಿ ಅಥವಾ ಗಿರವಿ ಇಟ್ಟು ಧರ್ಮ ಪರಿತ್ಯಾಗಗಳ ಮೈದಾನದಲ್ಲಿ ಆದಷ್ಟು ಶೀಘ್ರ ಹೋಗಬಯಸುತ್ತೇನೆ.

ತಮ್ಮ ವಿನೀತ ಅಲೀ ಶೇರ್– ಝಿರಾ ಫೇರೋಝ್‌ಪುರ"

(ಕಾರ್‌ಝಾರ್ ಶುದ್ಧಿ ಲೇಖಕರು ಮುಹಮ್ಮದ್ ಶಫೀ ಸಾಹಿಬ್ ಅಸ್ಲಂ, ಪುಟ–45)

ಮಹಿಳೆಯರಲ್ಲು ಬರ್ಲಿನ್ ಮಸೀದಿ ಚಂದದ ಹೊಣೆ ಇದ್ದರೂ ಅವರಲ್ಲಿ ತುಂಬಾ ಉತ್ಸಾಹವಿತ್ತು. ಅವರು ತಮ್ಮ ವಸ್ತ್ರಗಳನ್ನು ಮತ್ತು ಶಾಲುಗಳು ಇತ್ಯಾದಿ ತನ್ನ ಮಲ್ಕಾನ ಸಹೋದರರಿಗೆ ಕಳುಹಿಸುತ್ತಿದ್ದರು. ಸಣ್ಣ ಸಣ್ಣ ಹುಡುಗಿಯರು ಸಹ ಈ ಸತ್ಕಾರ್ಯದಲ್ಲಿ ಪಾಲ್ಗೊಳ್ಳುತ್ತಿದ್ದರು. ನಮ್ಮ ಸಹೋದರಿ ಅಮ್ತುಲ್ ಖಿಯಾಮ್ ಬೇಗಂ ನಮ್ಮ ಸಹೋದರ ಸಂಬಂಧಿ ಎಂ.ಎಂ. ಅಹ್ಮದ್ (ಮಾಜಿ ಹಣಕಾಸು ಮಂತ್ರಿ ಪಾಕಿಸ್ತಾನ ಸರಕಾರದ) ಪತ್ನಿಯಾಗಿದ್ದರು. ಆಗ ಅವರು ಆರು ವರ್ಷದವರಾಗಿದ್ದರು.

ಅವರು ಸಹ ಒಂದು ಸಣ್ಣದಾದ ಶಾಲು ಮಲ್ಕಾನದ ಸಣ್ಣ ಹುಡುಗಿಯರಿಗೆ ಕೊಡಲು ನೀಡಿದರು. ಸಾಮಾನ್ಯವಾಗಿ ಇತರ ಅಹ್ಮದಿ ಹುಡುಗಿಯರದ್ದು ಸಹ ಇದೆ ಬಯಕೆ ಇತ್ತು. ಸಣ್ಣ ಸಣ್ಣ ಮಕ್ಕಳೂ ಸಹ ತಮ್ಮ ಸಭೆಯಲ್ಲಿ ಕುಳಿತು ಮಲ್ಕಾನ ವಿಷಯದಲ್ಲೇ ಮಾತನಾಡುತ್ತಿದ್ದರು. ಅಹ್ಮದಿ ಮಹಿಳೆಯರ ಜಿಹಾದಿನ ಬಯಕೆ ಕೇವಲ ಸಂಪತ್ತಿನಿಂದ ಸಹಾಯ ಮಾಡುವುದಷ್ಟೇ ಆಗಿರಲಿಲ್ಲ. ಬದಲು ಹೇಗೋ ಮಾಡಿ ಆ ಕಾರ್ಯಕ್ಷೇತ್ರದಲ್ಲಿ ಹೋಗಿ ಆ ಮಹತ್ತರ ಕಾರ್ಯದಲ್ಲಿ ಭಾಗವಹಿಸಲು ಆತುರ ಪಡುತ್ತಿದ್ದರು. ಸಹೋದರಿ ಉರ್ ಬಿಬಿ ಆಗ್ರಾದಿಂದ ಹುಝೂರರ ಸೇವೆಯಲ್ಲಿ ಬರೆದರು.

ಹುಝೂರ್ ನಾನು ಕೇವಲ ಖುರ್‌ಆನ್ ಓದಬಲ್ಲೆ ಮತ್ತು ಸ್ವಲ್ಪ ಉರ್ದು ಭಾಷೆ ಬಲ್ಲೆ. ನನ್ನ ಮಗನಿಂದ ತಿಳಿಯಿತು. ಮುಸಲ್ಮಾನರು ಧರ್ಮ ಪರಿತ್ಯಾಗ ಮಾಡುತ್ತಿದ್ದಾರೆ. ಹುಝೂರ್ ಅವರಿಗೆ ಅಲ್ಲಿ ಹೋಗಲು ಆದೇಶ ನೀಡಿದ್ದಾರೆ. ನನಗೆ ಸಹ ಆದೇಶ ಕೊಟ್ಟರೆ ಹೋಗಲು ಸಿದ್ಧನಿದ್ದೇನೆ. ಸ್ವಲ್ಪವು ತಡ ಮಾಡುವುದಿಲ್ಲ. ಅಲ್ಲಾಹನ ಮೇಲೆ ಆಣೆವಹಿಸಿ ಹೇಳುತ್ತೇನೆ. ನಾನು ಎಲ್ಲ ರೀತಿಯ ಕಷ್ಟಗಳನ್ನು ಸಹಿಸಲು ಸಿದ್ಧನಿದ್ದೇನೆ. (ಕಾರ್‌ಝಾರೆ ಶುದ್ಧಿ. ಪುಟ 46).

ಅಮ್ತುರ್ ರಹ್ಮಾನ್ ಸಾಹಿಬ ಮಿಡ್ ವಯಿಫ್ ಜೇರಾ ಹಾಸ್ಪಿಟಲ್ ಅವರು ತಮ್ಮ ಅಭಿಲಾಷೆ ಹೀಗೆ ವ್ಯಕ್ತಪಡಿಸಿದರು. "ಹುಝೂರ್ ನನ್ನ ತಂದೆ ಮಸೀಹ್ ಮೌಊದ್ (ಅ) ರವರ ಪ್ರೇಮಿಯಾಗಿದ್ದರು. ಅವರು ಇಬ್ಬರು ಹುಡುಗ ಹಾಗೂ ಓರ್ವ ಹುಡುಗಿಯನ್ನು ಬಿಟ್ಟು ಅಗಲಿದರು. ನನ್ನ ಎರಡೂ ಸಹೋದರರು ಅಬ್ದುಲ್ ರಹೀಮ್ ಮತ್ತು ಅಬ್ದುಲ್ಲ ತಮ್ಮ ಆದೇಶದ ಮೇರೆಗೆ ಜಿಹಾದಿನಲ್ಲಿ ಭಾಗವಹಿಸಿದ್ದರೆ ಉತ್ತಮವಾಗಿರುತ್ತಿತ್ತೆಂದು ನನ್ನ ಮನಸ್ಸು ಬಯಸುತ್ತಿದೆ ಇವಳು ಸಹ ಮೂರು ತಿಂಗಳಿಗೊಸ್ಕರ ಜೀವಿತರ್ಪಣೆ ಮಾಡಬಯಸುತ್ತಿದ್ದಾಳೆ." (ಕಾರ್‌ಝಾರ್ ಶುದ್ಧಿ, ಪುಟ 46–47).

ಶುದ್ಧಿ ಆಂದೋಲನದ ನಡುವೆ ಅಹ್ಮದಿಯಾ ಜಮಾಅತ್ ಯಾವ ಉತ್ಸಾಹದಿಂದ ತ್ಯಾಗಗಳನ್ನು ಮಾಡಿದೆ. ಮತ್ತು ಯು.ಪಿ.ಯ ಹಲವು ಪ್ರಭಾವಿತ

ಜಿಲ್ಲೆಗಳಲ್ಲಿ ಅತ್ಯಂತ ಯಶಸ್ವಿ ರೀತಿಯಲ್ಲಿ ಆರ್ಯ ಸಮಾಜವನ್ನು ಎದುರಿಸಿದ್ದಾರೆ ಮತ್ತು ಎಲ್ಲ ಕ್ಷೇತ್ರಗಳಲ್ಲೂ ಅವರನ್ನು ಸೋಲಿಸಿದರು. ಅದರದು ಒಂದು ದೀರ್ಘವಾದ ಮತ್ತು ರೋಚಕ ಘಟನೆಯಾಗಿದೆ. ಅವರ ನಿಜವಾದ ಸಂಬಂಧ ಅಹ್ಮದಿಯಾ ಇತಿಹಾಸ ಜೊತೆಗಿದೆ. ಸ್ವಲ್ಪಮಟ್ಟಿಗೆ ಅಹ್ಮದಿಯತ್ತಿನ ಇತಿಹಾಸದಲ್ಲಿ ಆ ಬಗ್ಗೆ ಪ್ರಕಾಶ ಬೀರಲಾಗಿದೆ. ಇದೀಗ ನಮ್ಮ ದೃಷ್ಟಿ ನೇರವಾಗಿ ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯರ ವ್ಯಕ್ತಿತ್ವ ಮತ್ತು ಸಾಮರ್ಥ್ಯ ಸಂಬಂಧದಲ್ಲಿದೆ.

ಎಲ್ಲಿಯವರೆಗೆ ಅವರ ಸಂಬಂಧ ಓರ್ವ ಯಶಸ್ವಿ ನೇತೃತ್ವದ ಪ್ರಕಾರ ಈ ಆಂದೋಲನದ ಮಹತ್ವದ ಕುರಿತಾಗಿದೆ ಮತ್ತು ಪ್ರತಿಯೊಂದು ಕ್ಷೇತ್ರದಲ್ಲಿ ವಿಜಯ ಸಾಧಿಸಿದರು. ಅದರ ಒಂದಿಷ್ಟು ವಿವರ ಮುಂದೆ ನೀಡಲಾಗುವುದು. ಸದ್ಯ ಇದೀಗ ಖಿಲಾಫತ್ ಕಾಲದ ನಡುವೆ ಅವರ ಸಾಧನೆಗಳು ಮತ್ತು ಶುದ್ಧಿ ಆಂದೋಲನ ನಡುವೆ ಅವರು ವಹಿಸಿದ ಪಾತ್ರದಲ್ಲಿ ಯಾವ ವ್ಯತ್ಯಾಸ ಕಂಡುಬರುತ್ತದೆಂದರೆ ಅವರು ತಕ್ಕಸಮಯದಲ್ಲಿ ಎಚ್ಚರಿಕೆ ಮತ್ತು ಅಮೂಲ್ಯವಾದ ಸಲಹೆಗಳನ್ನು ನೀಡಿ ತಮ್ಮ ಕರ್ತವ್ಯ ಪಾಲಿಸಿದರು. ಅವರು ಅಲ್ಲಾಹನ ಕೃಪೆಯಿಂದ ತನ್ನ ಸಲಹೆಗಳೊಂದಿಗೆ ಸತ್ಯತೆ, ಘನತೆ, ಗೌರವವನ್ನು ಕಾರ್ಯಕ್ಷೇತ್ರದಲ್ಲಿ ಸರಿಯಾದ ರೀತಿಯಲ್ಲಿ ಸಾಬೀತು ಮಾಡಿ ತೋರಿಸಿದರು. ಲೋಕವು ಒಂದು ಹೊಸ ದೃಷ್ಟಿ, ಚಿಂತನೆಯೊಂದಿಗೆ ಪ್ರಜೆಗಳ ಭಾವನೆಗಳನ್ನು ನಿಯಂತ್ರಣದಲ್ಲಿ ತಂದಿದೆ.

ಈ ಸಂದರ್ಭದಲ್ಲಿ ಇನ್ನೊಂದು ಘಟಣೆಯಿಂದ ಅವರ ಯಶಸ್ವಿ ನೇತೃತ್ವದ ಅರ್ಹತೆ ಬಯಲಿಗೆ ಬಂತು. ಅದೇನೆಂದರೆ ಆಗ ಜಮಾಅತಿನಲ್ಲಿ ಅತಿ ಹೆಚ್ಚು ಆರ್ಥಿಕ ಮುಂಗಟ್ಟಿನ ಅವಸ್ಥೆಯಲ್ಲೂ ಹೆಚ್ಚು ಸಾಂಪತ್ತಿಕ ಬೇಡಿಕೆ ಮಾಡದೇ ಇರಲಿಲ್ಲ. ಬದಲು ಮತ್ತೆ ಮತ್ತೆ ಸಾಂಪತ್ತಿಕ ತ್ಯಾಗಕ್ಕಾಗಿ ಕರೆ ನೀಡುತ್ತಾ ಹೇಳಿದರು. ಅದು ತುಂಬಾ ಕಷ್ಟಕರ ವಿಷಯವಾಗಿ ಕಾಣುತಿತ್ತು. ಜಮಾಅತಿಗೆ ತಮ್ಮ ಕಾರ್ಯಕರ್ತರ ಮಾಸಿಕ ಸಂಬಳ ಸಹ ನೀಡುವ ತಾಕತ್ತು ಇರಲಿಲ್ಲ. ಮಹಿಳೆಯರಿಂದಲೇ ಐವತ್ತು ಸಾವಿರ ರೂಪಾಯಿಗಳಂತಹ ದೊಡ್ಡ ಮೊತ್ತ ಯಾಚಿಸುವುದು ಮತ್ತು ಅದನ್ನು ಕಾಯದೆ ತಕ್ಷಣವೇ ಇನ್ನು ಐವತ್ತು ಸಾವಿರ ರೂಪಾಯಿಗಳ ಚಂದಕ್ಕಾಗಿ ಕರೆ ನೀಡಿರುವುದು ದಿಟವಾಗಿಯೂ ತುಂಬಾ ಸಾಹಸದ ಕೆಲಸವಾಗಿತ್ತು. ಹೀಗೆ ನೋಡುವುದಾದರೆ ಅದರ ಪರಿಣಾಮ ಚಂದ ಪಡೆಯುವುದು ಅಸಾಧ್ಯವಾಗಬೇಕಾಗಿತ್ತು ಆದರೆ ಪರಿಣಾಮ ಅದಕ್ಕೆ ತದ್ವಿರುದ್ಧವಾಗಿತ್ತೆಂದು ನಂತರದ ಪರಿಸ್ಥಿತಿಗಳು ಸಾಬೀತುಪಡಿಸಿದವು. ಜಮಾಅತಿನ ಆರ್ಥಿಕ ವ್ಯವಸ್ಥೆಯು ನಿಜ ಅರ್ಥದಲ್ಲಿ ಇನ್ನಷ್ಟು ಬಲಗೊಂಡಿತು. ಅದೇ ಕಷ್ಟಕಾಲದಲ್ಲಿ ಈ ಎರಡೂ ಕರೆಗಳ ಪರಿಣಾಮವಾಗಿ ಮತ್ತು ಅದರ ಕಾರುಣ್ಯದಿಂದಾಗಿ ಜಮಾಅತಿನಲ್ಲಿ ಆರ್ಥಿಕ ತ್ಯಾಗದ ಭಾವನೆಗಳು ತುಂಬಾ ಜಾಗೃತಗೊಂಡವು. ಹೊಸ ಉತ್ಸಾಹ ಮೂಡಿತು. ಮತ್ತು ಸಾಹಸದ ಹೊಸ ದ್ವಾರಗಳು ತೆರೆದವು. ಒಟ್ಟಿನಲ್ಲಿ ಜಮಾಅತ್ ಸಾಮೂಹಿಕವಾಗಿ, ಸಾಂಪತ್ತಿಕ ತ್ಯಾಗದ ಒಂದು ಉನ್ನತ ಮಟ್ಟದ ಮೇಲೆ ಸ್ಥಾಪಿತವಾದಂತಾಯಿತು. ಸಹಾಬ(ರ) ರವರ ಪವಿತ್ರ ಕಾಲದ ಹೊರತು ಲೋಕದ ಪರದೆಯ ಮೇಲೆ ಅದರ ಇನ್ನೊಂದು ಉದಾಹರಣೆ ಸಿಗದು.

ಸಾರಾಂಶವೇನೆಂದರೆ 1923ರ ವರ್ಷವೇ ಆ ವರ್ಷವಾಗಿದೆ. ಅದರಿಂದ ಮಲ್ಕಾನ್ ಜಿಹಾದ್ ಮತ್ತು ಬರ್ಲಿನ್ ಮಸೀದಿಯ ಚಂದಗಳ ಅನುಗ್ರಹದಿಂದಾಗಿ ಜಮಾಅತಿನಲ್ಲಿ ಮೊದಲ ಬಾರಿಗೆ ಆರ್ಥಿಕ ದೃಢತೆ ದೊರೆಯಿತು. ಮತ್ತು ಪರಿಸ್ಥಿತಿ ಹೇಗೆ ಪಲ್ಲಟಗೊಂಡಿತ್ತೆಂದರೆ ಒಂದು ಹೊಸ ಉತ್ಸಾಹಭರಿತ ಜಮಾಅತ್ ಸೃಷ್ಟಿಸಿದಂತಾಯಿತು.

ಶುದ್ಧಿ ಆಂದೋಲನದಲ್ಲಿ ಬೇರೆ ಮುಸಲ್ಮಾನರು ಸಹ ಸಾಧ್ಯವಾದಷ್ಟು ಮಟ್ಟಿಗೆ ಭಾಗವಹಿಸಿದರು. ಆದರೆ ಅಹ್ಮದಿಯಾ ಜಮಾಅತ್ ಒಂದು ನಿರ್ಣಾಯ ಪಾತ್ರ ವಹಿಸಬೇಕಾಗಿತ್ತು. ಆರ್ಯ ಸಮಾಜ ಹಿಂದೂ ಧಾರ್ಮಿಕತೆಯ ಪುನರುತ್ಥಾನಕ್ಕಾಗಿ ದೇಶದಾದ್ಯಂತ ಒಂದು ಪ್ರಬಲ ಚಳುವಳಿ ಹೂಡಿದ್ದರು. ಅದು ವಿಶೇಷವಾಗಿ ಇಸ್ಲಾಂ ಧರ್ಮದ ವಿರುದ್ಧದ ಭಯಾನಕ ಆಕ್ರಮಣದ ಉದ್ದೇಶ ಹೊಂದಿತ್ತು. ಇನ್ನೊಂದೆಡೆ ಮುಸಲ್ಮಾನರ ಪರವಾಗಿ ಅಹ್ಮದಿಯಾ ಜಮಾಅತ್ ಹೊರತು ಅದರ ವಿರುದ್ಧ ಹೋರಾಡಲು ಯಾರಲ್ಲೂ ಸಾಮರ್ಥ್ಯ ಇರಲಿಲ್ಲ. ಯಾವುದೇ ಇಂತಹ ವ್ಯವಸ್ಥೆ ಇರಲಿಲ್ಲ ದೇವಭಕ್ತಿ ಮತ್ತು ಚಿಂತನೆಯುಳ್ಳ ಮಾರ್ಗದರ್ಶಕನು ಇರಲಿಲ್ಲ. ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಶಕ್ತಿಯೂ ದೃಢತೆಯಿಂದ ಮುಂದುವರೆಯುವ ಸಾಮರ್ಥ್ಯವು ಇರಲಿಲ್ಲ. ಹಾಗೆ ಅಹ್ಮದಿಯಾ ಜಮಾಅತ್ ಮಾತ್ರ ಆ ಪಂಥವಾಗಿತ್ತು. ಅ ಕಾಲದಲ್ಲಿ ನಿಜ ಅರ್ಥದಲ್ಲಿ ಜಮಾಅತಿಗೆ ಇಸ್ಲಾಂ ಧರ್ಮವನ್ನು ಪ್ರತಿನಿಧಿಸುವ ಸಂದರ್ಭ ದೊರೆಯಿತು. ಮತ್ತು ಎಲ್ಲ ಕ್ಷೇತ್ರಗಳಲ್ಲೂ ತಮ್ಮ ಶತ್ರುಗಳನ್ನು ಸೋಲಿನ ಮೇಲೆ ಸೋಲು ಕಾಣುವಂತೆ ಮಾಡಿತು. ಕೊನೆಗೆ ಅವರ ಅಸಫಲತೆ, ಅಭದ್ರತೆಗೆ ತುತ್ತಾಗಿ ಕಾಲು ಕಿತ್ತುವ ಹೊರತು ಬೇರೆ ದಾರಿ ಕಾಣದಂದಾಯಿತು.

ಇದೆಲ್ಲದರ ನಡುವೆ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಮಸೀಹ್ ಮೌಊದ್ (ಅ) ಮತ್ತು ಆರ್ಯ ಸಮಾಜದ ಮುಖಂಡ ಪಂಡಿತ ಲೇಖರಾಮ ಮಧ್ಯೆ ಒಂದು ಘಟನೆ ಘಟಿಸಿತು. ಆದರೆ ಯಾರ ಗಮನವು ಅತ್ತ ಸುಳಿಯಲಿಲ್ಲ. ಇದು ವಾಸ್ತವದಲ್ಲಿ ಅದೇ ಹೋರಾಟದ ಒಂದು ಹೊಸ ರೂಪವಾಗಿತ್ತು. ಆ ಸಮಯ ಯಾರಿಗೆ ಹೇಳಲು ಸಾಧ್ಯವಿತ್ತು. ಲೇಖರಾಮ ಬಹಳ ಗರ್ವದಿಂದ ವಾಗ್ದತ್ತ ಪುತ್ರನ ವಿರುದ್ಧ ಒಂದು ಅಪಶಕುನದ ಭವಿಷ್ಯವಾಣಿ ಮಾಡುತ್ತಿದ್ದ, ಸ್ವಯಂ ಅವನ ಸಮುದಾಯವೇ ಈ ದಿನ ಅವನ ದೊಡ್ಡಸ್ತಿಕೆ ಮತ್ತು ಘನತೆ ಗೌರವದ ಡಂಗುರ ಬಾರಿಸಬಹುದು? ಆ ಸಮಯ ಲೇಖರಾಮನು ಈ ಘೋಷಣೆ ಮಾಡಿದ್ದ. ಆರ್ಯ ಸಮಾಜದ ದೇವನು ಅವನಿಗೆ ತಿಳಿಸಿದ ಒಂದು ವೇಳೆ ಆ ಮಗು ಜನ್ಮವಾದರೂ ಮೂರು ವರ್ಷದೊಳಗೆ ಅವನ ಹೆಸರೇ ಇಲ್ಲದಂತಾಗುವುದು. ಖಾದಿಯಾನಿನ ಹೊರಗೆ ಹೆಸರು ಗಳಿಸುವುದು ಒಂದು ಕಡೆ ಇರಲಿ, ಸ್ವಯಂ ಕಾದಿಯಾನಿನಲ್ಲೇ ಅವನ ಹೆಸರು ಯಾರಿಗೂ ತಿಳಿದಿರಕ್ಕಿಲ್ಲ. ಯಾರು ಹೇಳಬಹುದಾಗಿತ್ತು. ಈಗ ಅದೇ ಮಗು ಒಂದು ದಿನ ಆರ್ಯ ಸಮಾಜದ ವಿರುದ್ಧ ಖುರ್‌ಆನ್‌ನ ಖಡ್ಗ ಹಿಡಿದು ತುಂಬಾ ವೀರಾವೇಶದಿಂದ ಹೊರಡುವನು. ಎಲ್ಲೆಡೆ ಅವನ ಹೆಸರು ರಾರಾಜಿಸುವುದು. ಪರಕೀಯರಂತೂ ಪರಕೀಯರು ಸ್ವಯಂ ಆರ್ಯರಿಗೆ ಹೇಳಬೇಕಾಯಿತು. ಆ ಮಹಾನ್ ಮಾರ್ಗದರ್ಶಕನ ನೇತೃತ್ವದಲ್ಲಿಯ ಅಹ್ಮದಿಯಾ ಜಮಾಅತ್ ಆರ್ಯ ಸಮಾಜಕ್ಕಾಗಿ ಒಂದು ಅತ್ಯಂತ ವಿನಾಶಕಾರಿಯ ರೂಪವಾಗಿ ಪರಿಣಮಿಸಿದೆ. ಆ ಸಮಯ ಯಾರಿಗೆ ಹೇಳಲು ಸಾಧ್ಯವಿತ್ತು. ಯಾವ ಮಗುವಿನ ಕುರಿತು ಈ ದಾವೆ ಮಾಡಲಾಗುತ್ತದೆ. ಸ್ವಯಂ ಅವನ ಊರಲ್ಲೆ ಅವನ ಹೆಸರು ತಿಳಿದವರು ಇರುವುದಿಲ್ಲ. ಈಗ ಅ ದಿನಗಳು ದೂರವಿಲ್ಲ. ಅವನು ಕೇವಲ ಒಂದು ಊರು ಅಥವಾ ಜಿಲ್ಲಾ ಅಥವಾ ರಾಜ್ಯದಲ್ಲಷ್ಟೆ ಅಲ್ಲ. ಇಡೀ ಭಾರತ ಉಪಖಂಡದಲ್ಲೇ ಅವನು ಖ್ಯಾತಿ ಪಡುವನು ಮತ್ತು ಅದರ ಭವಿಷ್ಯವಾಣಿ ನುಡಿದವನ ಅನುಯಾಯಿಗಳೇ ಈ ಖ್ಯಾತಿಗೆ ಕಾರಣಕರ್ತರಾಗುವರು. ಇದೊಂದು ಐತಿಹಾಸಿಕ ಸತ್ಯವಾಗಿದೆ. ಅದನ್ನು ಅಲ್ಲಗಳೆಯಲು ಯಾರಿಂದಲು ಸಾಧ್ಯವಿಲ್ಲ. ಅದಾಗ್ಯೂ ಭಾರತದ ಮುಸಲ್ಮಾನರಲ್ಲಿ ಹಝ್ರತ್ ಮಿರ್ಝಾ ಮೊಹ್ಮದ್ ಅಹ್ಮದ್ ಈ ಶುದ್ಧಿ ಆಂದೋಲನ ಮೊದಲಿನಿಂದಲು ಪರಿಚಿತರಾಗಿದ್ದರು. ಆದರೆ ಭಾರತದಲ್ಲಿ ವಾಸಿಸುವ ಹಿಂದೂ ಜನರು ಅವರ ಹೆಸರಿನಿಂದ ಅಪರಿಚಿತರಾಗಿದ್ದರು. ಶುದ್ಧಿ ಆಂದೋಲನದ ಕಾರಣದಿಂದಲೇ ದೇಶದಾದ್ಯಂತ ಖ್ಯಾತಿ ಪಡೆಯಲು ಮೊದಲ ಮೆಟ್ಟಿಲು ಸಾಬೀತಾಯಿತು. ಅದರ ಜೊತೆಯಲ್ಲೇ ಅವರು ಪ್ರಖ್ಯಾತಿಯ ಉತ್ತುಂಗಕ್ಕೆ ತಲುಪಿದರು. ಶತ್ರುಗಳು ಸಹ ಅವರ ಮಹೋನ್ನತ ನೇತೃತ್ವನ್ನು ಕೊಂಡಾಡಿದರು.

ಶುದ್ಧಿ ಆಂದೋಲನ ಇನ್ನೊಂದು ಕಾರಣದಿಂದಲೂ ಅಧ್ಯಯನಕ್ಕೆ ರೋಚಕವಾಗಿದೆ. ಹಝ್ರತ್ ಮಿರ್ಝಾ ಬಶೀರುದ್ದೀನ್ ಮೊಹ್ಮದ್ ಅಹ್ಮದ್ ರವರ ಜನ್ಮಕ್ಕಿಂತ ಮೊದಲೇ ಆರ್ಯ ಸಮಾಜ ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರ ಮಧ್ಯೆ ಒಂದು ನಿರ್ಣಾಯಕ ಕಾಳಗವಾಗಿತ್ತು.

ಆ ಸಂದರ್ಭದಲ್ಲಿ ದುರಾದೃಷ್ಟವಶಾತ್ ಮುಸಲ್ಮಾನ ಉಲಮಾಗಳ ಮಾತು ಸಹ ಅಹ್ಮದಿಯತ್ತಿನ ವಿರುದ್ಧ ಆರ್ಯ ಸಮಾಜದವರಿಗೆ ಬೆಂಬಲ ನೀಡುತ್ತಿದ್ದವು. ಹಝ್ರತ್ ಮಸೀಹ್ ಮೌಊದ್(ಅ) ವಾಗ್ದತ್ತ ಪುತ್ರನ ಭವಿಷ್ಯವಾಣಿ ನುಡಿದಾಗ, ಆರ್ಯರ ಕಡೆಯಿಂದ ಈ ಭವಿಷ್ಯವಾಣಿ ಕುರಿತು ವ್ಯಂಗ್ಯ ಮಾತುಗಳನ್ನು ಆಡುವಾಗಲೆಲ್ಲ ಮುಸಲ್ಮಾನರು ಆರ್ಯರ ಜೊತೆಗೂಡಿ ಅಪಹಾಸ್ಯ ಮಾಡುತ್ತಿದ್ದರು. ಲೇಖರಾಮ ಗರ್ವದ ಮಾತಾಡಿದಾಗಲೆಲ್ಲ ಮುಸಲ್ಮಾನರು ಗಹಿಗಹಿಸಿ ನಗುವ ದೃಶ್ಯ ಕಾಣುತಿತ್ತು. ಇದರ ಸುಳ್ಳಿನ ಕುರಿತು ಅವರು ಪತ್ರಿಕೆಗಳಲ್ಲಿ ಪ್ರಕಟಿಸಿದಾಗಲೆಲ್ಲ ಮುಸಲ್ಮಾನ ಸಂಪಾದಕರು ಸಹ ಅವರಿಗೆ ಪುಷ್ಟಿ ನೀಡುತ್ತಿದ್ದರು. ಇಂತಹ ಯಾವುದೇ ಸಂದರ್ಭವಾಗಲೀ ಆರ್ಯರ ಕಡೆಯಿಂದಲೂ ಮತ್ತು ಮುಸಲ್ಮಾನರ ಕಡೆಯಿಂದಲೂ "ಮಿರ್ಝಾ ಖಾದಿಯಾನಿಯ ಭವಿಷ್ಯವಾಣಿ ಸುಳ್ಳಾಯಿತು" ಎಂಬ ಕೂಗು ಕೇಳಿ ಬರುತ್ತಿತ್ತು ಆದರೆ ಅಲ್ಲಾಹನಿಗೆ ಬೇರೆಯೇ ಸ್ವೀಕೃತಿ ಇತ್ತು. ಒಂದು ಸಂದರ್ಭ ಹೀಗೂ ಬರಲಿಕಿತ್ತು. ಸ್ವಯಂ ಆ ವಾಗ್ದತ್ತ ಪುತ್ರನ ಕೈಗಳಿಂದ ಸೋಲುಂಡು ಆರ್ಯರು ಸಹ ಸಾಕ್ಷಿವಹಿಸಬೇಕಾಯಿತು. ಲೇಖರಾಮ ತನ್ನ ಎಲ್ಲ ಮಾತುಗಳಲ್ಲೂ ಸುಳ್ಳುಗಾರನಾದ ಮತ್ತು ಮಿರ್ಝಾ ಗುಲಾಂ ಅಹ್ಮದ್ ತಮ್ಮ ಎಲ್ಲ ಮಾತುಗಳಲ್ಲಿ ಸತ್ಯವಂತರಾದರು. ಮುಸಲ್ಮಾನ ಮುಖಂಡರು ಸಹ ವಾಗ್ದತ್ತ ಪುತ್ರನ ಪುಷ್ಟಿಯಲ್ಲಿ ನಿಂತು ಘೋಷಿಸಬೇಕಾಯಿತು. ಇಸ್ಲಾಮಿನ ಈ ಸುಪುತ್ರನು ಶತ್ರುಗಳನ್ನು ಎಲ್ಲ ಕ್ಷೇತ್ರಗಳಲ್ಲೂ ಸೋಲಿಸಿದನು ಮತ್ತು ಲೇಖರಾಮನ ಧರ್ಮಕ್ಕೆ ಅಪಜಯ ಹಾಗೂ ಅವಮಾನ ಅದೇ ಪುತ್ರನ ಕೈಗಳಿಂದ ವಿನಾಶದ ಆಸೆಯಿಂದ ನಿರಾಶನಾಗಿ ಇಹಲೋಕ ತ್ಯಜಿಸುವಂತಾಯಿತು. ಈ ವಿಷಯದ ಮೇಲೆ ಲೇಖನ ನೀಡುತ್ತಾ ಜಮಿಂದಾರ್ ಪತ್ರಿಕೆ ತನ್ನ 24 ಜೂನ್ 1923ರ ಸಂಚಿಕೆಯಲ್ಲಿ ಬರೆದರು. "ದರ್ಮ ಪರಿತ್ಯಾಗದ ಕುರಿತು ಪತ್ರಿಕೆಗಳಿಂದ ಬಂದ ವಾರ್ತೆಯ ನಿಮಿತ್ತ ಸ್ಪಷ್ಟವಿದೆ. ಅಹ್ಮದಿಯಾ ಮುಸ್ಲಿಂ ಜಮಾಅತ್ ಇಸ್ಲಾಂ ಧರ್ಮಕ್ಕಾಗಿ ತನ್ನ ಅಮೂಲ್ಯ ಸೇವೆಗಳನ್ನು ಮಾಡುತ್ತಿದೆ. ಅವರು ಕೋರುತ್ತಿರುವ ತ್ಯಾಗ, ಸಮರ್ಪಣೆ, ಸದ್ಭಾವನೆ ಮತ್ತು ಅಲ್ಲಾಹನ ಮೇಲೆ ಭರವಸೆ ಅವು ಭಾರತದ ಪ್ರಸಕ್ತ ಸಮಯದಲ್ಲಿ ಅದ್ವಿತೀಯ ಅಲ್ಲದಿದ್ದರೂ ಅಪರಿಮಿತ ಗೌರವ ಮತ್ತು ಘನತೆಗೆ ಅರ್ಹ ಅವಶ್ಯವಾಗಿದೆ. ನಮ್ಮ ಪೀರ್ ಸಜ್ಜಾದ ನಶೀನರು ಗೊತ್ತು

ಗುರಿಯಿಲ್ಲದೇ ಮಲಗಿಕೊಂಡಿದ್ದಾರೆ. ದೃಢ ನಿಶ್ಚಿತ ಈ ಜಮಾಅತ್ ಮಹತ್ತರ ಸೇವೆ ಸಲ್ಲಿಸಿ ತೋರಿಸಿದೆ. (ಝಮೀನ್‌ದರ್ ಲಾಹೋರ್, 24 ಜೂನ್ 1923. )

ಮತ್ತೆ 29 ಜೂನ್ 1923ರ ಸಂಚಿಕೆಯಲ್ಲಿ ಹೀಗೆ ಶ್ಲಾಘಿಸಿದರು. ಸುಮಾರು ಒಂದು ನೂರು ಮುಬಲ್ಲಿಗರು ಅಮೀರರ ನೇತೃತ್ವದಲ್ಲಿ ವಿವಿದ ತಂಡವಾಗಿ ವಿವಿಧ ಹಳ್ಳಿಗಳಲ್ಲಿ ಬೇರುಬಿಟ್ಟಿದ್ದಾರೆ. ಅವರು ಅಮೂಲ್ಯ ಸೇವೆಯನ್ನು ಸಲ್ಲಿಸಿದ್ದಾರೆ. ಎಲ್ಲ ಮುಬಲ್ಲಿಗ್ಹೀನರು ಸಂಬಳವಿಲ್ಲದೆ ಅಥವ ಪ್ರಯಾಣದ ಖರ್ಚಿಲ್ಲದೆ ಸೇವೆ ಸಲ್ಲಿಸುತ್ತಿದ್ದಾರೆ. ನಾವು ಅಹ್ಮದಿಯರಲ್ಲ. ಆದರೆ ಅವರ ಉನ್ನತ ದರ್ಜೆಯ ಸೇವೆಯನ್ನು ಕೊಂಡಾಡದೆ ಇರಲಾರೆವು. ಯಾವ ಅಮೂಲ್ಯ ತ್ಯಾಗದ ಸಾಕ್ಷ್ಯ ಅಹ್ಮದಿಯಾ ಜಮಾಅತ್ ನೀಡಿದೆ. ಅದರ ಉದಾಹರಣೆ ಗತಕಾಲದ ಹೊರತಾಗಿ ದೊರೆಯುವುದು ವಿರಳ. ಅವರ ಯಾವೊಬ್ಬ ಮುಬಲ್ಲಿಗ್ ಆಗಲಿ ಅಥವಾ ಅಮೀರರಾಗಲಿ ಪ್ರಯಾಣ ಊಟಗಳ ಖರ್ಚು ವೆಚ್ಚ ಕೇಳದೆ ಕಾರ್ಯಕ್ಷೇತ್ರದಲ್ಲಿ ಸೇವಾನಿರತರಾಗಿದ್ದಾರೆ. ಅತ್ಯಂತ ಸೆಕೆ ಮತ್ತು ಗಾಬರಿ ಹುಟ್ಟುವ ವಾತಾವರಣದಲ್ಲೂ ತನ್ನ ಅಮೀರರ ಅನುಸರಣೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. (ಝಮಿಂದಾರ್ ಲಾಹೋರ್, 29 ಜೂನ್ 1923)

ಮಶ್ರಿಖ್ ಗೋರಖಪುರ ಪತ್ರಿಕೆ ಬರೆಯುತ್ತದೆ. "ಅಹ್ಮದಿಯಾ ಜಮಾಅತ್ ಯಾವ ವಿಶೇಷತೆಯೊಂದಿಗೆ ಆರ್ಯ ಸಮಾಜದ ಭಾವನೆಗಳ ಮೇಲೆ ಪೆಟ್ಟು ನೀಡುತ್ತಿದೆ ಮತ್ತು ಅಹ್ಮದಿಯಾ ಜಮಾಅತ್ ಯಾವ ತ್ಯಾಗ ಮತ್ತು ನೋವಿನಿಂದ ಇಸ್ಲಾಂ ಧರ್ಮದ ಪ್ರಚಾರಕ್ಕಾಗಿ ಪ್ರಯತ್ನಪಡುತ್ತಿದೆ. ಅದು ಈ ಕಾಲದಲ್ಲಿ ಇತರ ಜಮಾಅತುಗಳಿಂದ ಕಂಡುಬರುತ್ತಿಲ್ಲ."
(ಅಖ್ಬಾರ್ ಮಶ್ರಿಖ್ ಗೋರಖಪುರ, 15 ಮಾರ್ಚ್ 1923).

ಕೆಲವೇ ದಿನಗಳ ನಂತರ ಅದೇ ಪತ್ರಿಕೆ ಹೀಗೆ ಕೊಂಡಾಡಿತು. "ಅಹ್ಮದಿಯಾ ಜಮಾಅತಿನ ಇಮಾಮರ ಸತತ ಭಾಷಣಗಳ ಮತ್ತು ಬರಹಗಳ ಪ್ರಭಾವ ಅವರ ಅನುಯಾಯಿಗಳ ಮೇಲೆ ಬಹಳಷ್ಟು ಬೀರಿದೆ. ಈ ಜಿಹಾದಿನಲ್ಲಿ ಎಲ್ಲರಿಗಿಂತ ಮುಂದೆ ಇದೇ ಪಂಥ ಕಂಡುಬರುತ್ತಿದೆ. ಅಹ್ಮದಿಯ ಪಂಥದವರಿಗೆ ಈ ನವ ಮುಸ್ಲಿಮರ ಪುಷ್ಠಿಯ ಅವಶ್ಯಕತೆ ಇರಲಿಲ್ಲ. ಏಕೆಂದರೆ ಆ ಪಂಥದಿಂದ ಅವರಿಗೆ ಯಾವ ಸಂಬಂಧವು ಇರಲಿಲ್ಲ. ಆದರೆ ಅದಕ್ಕೆ ಇಸ್ಲಾಮಿನ ಹೆಸರು ಅಂಟಿಕೊಂಡಿತ್ತು. ಅದೇ ಕಾರಣದಿಂದ ಅಬಿಮಾನದಿಂದ ಇಮಾಮ್ ಜಮಾಅತ್ ಅಹ್ಮದಿಯಾ ಅವರಿಗೆ ಉತ್ಸಾಹ ಉಂಟಾಯಿತು. ಅವರ ಕೆಲ ಭಾಷಣಗಳನ್ನು ಕೇಳಿ ಹೃದಯವು ಕಂಪಿಸತೊಡಗುತ್ತದೆ. ಅಲ್ಲಾಹನ ಹೆಸರಿನಲ್ಲಿ ಜೀವ ಬಲಿದಾನ ಮಾಡುವವರು ಇನ್ನೂ ಇದ್ದಾರೆ ಅನಿಸುತ್ತದೆ. ನಮ್ಮ ಉಲಮಾಗಳಿಗೆ ಅಹ್ಮದಿಯಾ ಜಮಾಅತ್ ಅವರಿಗೆ ತಮ್ಮ ವಿಶ್ವಾಸಗಳನ್ನು ಬೋಧಿಸುತ್ತದೆ ಎಂಬ ಅನುಮಾನ ಏನಾದರೂ ಇದ್ದರೆ ಅವರು ತನ್ನ ಸಂಘಟಿತ ಜಮಾಅತುಗಳಲ್ಲಿ ಇಂತಹ ನಿಷ್ಠೆ ಉಂಟು ಮಾಡಿ ಮುಂದೆ ಬರಲಿ. ಇಸ್ಲಾಂ ಧರ್ಮವನ್ನು ಉಳಿಸುವ ಪ್ರಾಮಾಣಿಕ ಉತ್ಸಾಹ ಅಹ್ಮದಿಯಾ ಜಮಾಅತಿನಲ್ಲಿ ಹೆಚ್ಚಾಗಿ ಕಾಣುತ್ತೇವೆ.

ಪ್ರಮಾಣಿಕತೆ, ಬದ್ಧತೆ, ತಮ್ಮ ಇಮಾಮರಿಗೆ ವಿಧೇಯತೆ ತೋರುವುದಲ್ಲಿ ಈ ಜಮಾಅತ್ ಏಕೈಕವಾಗಿದೆ. ಪಂಜಾಬ್‌ನ ಮಿರ್ಝಾ ಸಾಹಿಬ್ ಮತ್ತು ಅವರ ಜಮಾಅತಿನವರ ಶೌರ್ಯ ಹಾಗೂ ತ್ಯಾಗ ಕೊಂಡಾಡುವ ಮೇರೆಗೆ ನಾವು ಮುಸಲ್ಮಾನರಿಗೆ ಇಂತಹ ಅಬಿಮಾನ ತೋರಿಸಲು ಆಹ್ವಾನಿಸುತ್ತೇವೆ. ಮುಸಲ್ಮಾನರ ವಿಶಿಷ್ಠ ಗುರುಗಳಾಗಿದ್ದ ಪ್ರಾಮಾಣಿಕತೆ ಮತ್ತು ವಿಶ್ವಾಸ ಇಂದು ಅವರಲ್ಲಿ ಪ್ರಮುಖವಾಗಿದೆ. ಅಹ್ಮದಿಯಾ ಜಮಾಅತಿನ ಉದಾರತೆ ಮತ್ತು ನಿಸ್ವಾರ್ಥತೆ ಜೊತೆ ಜೊತೆಗೆ ಅವರ ಸಮಗ್ರ ಮತ್ತು ನಿಖರತೆ ಎಲ್ಲರಿಗಿಂತ ಹೆಚ್ಚು ಶ್ಲಾಘನಿಯವಾಗಿದೆ. ಆದಾಯದ ಕೊರತೆಯಲ್ಲೂ ಈ ಮಹತ್ತರ ಸಾಧನೆ ಮಾಡಲು ಅದೇ ಕಾರಣವಾಗಿದೆ. (ಅಖ್ಬಾರ್ ಮಶ್ರಿಖ್ ಗೋರಖಪುರ, 29 ಮಾರ್ಚ್ 1923).

ಅದೇ ರೀತಿ ಏಕೀಲ್ ಪತ್ರಿಕೆ ಬರೆಯುತ್ತದೆ. "ಈ ವಿಷಯದಲ್ಲಿ ಅಹ್ಮದಿ ಜಮಾಅತ್‌ನ ವರ್ತನೆ ಕೀಟಲೆಯ ನಡುವೆಯೂ ಇಸ್ಲಾಂ ಧರ್ಮವನ್ನು ಕುಗ್ಗಿಸುವಂತೆ ರಕ್ಷಿಸುವ ಚಿಂತನೆಯೊಂದಿಗೆ ಸ್ವತಃ ಮುಸಲ್ಮಾನರ ಮುಖಂಡರೇ ಈ ಅಂತರ್‌ಯುದ್ಧಗಳ ಕಡೆಗೆ ಗಮನ ಹರಿಸಿ ಸರ್ವ ರೀತಿಯಲ್ಲೂ ಕಾರ್ಯೋನ್ಮುಕರಾಗಿರುವುದು ಶ್ಲಾಘನೀಯ. ನಾವು ಖಡಾಖಂಡಿತ ರೀತಿಯಲ್ಲಿ ಹೇಳಬಹುದು ಅಹ್ಮದಿಯಾ ಜಮಾಅತ್ ಅತ್ಯುತ್ತಮ ಸೇವೆ ಸಲ್ಲಿಸುತ್ತಿದೆ."

(ಅಖ್ಬಾರ್ ಏಕೀಲ್ ಅಮೃತ್ಸರ 3 ಮೇ 1923)

ಮೌಲ್ವಿ ಮುಮ್ತಾಜ್ ಅಲಿ ಸಾಹಿಬ್ ಸಂಪಾದಕರು ಅಕ್ಬಾರ್ ತಹಝಿಬುಮಿನ್ನಿಸ್‌ವಾನ್ ಬರೆಯುತ್ತಾರೆ. ನನ್ನ ಅರಿವಿಗೆ ಬಂದಿದೆ. ಧರ್ಮ ಪರಿತ್ಯಾಗದ ಮೈದಾನದಲ್ಲಿ ಇಸ್ಲಾಂ ಧರ್ಮದ ಪ್ರಚಾರಕ್ಕಾಗಿ ಎಲ್ಲ ಪಂಥಗಳು ತಮ್ಮ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿದೆ ಎಂದು. ಅದರಲ್ಲಿ ಯಾವ ಒಂದು ಮುಬಲ್ಲಿಗರ ಗುಂಪು ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದೆ ಎಂಬುದನ್ನು ನಾನು ಆಯ್ಕೆ ಮಾಡಿಕೊಳ್ಳುವುದು ಉಚಿತ ಎಂದು ಭಾವಿಸುತ್ತೇನೆ. ಸಂಶೋಧನೆಯಿಂದ ತಿಳಿಯಿತು. ಪ್ರಚಾರದ ಕಾರ್ಯದಲ್ಲಿ ಎಲ್ಲರಿಗಿಂತ ಹೆಚ್ಚು ಸಫಲತೆ ಅಹ್ಮದಿ ಮುಬಲ್ಲಿಗೀನರಿಗೆ ದೊರೆತಿದೆ. ಆದುದರಿಂದ ನಾನು ಬಯಸಿದೆ. ನಮ್ಮ ತಹಝೀಬಿ ಸಹೋದರಿಯರಿಗೆ ಆಕ್ಷೇಪವಿಲ್ಲದಿದ್ದರೆ ಅವರಲ್ಲಿ ಒಬ್ಬ ಮುಬಲ್ಲಿಗರದಾದರೂ ಖರ್ಚ ಹೋನೆ ಹೊತ್ತುಕೊಳ್ಳಬೇಕು. ಅಷ್ಟರಲ್ಲೆ ನಮ್ಮ ಉಲಮಾಅಗಳ ಈ ಘೋಷಣೆ ಹೊರ ಬಂತು. ಅಹ್ಮದಿ ಪಂಥದ ಎಲ್ಲ ಸದಸ್ಯರು ಕಾಫಿರ್‌ಗಳು. ಅವರು ಕುಫ್ರ್, ಮಲ್ಕಾನ ರಜಪೂತರಿಗಿಂತಲೂ ಘೋರ ರೀತಿಯದ್ದಾಗಿದೆ. (ರಿಸಾಲ ತಹಝೀಬುನ್ನಿಸ್ವಾನ್ ಲಾಹೋರ್, 2 ಮೇ 1925)

ಇದಂತೂ ಮುಸ್ಲಿಮ್ ಪತ್ರಿಕೆಯ ಸಾಕ್ಷಿಯಾಗಿತ್ತು. ಹಿಂದೂ ಪತ್ರಿಕೆಗಳು ಸಮರ್ಥನೆ ನೀಡಿ ಬರೆದ ವಿಷಯ ಶ್ಲಾಘನೀಯವಾಗಿದೆ. ಇಸ್ಲಾಮಿನ ರಕ್ಷಣೆಗಾಗಿ ಯಾರು ಎಲ್ಲರಿಗಿಂತ ಹೆಚ್ಚು ಅವರಿಗೆ ನೋವು ಕೊಡುತ್ತಿದ್ದರೋ ಅದು ಅವರೇ ಚೆನ್ನಾಗಿ ಬಲ್ಲವರಾಗಿದ್ದರು. ಯಾರ ಅಪಾದನೆ ಅವರ ಎದೆಗಳನ್ನು ಸೀಳುತ್ತಿದ್ದವೋ ಇದು ಸಹ ಅವರೇ ಉತ್ತಮ ರೀತಿಯಲ್ಲಿ ವಿವರಿಸಬಹುದಿತ್ತು.

ದೇವ ಸಮಾಜಿ ಅಖ್ಬಾರ್ ಜೀವನ್ ಇತ್ ಲಾಹೋರ್ ಬರೆದನು. 'ಮಲ್ಕಾನ್ ರಾಜಪೂತರ ಶುದ್ಧಿ ಆಂದೋಲನ ತಡೆಯಲು ಮತ್ತು ಮಲ್ಕಾಗಳಲ್ಲಿ ಇಸ್ಲಾಂ ಧರ್ಮದ ಪ್ರಚಾರ ಮಾಡಲು ಅಹ್ಮದಿಯರು ವಿಶೇಷ ರೀತಿಯ ಉತ್ಸಾಹ ತೋರುತ್ತಿದ್ದಾರೆ. ಕೆಲ ವಾರಗಳಾದರೂ ಖಾದಿಯಾನಿ ಪಂಥದ ಮಿರ್ಝಾ ಮೊಹ್ಮದ್ ಅಹ್ಮದ್ ಸಾಹಿಬ್ ಜನರನ್ನು ಮೂರು ತಿಂಗಳವರೆಗೆ ಸಂಭಾವನೆ ಇಲ್ಲದೇ ಉಚಿತವಾಗಿ ಕಾರ್ಯ ನಿರ್ವಹಿಸಲು ಸಿದ್ಧಗೊಳಿಸಿದ್ದರು. ಅವರು ತಮ್ಮ ಮತ್ತು ಕುಟುಂಬದ ಒಟ್ಟು ಖರ್ಚು ತಾವೇ ನೋಡಿಕೊಳ್ಳಬೇಕು. ಯಾವ ಮುಖಂಡನ ಅಡಿಯಲ್ಲಿ ಕೆಲಸ ಮಾಡಲು ಅವರಿಗೆ ಹೇಳಲಾಗುತ್ತದೆ. ಅವರು ಆ ಕಾರ್ಯ ನಿರ್ವಹಿಸಲು ಸಂತೋಷದಿಂದ ಸಿದ್ಧರಾಗಿರಬೇಕು. ವರದಿಯ ಪ್ರಕಾರ ಕೆಲವಾರಗಳಲ್ಲಿಯೇ ನಾಲ್ಕು ನೂರಿಗಿಂತ ಹೆಚ್ಚು ಮನವಿ ಪತ್ರಗಳು ಹಾಕಿದ ಶರತ್ತುಗಳ ಮೇರೆಗೆ ಕೆಲಸ ನಿರ್ವಹಿಸಲು ಕೋರಿ ಅರ್ಜಿ ಬಂದಿದ್ದವು. ಮೂರು ಪಕ್ಷದಲ್ಲಿ 90 ಅಹ್ಮದಿಯರು ಆಗ್ರಾ ಕ್ಷೇತ್ರದಲ್ಲಿ ತಲುಪಿಯಾಗಿದೆ. ಮತ್ತು ಸಕ್ರಿ ರೀತಿಯಲ್ಲಿ ಮಲ್ಕಾನದಲ್ಲಿ ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾರೆ. ಈ ಹೊಸ ಕೇತ್ರದ ಪರಿಸ್ಥಿತಿಗಳನ್ನು ಅಧ್ಯಯನ ಮಾಡಲು ಅವರ ಪೈಕಿ ಡಿಗ್ರಿ ಇಟ್ಟುಕೊಂಡು ಉರಿಬಿಸಿನಲ್ಲಿ ಪಾದಚಾರಿಯಾಗಿ ಕ್ಷೇತ್ರದಲ್ಲೆಲ್ಲ ತಿರುಗುತ್ತಿದ್ದರು. ತಮ್ಮ ಧರ್ಮ ಪ್ರಚಾರಕ್ಕಾಗಿ ಅವರು ತೋರುತ್ತಿರುವ ಈ ಉತ್ಸಾಹ ಮತ್ತು ತ್ಯಾಗ ಶ್ಲಾಗನೀಯವಾಗಿದೆ. (ಅಖ್ಬಾರ್ ಜೀವಂತ್ ನಿತ್ ಲಾಹೋರ್', 24 ಏಪ್ರಿಲ್ 1923).

"ಆರ್ಯ ಪತ್ರಿಕೆ. ಬರೆಲಿ ಒಂದನೇ ಏಪ್ರಿಲ್ 1923 ರ ಸಂಚಿಕೆಯಲಿ ಬರೆಯಿತು. ಈ ಸಮಯ ಮಲ್ಕಾನ ರಜಪೂತರಿಗೆ, ತಮ್ಮ ಹಳೆಯ ರಜಪೂತರಲ್ಲಿ ಸೇರುವುದರಿಂದ ತಡೆಗಟ್ಟಲು (ಅಂದರೆ ಧರ್ಮ ಪರಿತ್ಯಾಗದಿಂದ ರಕ್ಷಿಸಲು) ಎಷ್ಟೆಲ್ಲ ಇಸ್ಲಾಮಿ ಅಂಜುಮನ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಅದರಲ್ಲಿ ಅಹ್ಮದಿಯಾ ಜಮಾಅತ್ ಖಾದಿಯಾನ್ ಯಾವ ಸಕ್ರಿಯತೆ ಮತ್ತು ಪ್ರಯತ್ನಗಳನ್ನು ಮಾಡುತ್ತಿದೆ. ಅದು ನಿಜವಾಗಿಯೂ ಶ್ಲಾಘನೀಯವಾಗಿದೆ.

ಹಿಂದೂ ಧರ್ಮ ಮತ್ತು ಇಸ್ಲಾಹಿ ತಹ್ರೀಕೇಂಂ ಲೇಖಕರು ಆರ್ಯ ಸಮಾಜದವರು ಶುದ್ಧಿಗೊಳಿಸುವ ಕಾರ್ಯ ಖಾಲಿ ಮಾಡಿದರು. ಹೀಗೆ ಮಾಡುವ ಕಾರಣ ಆರ್ಯ ಸಮಾಜ ಮತ್ತು ಮುಸಲ್ಮಾನರ ಒಂದು ತಬ್ಲೀಗ್ ತಂಡ ಅಂದರೆ ಖಾದಿಯಾನಿ ಪಂಥದವರೊಂದಿಗೆ ಘರ್ಷಣೆ ಉಂಟಾಯಿತು ಆರ್ಯ ಸಮಾಜದವರು ಹೇಳುತ್ತಿದ್ದರು. ವೇದಗಳು ದೇವವಾಣಿಗಳಾಗಿವೆ ಮತ್ತು ಪ್ರಪ್ರಥಮ ದೈವಿಕ ಗ್ರಂಥವಾಗಿದೆ. ಮತ್ತು ಹಝರತ್ ಮುಹಮ್ಮದ್(ಸ) ಖಾತಮುನ್ನಬಿ ಯೀನ್ (ಅಂತ್ಯ ಪ್ರವಾದಿ) ಆಗಿರುವರು. ಘರ್ಷಣೆಯ ಪರಿಣಾಮವೇನಾಯಿತೆಂದರೆ ಯಾವ ಕ್ರೈಸ್ತನಾಗಲಿ, ಮುಸ್ಲಿಮಾನಾಗಲಿ ಆರ್ಯ ಸಮಾಜ ಸೇರುತ್ತಿರಲಿಲ್ಲ. (ಹಿಂದೂ ಧರ್ಮ ಮತ್ತು ಇಸ್ಲಾಹಿ ತಹ್ರೀಕ್, ಪುಟ 23,24)

ಈ ಶುದ್ಧಿ ಆಂದೋಲನದ ಪ್ರಭಾವ ಎಷ್ಟೊಂದು ಆಳವಾದುದು ಮತ್ತು ದೂರದ ಪರಿಣಾಮ ಬೀರುವುದಾಗಿತ್ತೆಂದರೆ ಮಿರ್ಝಾ ಬಶೀರುದ್ದೀನ್ ಮಹ್ಮುದ್ ಅಹ್ಮದ್‌ರವರ ಮಹೋನ್ನತ ನೇತೃತ್ವದ ಭಯ ಆರ್ಯ ಸಮಾಜದ ಮುಖಂಡರ ಹೃದಯದಲ್ಲಿ ಆವರಿಸಿ ಬಿಟ್ಟಿತ್ತು. ಶುದ್ಧಿ ಆಂದೋಲನ ನಡೆಯಿತು. ಮತ್ತು ಅಗಲಿ ಹೋಯಿತು. ಆದರೆ ವರ್ಷನುಗಟ್ಟಲೆ ಆರ್ಯ ಮುಖಂಡರ ಹೃದಯಗಳಲ್ಲಿ ಅದರ ಕಹಿ ಮತ್ತು ಭಯಾನಕ ಅನುಭವ ಪದೇ ಪದೇ ಕಾಡುತ್ತಿತ್ತು. ಅದು ಶುದ್ಧಿ ಆಂದೋಲನದ ನಡುವೆ ಅಹ್ಮದಿಯ ಜಮಾಅತಿನೊಂದಿಗೆ ಸೆಣಸಾಡಿದ ಪರಿಣಾಮವಾಗಿತ್ತು. ಹಾಗೆ ನಾಲ್ಕು ವರ್ಷಗಳ ನಂತರ ಅಖ್ಬಾರ್ ತೇಜ್ ದೆಹಲಿ ಹೀಗೆ ಬರೆಯಿತು.

ನನ್ನ ಅನಿಸಿಕೆಯಲ್ಲಿ ಪ್ರಪಂಚದ ಎಲ್ಲ ಮುಸ್ಲಿಮರಲ್ಲಿ ಅತ್ಯಂತ ಘನ, ದಕ್ಷ ಮತ್ತು ಇವರಂತರ ಕೆಲಸ ಮಾಡುವ ಜಮಾಅತ್, ಜಮಾಅತ್ ಅಹ್ಮದಿಯಾ ಆಗಿದೆ. ಮತ್ತು ನಾನು ನಿಜವಾಗಿಯೂ ಹೇಳುತ್ತೇನೆ ನಾವು ಅವರಿಂದ ಅತ್ಯಂತ ನಿರ್ಲಕ್ಷ್ಯಕ್ಕೆ ಒಲಗಾಗಿದ್ದೇವೆ. ಇಲ್ಲಿಯವರೆಗೂ ನಾವು ಈ ಭಯಾನಕ ಪಕ್ಷವನ್ನು

ಅರ್ಥ ಮಾಡಿಕೊಳ್ಳುವುದರಲ್ಲಿ ವಿಫಲಗೊಂಡಿದ್ದೇವೆ. (ಅಖ್ಬಾರ್ ತೇಜ್ ದೆಹಲಿ, 25 ಜುಲೈ 1927)

ಮತ್ತೆ ಅದೇ ಪತ್ರಿಕೆ ಬರೆಯುತ್ತಿದೆ.

"ಇಂದಿನಿಂದ ಮೂವತ್ತು ನಲವತ್ತು ವರ್ಷಗಳ ಹಿಂದೆ ಹೋಗಿ ಅವಲೋಕಿಸಿ, ಈ ಜಮಾಅತ್ ತನ್ನ ಪ್ರಾಥಮಿಕ ಹಂತದಲ್ಲಿದ್ದಾಗ ಆ ಕಾಲದ ಹಿಂದೂಗಳಾಗಲಿ ಮುಸಲ್ಮಾನರಾಗಲಿ ಇಬ್ಬರೂ ಈ ಜಮಾಅತನ್ನು ಅತ್ಯಂತ ತುಚ್ಛವಾಗಿ ಮತ್ತು ಅರ್ಥವಿಲ್ಲದ್ದು ಎಂದು ಭಾವಿಸುತ್ತಿದ್ದರು. ಹಿಂದೂ ಒಂದು ಕಡೆ ಇರಲಿ ಸ್ವಯಂ ಮುಸ್ಲಮಾನರು ಅವರ ಅಪಹಾಸ್ಯ ಮಾಡುತ್ತಿದ್ದರು. ಅವರ ಮೇಲೆ ಲಾಅನತ್ (ಶಾಪ) ಹಾಕುತ್ತಿದರು. ಮತ್ತು ಶಾಪಗಳ ಬಾಣಗಳು ಸುರಿಸಿದವು. ಈ ಜಮಾಅತ್ ಪ್ರಾಥಮಿಕ ಹಂತದಲ್ಲಿ ಯಾವ ಕಾರ್ಯಗಳನ್ನು ಮಾಡಲು ಪಣತೊಟ್ಟಿದ್ದವು. ಅದರಲ್ಲಿ ಹೆಚ್ಚಿನವು ಅಪೂರ್ಣಗೊಂಡಿವೆ. ಆ ಕಾಲದಲ್ಲಿ ಅದು ಅಹ್ಮದಿಯರ ಪ್ರಾಥಮಿಕ ಘಟ್ಟವಾಗಿತ್ತು. ಅವರಿಗೆ ಹುಚ್ಚರೆಂದು ಭಾವಿಸುತ್ತಿದ್ದರು. ಅವರ ಮೂರ್ಖತನವನ್ನು ನೋಡಿ ಅಪಹಾಸ್ಯ ಮಾಡುತ್ತಿದ್ದರು. ಆದರೆ ಘಟನೆಗಳು ಸಾಬೀತುಗೊಳಿಸಿವೆ. ಅವರನ್ನು ಅಪಹಾಸ್ಯ ಮಾಡುವವರು ಸ್ವಯಂ ಅಪಹಾಸ್ಯಕ್ಕೊಳಗಾದರು, ಅವರು ಮುರ್ಖರಾಗಿ, ಬುದ್ಧಿಹೀನರಾಗಿದ್ದಾರೆ. ಈ ಕುರಿತು ಕ್ರೈಸ್ತ ಮಿಷನರಿಗಳು ಅತ್ಯಂತ ಬುದ್ಧಿವಂತಿಕೆ ಪ್ರದರ್ಶಿಸಿದರು. ಅಹ್ಮದಿಯರು ಇನ್ನು ಯುರೋಪ್ ಮತ್ತು ಅಮೇರಿಕಾದಲ್ಲಿ ಹೆಜ್ಜೆ ಸಹ ಇಟ್ಟಿರಲಿಲ್ಲ. ಎಲ್ಲ ಫಾದರಿಗಳು ಅವರ ವಿರೋಧಕ್ಕೆ ಸಿದ್ಧಗೊಂಡರು. (ಅಖ್ಬಾರ್ ತೇಜ್ ದೆಹಲಿ, 25 ಜುಲೈ 1927).

ಉಪವಿಷಯವಾಗಿ ಈ ವಿವರ ಸಹ ನೀಡುವುದು ಯೋಗ್ಯವಾಗಿದೆ. ಇಂತಹ ಕೈಸ್ತರ ವಿರುದ್ಧ ಶೌರ್‍ಯದಿಂದ ಮತ್ತು ಸಾಹಸದಿಂದ ಸತ್ಯವಿಶ್ವಾಸಿಗಳಾಗಿ ಅವರ ಮೇಲೆ ದಾಳಿ ಮಾಡುತ್ತಿದೆ ಮತ್ತು ಪಾಧರಿಗಳು ಅದನ್ನು ವಿರೋಧಿಸಲು ಏಕತ್ರವಾಗುತ್ತಿದ್ದಾರೆ. ಅಂತಹದೊಂದು ಏಕೈಕ ಜಮಾಅತಿನ ಮೇಲೆ ಈ ಆರೋಪ ಹೊರಿಸಲಾಗುತ್ತದೆ. ಅದು ಕ್ರೈಸ್ತ ಸರಕಾರಗಳ ಕೈಗೊಂಬೆಯಾಗಿದೆ ಎಂದು. ಸತ್ಯ ಮರೆಮಾಚಲು ಒಂದು ಮಿತಿಯಿರುತ್ತದೆ. ಆದರೆ ಕೆಲವರ ದೃಷ್ಟಿಯಲ್ಲಿ ಅದಕ್ಕೆ ಮಿತಿಯೇ ಇಲ್ಲ.

ಶುದ್ಧಿ ಆಂದೋಲನ ಆರು ವರ್ಷಳ ನಂತರ ಅಹ್ಮದಿಯ ಜಮಾಅತಿನ ಪ್ರಚಾರ ಪ್ರಯತ್ನಗಳನ್ನು ಹಿಂದೂ ಧರ್ಮದ ಒಂದು ದೊಡ್ಡ ಅಪಾಯ ಎಂದು ಭಾವಿಸುತ್ತಾ ಮಹಾಶ ಕೃಷ್ಣ, ಹೀಗೆ ಅಪಾಯದ ಗಂಟೆ ಬಾರಿಸಿದರು.

ಸಂಕಟದ ವಿಷಯವೇನೆಂದರೆ ಹಿಂದೂಗಳಿಗೆ ತಮ್ಮದೇ ದೇಶದ ಒಂದು ಜಮಾಅತಿನಿಂದ ಅಪಾಯವಿದೆ. ಆ ಅಪಾಯ ಎಷ್ಟು ದೊಡ್ಡ ರೀತಿಯದ್ದಾಗಿದೆ. ಎಂದರೆ ಅದರ ಪರಿಣಾಮವಾಗಿ ಆರ್ಯ ಜಾತಿ ಲೋಕದಿಂದ ಹೆಸರಿಲ್ಲದ ರೀತಿ ಅಳಿಸಿ ಹೋಗಬಹುದು. ಆ ಅಪಾಯವು ಸಂಘಟನೆ ಮತ್ತು ಪ್ರಚಾರದ್ದು, ಮುಸಲ್ಮಾನರ ವತಿಯಿಂದ ಈ ಕೆಲಸ ಎಷ್ಟು ತ್ವರಿತವಾಗಿ ನಡೆದಿದೆ ಎಂದರೆ ಹಿಂದೂಗಳ ಕಾಲು ಜಾರುತ್ತಿದೆ. ಅವರ ಸಂಖ್ಯೆ ದಿನೇ ದಿನೇ ಕಡಿಮೆ ಆಗತೊಡಗಿದೆ. ಇದನ್ನು ತಡೆಗಟ್ಟಲಿಲ್ಲವಾದರೆ ಒಂದು ಸಮಯ ಬರುವುದು ಆರ್ಯ ಧರ್ಮದ ಹೆಸರು ಸಹ ಹೇಳುವವರು ಸಿಗಲಿಕ್ಕಿಲ್ಲ."

(ಪ್ರತಾಪ್ ಲಾಹೋರ್ 21 ಅಕ್ಟೋಬರ್ 1929)

ಯೋಚಿಸಿರಿ! ಕೆಲವೇ ವರ್ಷಗಳ ಮೊದಲ ಆರ್ಯ ಸಮಾಜದ ಹುಂಕಾರ ಹೇಗಿತ್ತು. ಮತ್ತು ಯಾವ ರೀತಿಯ ಘನತೆಯಿತ್ತು. ಮುಸಲ್ಮಾನರಿಗೆ ಒಬ್ಬಂಟಿ ಮತ್ತು ಅಸಹಾಯಕರು ಎಂದು ಭಾವಿಸಿ ತಮ್ಮ ಪೂರ್ಣ ಶಕ್ತಿಯೊಂದಿಗೆ ಅವರ ಮೇಲೆ ಆಕ್ರಮಣ ಸಾರಿದ್ದವು ಮತ್ತು ತಮ್ಮ ಶಕ್ತಿಯ ಮದದಲ್ಲಿ ಈ ಘೋಷಣೆ ಮಾಡುತ್ತಿದ್ದರು.

ಶುದ್ಧಿಯ ಕೆಲಸ ನಿಲ್ಲಬಾರದು.
ಹಿಂದೂಗಳೇ! ನಿಮ್ಮಲ್ಲಿ ವಿಶ್ವಾಸದ ಅಭಿಮಾನವಿದ್ದರೆ
ಭಾಗ್ಯದಿಂದ ಸಮುದಾಯಗಳಿಗೆ ಇಂತಹ ಸಂದರ್ಭ ದೊರೆಯುತ್ತದೆ.
ಲೋಕದಲ್ಲಿ ಯಾವ ಮುಸಲ್ಮಾನನು ಉಳಿಯದಂತೆ ನೋಡಿಕೊಳ್ಳಿ.

ಆದರೆ ಅಹ್ಮದಿಯಾ ಜಮಾಅತ್ ಈ ಮೈದಾನದಲ್ಲಿ ಕಾಲು ಇರಿಸಿದಂತೆಯೇ ಆರ್ಯ ಸಮಾಜದವರು ಅದನ್ನು ತಮ್ಮ ಅಸ್ತಿತ್ವಕ್ಕೆ ಅಪಾಯ ಎಂದು ಭಾವಿಸಿದರು. ಅಪಾಯವು ಸಾಧಾರಣದ್ದಲ್ಲ. ಬದಲು ಎಷ್ಟು ಅಸಾಧಾರಣವಾಗಿದೆ ಎಂದರೆ ವಿವೇಕವುಳ್ಳವರು ಹೇಳತೊಡಗಿದರು. ಅದರ ಪರಿಣಾಮವಾಗಿ ಆರ್ಯ ಧರ್ಮ ಲೋಕದಿಂದಲೇ ಅಳಿಸಿ ಹೋಗಬಹುದು.

ಎಷ್ಟು ಆಶ್ಚರ್ಯಕರ ವಿಷಯವಾಗಿದೆ, ಮಸೀಹರ ಮಗುವನ್ನು ನಿರ್ನಾಮವಾಡುವ ಸುದ್ದಿ ಲೇಖರಾಮನು ಕೊಟ್ಟಿದ್ದನು. ಆದರೆ ಅದೇ ಮಗುವಿನಿಂದ ಅವರ ಸಮುದಾಯ ಸ್ವತಃ ನಿರ್ನಾಮವಾಗುವ ಭೀತಿ ವ್ಯಕ್ತಪಡಿಸುತ್ತದೆ.

ಈ ಸಾಕ್ಷ್ಯ ವಿವೇಕವುಳ್ಳವರಿಗೆ ಪಾಠವಾಗುವುದಿಲ್ಲವೇ? ಆರ್ಯ ಸಮಾಜದ ಈ ಸೋಲು ಜನರಿಗೆ ದೃಷ್ಟಾಂತ ಆಗುವುದಿಲ್ಲವೇ?

(ಸವಾನೆಹ್ ಫಝ್ಲೆ ಉಮರ್, ಸಂಪುಟ-2, ಪುಟ-311-334, ಮುದ್ರಣ 2006 ಖಾದಿಯಾನ್)

...*...*...*...

*(ಪುಟ ಸಂಖ್ಯೆ 09ರ ಉಳಿದ ಭಾಗ)*

ನಾನು ಜಮಾಅತ್ತಿನ ಸ್ನೇಹಿತರ ಗಮನವನ್ನು ಸೆಳೆಯುವ ಮೂರನೇ ಕರ್ತವ್ಯವೆಂದರೆ ವಸಿಯ್ಯತ್‌ನ ವಿಷಯವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ವಸಿಯ್ಯತ್ ಈಮಾನ್ ಅನ್ನು ಪರೀಕ್ಷಿಸುವ ಸಾಧನವಾಗಿದೆ ಎಂದು ಬರೆದಿದ್ದಾರೆ. ಮತ್ತು ಅದರ ಮೂಲಕ ಆತನು (ಅಲ್ಲಾಹನು) ಅವರಲ್ಲಿ ಯಾರು ನಿಜವಾದ ಮುಮಿನ್ ಹಾಗೂ ಯಾರು ಅಲ್ಲ ಎಂದು ನೋಡಲು ಬಯಸುತ್ತಾನೆ...... ವಸಿಯ್ಯತ್ ಖಂಡಿತವಾಗಿಯೂ ಅಲ್ಲಾಹನ ಸಾಮೀಪ್ಯವನ್ನು ತೋರಿಸುತ್ತದೆ. ವಸಿಯ್ಯತ್ ಮಾಡುವವರು ವಿಶ್ವಾಸಿಯೇ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ, ಆದರೆ ಒಬ್ಬ ವ್ಯಕ್ತಿಯಲ್ಲಿ ಕೆಲವು ದೌರ್ಬಲ್ಯಗಳಿದ್ದರೆ, ಅವನು ವಸಿಯ್ಯತ್ ಮಾಡಿದಾಗ, ಬಹಿಶ್ತಿಮಖ್ಬರದಲ್ಲಿ ಸರ್ಗೀಯ ಜನರು ಮಾತ್ರ ದಫನ್ ಆಗುತ್ತಾರೆ ಎಂಬ ಅಲ್ಲಾಹನ ವಾಗ್ದಾನದ ಪ್ರಕಾರ ಸರ್ವಶಕ್ತನಾದ ಅಲ್ಲಾಹನು ಆತನ ಕರ್ಮಗಳನ್ನು ಸರಿಪಡಿದುತ್ತಾನೆ. ಆದ್ದರಿಂದ, ವಸಿಯ್ಯತ್ ಸ್ವಯಂ ಸುಧಾರಣೆಯ ಒಂದು ದೊಡ್ಡ ಸಾಧನವಾಗಿದೆ ಏಕೆಂದರೆ ಯಾರು ವಸೀಯ್ಯತ್ ಅನ್ನು ಮಾಡುತ್ತಾರೊ ಅವರು ಒಂದು ಸಮಯದಲ್ಲಿ ಸ್ವರ್ಗೀಯವಾಗದಿದ್ದರೂ ಸಹ, ಅವರು ಸ್ವರ್ಗೀಯವಾಗುತ್ತಾರೆ. ಮತ್ತು ಅವನ ಕಾರ್ಯಗಳು ಕೆಟ್ಟದಾಗಿದ್ದರೆ, ಅಲ್ಲಾಹನು ಅವನ ಬೂಟಾಟಿಕೆಯನ್ನು ಬಹಿರಂಗಪಡಿಸಿ ಅವನನ್ನು ವಸಿಯ್ಯತ್‌ನ ವ್ಯವಸ್ಥೆಯಿಂದ ಬೇರ್ಪಡಿಸುತ್ತಾನೆ. (ಖುತ್ಬಾತೆ ಮಹ್ಮೂದ್ ಸಂಪುಟ-13, ಪುಟ-562)

**ವಸಿಯ್ಯತ್‌ನ ಮೂಲ ಉದ್ದೇಶಗಳು**

ವಸಿಯ್ಯತ್ ವ್ಯವಸ್ಥೆ ಪರಿಪೂರ್ಣವಾಗಿ ಸ್ಥಾಪಿತವಾಗುವಾಗ ಅದರ ಕೆಲಸ ಧರ್ಮ ಪ್ರಚಾರಕ್ಕೆ ಮಾತ್ರ ಸೀಮಿತವಾಗಿರಲಾರದು. ಇಸ್ಲಾಮ್ ಧರ್ಮದ ಇಚ್ಛೆಗೆ ಅನುಸರವಾಗಿ ಪ್ರತಿಯೊಬ್ಬ ಮನುಷ್ಯನ ಅವಶ್ಯಕತೆಗಳನ್ನು ಅದರ ಮೂಲಕ ಈಡೇರಿಸಿ ಕೊಡಲಾಗುವುದು. ದುಃಖ ನೋವು ಮತ್ತು ದಾರಿದ್ರ್ಯವನ್ನು ಇನ್‌ಶಾ ಅಲ್ಲಾಹ್(ಅಲ್ಲಾಹನು ಇಚ್ಛಿಸಿದರೆ) ಲೋಕದಿಂದ ಅಳಿಸಿ ಬೀಡಲಾಗುವುದು. ಅನಾಥನು ಭಿಕ್ಷೆ ಬೇಡಲಾರನು. ವಿಧವೆ ಜನರ ಮುಂದೆ ಸಹಾಯಕ್ಕಾಗಿ ಕೈ ಚಾಚಲಾರಳು. ಏನು ಇಲ್ಲದವನೂ ಗಾಬರಿಗೊಂಡು ಅಲೆದಾಡಲಾರನು. ಏಕೆಂದರೆ, ವಸಿಯ್ಯತ್ ವ್ಯವಸ್ಥೆ ಮಕ್ಕಳ ಮಾತೆಯಾಗುವುದು; ತರುಣರ ಪಿತನಾಗುವುದು; ಮಹಿಳೆಯರ ಸೌಮಂಗಲ್ಯವಾಗುವುದು. ಬಲತ್ಕಾರ ರಹಿತವಾಗಿ, ಪ್ರೀತಿಯಿಂದ ಮತ್ತು ಹೃತ್ಪೂರ್ವಕವಾಗಿ ಸಹೋದರ, ಸಹೋದರರಿಗೆ ಅದರ ಮೂಲಕ ಸಹಾಯ ಮಾಡುವರು. ಅವನು ವಸಿಯ್ಯತ್‌ಗಾಗಿ ಕೊಡುವುದು ಪ್ರತಿಫಲ ರಹಿತವಾಗಲಾರದು. ಕೊಡುವ ಪ್ರತಿಯೊಬ್ಬನು ದೇವನಿಂದ ಉತ್ತಮ ಪ್ರತಿಫಲ ಗಳಿಸುವನು. ಶ್ರೀಮಂತನಾಗಲೀ ಬಡವನಾಗಲೀ ನಷ್ಟವನ್ನು ಅನುಭವಿಸಲಾರನು. ಒಂದು ಜನಾಂಗ ಇನ್ನೊಂದು ಜನಾಂಗದ ವಿರುದ್ಧ ಹೋರಾಟ ಮಾಡದು. ವಸಿಯ್ಯತ್ ವ್ಯವಸ್ಥೆಯ ಸಹಾಯವು ವಿಶಾಲವಾಗಿ ಲೋಕದ್ಯಂತ ಹರಡುವುದು. (ನಿಝಾಮೆ ನೌ, ಅನ್ವಾರುಲ್ ಉಲೂಮ್, ಸಂಪುಟ-16, ಪುಟ-600)

**ವಸಿಯ್ಯತ್‌ನ ಸಂಪತ್ತು ಇಡೀ ಜಗತ್ತಿಗೆ ಖರ್ಚಾಗುತ್ತದೆ**

ಅಹ್ಮದಿಯ್ಯತ್‌ನಿಂದ ಸಂಗ್ರಹಿಸಲ್ಪಟ್ಟ ಮೊತ್ತವನ್ನು ಒಂದೇ ದೇಶಕ್ಕೆ ಖರ್ಚು ಮಾಡಲಾಗುವುದಿಲ್ಲ ಬದಲಿಗೆ ಅದರಿಂದ ಇಡೀ ವಿಶ್ವದ ಬಡವರಿಗಾಗಿ ಖರ್ಚು ಮಾಡಲಾಗುವುದು. ಇದು ಭಾರತದ ಬಡವರಿಗಾಗಿ ಕೆಲಸ ಮಾಡುತ್ತದೆ, ಇದು ಚೀನಾದ ಬಡವರಿಗಾಗಿ ಕೆಲಸ ಮಾಡುತ್ತದೆ, ಇದು ಜಪಾನ್‌ನ ಬಡವರಿಗಾಗಿ ಕೆಲಸ ಮಾಡುತ್ತದೆ, ಇದು ಆಫ್ರಿಕಾದ ಬಡವರಿಗಾಗಿ ಕೆಲಸ ಮಾಡುತ್ತದೆ, ಇದು ಅರೇಬಿಯಾದ ಬಡವರಿಗೆ ಕೆಲಸ ಮಾಡುತ್ತದೆ, ಇದು ಇಂಗ್ಲೆಂಡ್, ಅಮೆರಿಕ, ಇಟಲಿ, ಜರ್ಮನಿ ಮತ್ತು ರಷ್ಯಾದ ಬಡವರಿಗಾಗಿಯೂ ಉಪಯುಕ್ತವಾಗುತ್ತದೆ. (ನಿಝಾಮೆ ನೌ, ಅನ್ವರುಲ್ ಉಲೂಮ್, ಸಂಪುಟ-16, ಪುಟ-593)

**ವಸಿಯ್ಯತ್ ಮಾಡಿರುವವರು ಹೊಸ ಸಾಮಾಜಿಕ ಅಸ್ತಿಭಾರ ಹಾಕಿದ್ದಾರೆ**

ಪ್ರಿಯ ಸ್ನೇಹಿತರೇ, ಯಾರು ವಸಿಯ್ಯತ್ ಮಾಡಿರುವವರೋ ಅವರು ತಂತಮ್ಮ ಸ್ಥಳಗಳಲ್ಲಿ ಹೊಸ ಸಾಮಾಜಿಕ ವ್ಯವಸ್ಥೆಯ ಅಸ್ತಿಭಾರ ಹಾಕಿದ್ದಾರೆಂದು ತಿಳಿದಿಕೊಳ್ಳಲ್ಲಿ. ಈ ಹೊಸ ಸಾಮಾಜಿಕ ವ್ಯವಸ್ಥೆಯ ವಸಿಯ್ಯತ್ ಮಾಡುವ ವ್ಯಕ್ತಿಯ ಮತ್ತು ಆತನ ಕುಟುಂಬದ ಸಂರಕ್ಷಣೆಯ ಅಸ್ತಿಭಾರವಾಗಿದೆ. (ನಿಝಾಮೆ ನೌ, ಅನ್ವಾರುಲ್ ಉಲೂಮ್, ಸಂಘುಟ-16, ಪುಟ-601)

ಸರ್ವಶಕ್ತನಾದ ಅಲ್ಲಾಹನು ಎಲ್ಲಾ ಅಹ್ಮದೀಯರಿಗೆ ಆದಷ್ಟು ಬೇಗ ಈ ಅನುಗ್ರಹದಾಯಕ ವ್ಯವಸ್ಥೆಗೆ ಸೇರುವ ಅವಕಾಶವನ್ನು ನೀಡಲಿ. ಆಮೀನ್.

**(ಮನ್ಸೂರ್ ಅಹ್ಮದ್ ಮಸ್ರೂರ್)**

...*...*...*...

## ಅಹ್ಮದಿ ಮುಬಲ್ಲಿಗ್ಹರ ನಿರ್ಗಮನದ ವಿಶ್ವಾಸವರ್ಧಕ ನೋಟ ಮತ್ತು 22 ಅಹ್ಮದಿ ಮುಬಲ್ಲಿಗ್ಹೀನರ ನಿರ್ಗಮನ

(ಆಧಾರ: ಅಲ್‌ಫಝುಲ್ ಖಾದಿಯಾನ)

24 ಮಾರ್ಚ್ ಬೆಳಗಿನ ಜಾವ ಹತ್ತು ಗಂಟೆಗೆ ಸಯ್ಯದ್‌ನಾ ಹಝ್‌ರತ್ ಖಲೀಫತುಲ್ ಮಸೀಹ್ ಸಾನಿ (ದ್ವಿತೀಯ ಖಲೀಫ)(ಅತಬಿಅ) ಅವರಿಗೆ ಅಹ್ಮದಿಯಾ ದಾವತ್ ಎ ತಬ್ಲೀಗ್ಹ್ ಖಾದಿಯಾನ್ ಅಮೀರರು ರಚಿಸಿದ ಆಗ್ರಾದ ತಂಡದಿಂದ ತಂತಿ ಸಂದೇಶ ತಲುಪಿತು. ನಮಗೆ ತಕ್ಷಣ ಇನ್ನು 20 ಮುಬ್ಬಲ್ಲಿಗ್ಹೀನರ ಅವಶ್ಯಕತೆ ಇದೆ. ಹುಝೂರ್(ಅತಬಿಅ) ರವರು ಅದೇ ಸಮಯ ಖಾದಿಯಾನಿನ ಅಹ್ಮದಿಯರಿಗೆ ಸೂಚನೆ ಕಳುಹಿಸಿದರು. ಅಹ್ಮದಿಯರು ತಕ್ಷಣ ಮಸ್ಜಿದ್ ಮುಬಾರಕ್‌ನಲ್ಲಿ ಸೇರಬೇಕು. ಈ ಸುದ್ಧಿ ಮಿಂಚಿನಂತೆ ಖಾದಿಯಾನಿನ ಉದ್ದಗಲಕ್ಕೂ ಹರಡಿತು ಮತ್ತು ನೋಡು ನೋಡುತ್ತಲೇ ಮಸ್ಜಿದ್ ಮುಬಾರಕ್ ಅಹ್ಮದಿಯರಿಂದ ತುಂಬಿ ಹೋಯಿತು. ಹುಝೂರರಿಗೆ ಖುದ್ದಾಮರು ಹಾಜರಾಗಿದ್ದಾರೆ ಎಂದು ತಿಳಿಸಲಾಯಿತು.

ಮಜ್ಲಿಸ್ ಮಶಾವರತ್‌ನಿಂದ ಎದ್ದು ಮಸ್ಜಿದ್ ಮುಬಾರಕ್‌ಗೆ ಆಗಮಿಸಿದರು. ಎಲ್ಲಾ ಮಜ್ಲಿಸ್ ಸದಸ್ಯರು ಜೊತೆಯಲ್ಲಿದ್ದರು. ಹಝುರತ್ ಸಾಹಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ ರವರ ಜೊತೆ ಅವಶ್ಯಕ ಕಾಗದಗಳಿದ್ದವು. ಸಾಲಾರೆ ಇಸ್ಲಾಮ್ ಆಗಮಿಸಿದರು. ಮಸೀದಿಯು ನಿಶ್ಯಬ್ದವಾಯಿತು ಮತ್ತು ಸಭಿಕರು ಮೌನವಾಗಿ ಖಲೀಫರ ಮಾತುಕೇಳಲು ಕಾಯುತ್ತಿದ್ದರು.

ಹುಝೂರ್(ಅತಬಿಅ) ಮಸೀದಿಯ ಕೋಣೆಯೊಂದರಲ್ಲಿ ಕುಳಿತುಕೊಂಡರು. ದೇವತತ್ವದ ಉಚ್ಚಾರ, ಅಂತ್ಯ ಪ್ರವಾದಿಯ ವಿಶ್ಲೇಷಣೆಯ ನಂತರ ಸೂರಃ ಫಾತಿಹ ಪಠಿಸಿದರು ಮತ್ತು ಧರ್ಮಕ್ಕಾಗಿ ಸಾಂಪತ್ತಿಕ ಹಾಗೂ ಸಮಯದ ತ್ಯಾಗಗಳ ಬಗ್ಗೆ ಉಪದೇಶ ನೀಡಿದರು. ಅದು ಕರ್ತವ್ಯ, ಕಡ್ಡಾಯ ಕರ್ತವ್ಯ ಮತ್ತು ನವಾಫಿಲ್‌ಗಳ ಕುರಿತು ವಿವರವಾಗಿತ್ತು. ವಿಶ್ವಾಸದ ಕಟ್ಟಡ ಪರಿಪೂರ್ಣವಾಗಲು ನವಾಫಿಲ್ ಮನುಷ್ಯರಿಗೆ ಐಚ್ಛಿಕ ವಿಷಯವಾದರೂ ಪಾಲಿಸುವುದು ಅನಿವಾರ್ಯವಾಗಿದೆ. ಈ ಭಾಷಣವೆಲ್ಲ ಮುದ್ರಿತಗೊಂಡಿದೆ ಮತ್ತು ಜಮಾಅತ್‌ನ ಬಾಂಧವರು ಅದನ್ನು ತಿಳಿದುಕೊಂಡಿದ್ದಾರೆ. ಕೊನೆಯಲ್ಲಿ ಹುಝೂರ್(ಅತಬಿಅ) ರವರು ಇಸ್ಲಾಂ ಧರ್ಮದ ಸೇವೆಗೋಸ್ಕರ 20 ಮುಬಲ್ಲಿಗ್ಹೀನರ ಅವಶ್ಯಕತೆ ಇದೆ. ಅವರ ಮೇಲೆ ಖಾದಿಯಾನಿನ ಹೊರಗಿನಿಂದ ಸೂರ್ಯಾಸ್ತವಾಗಬೇಕಾಗಿದೆ.

ಹುಝೂರ(ಅತಬಿಅ)ರ ನಾಲಿಗೆಯಿಂದ ಈ ರೀತಿಯ ಮಾತು ಹೊರಟಿದ್ದೆ ತಡ ಎಲ್ಲ ಉಪಸ್ಥಿತರ ಮೇಲೆ ಒಂದು ರೀತಿಯ ಆಧ್ಯಾತ್ಮಿಕ ಉತ್ಸಾಹ ಬೀರಿದಂತಾಯಿತು. ಧರ್ಮ ಸೇವೆಯ ಉತ್ಸಾಹದಿಂದ ಅವರ ಮುಖಗಳು ಮಿಂಚತೊಡಗಿತು. ಪ್ರತಿಯೊಬ್ಬ ಹಿರಿಯ, ಕಿರಿಯರು ಧರ್ಮ ಸೇವೆಯಲ್ಲಿ ತಾನು ಮೊದಲಿಗನಾಗಬೇಕು ಎಂಬ ಭಾವನೆ ಹೊಂದಿದ್ದರು. ಎಲ್ಲ ಕಡೆಯಿಂದ ಸ್ವರ ಧ್ವನಿಸತೊಡಗಿತು. "ಹುಝೂರ್ ನಾನು ಹಾಜರಾಗಿದ್ದೇನೆ." "ನನಗೆ ಕಳುಹಿಸಿರಿ" ಅಥವಾ "ಹಝ್‌ರತ್ ನನಗೆ ಆದೇಶಿಸಿರಿ." "ಹಝ್‌ರತ್ ನನ್ನ ಮನವಿ ಸ್ವೀಕರಿಸಿರಿ." ನಾನು ನಿಮ್ಮ ಸೇವಕನಾಗಿದ್ದೇನೆ ಎಂದು. ಹುಝೂರ್(ಅತಬಿಅ) ಹೇಳಿದರು. ಹೊಗ ಬಯಸುವ ಬಾಂಧವರೆಲ್ಲರೂ ತಮ್ಮ ಹೆಸರನ್ನು ಬರೆಯಿರಿ. ಆಗ ಕಾಗದ ಮತ್ತು ಪೆನ್‌ಗಳನ್ನು ಹುಡುಕಲಾಯಿತು. ಒಬ್ಬನು ಕಾಪಿ (Note book) ಅನ್ನು ಹರಿಯುತ್ತಾನೆ. ಓರ್ವನು ಅದರ ಬದಿಯನ್ನು, ಇನ್ನೊಬ್ಬ ಲಕೋಟೆಯ ಒಂದು ಬದಿ ಹರಿದುಕೊಂಡು ಅದರ ಮೇಲೆ ಹೆಸರು ಬರೆಯುತ್ತಾನೆ. ಹೀಗೂ ಉತ್ಸಾಹ ನಿಲ್ಲದಿರುವಾಗ ಕಾಗದ ಪೆನ್ನುಗಳೆಲ್ಲ ಮುಗಿದು ಹೋಗುತ್ತವೆ. ಆಗ ಪತ್ರಿಕೆಗಳ ಬದಿಯಲ್ಲಿ ಪಟ್ಟಿ ಬರೆಯಲಾಗುತ್ತದೆ. ತಂದೆ ಹೇಳುತ್ತಾನೆ. ನನ್ನ ಮಗ ಹಾಜರಿದ್ದಾನೆ. ಹಿರಿಯ ಸಹೋದರನು ತನ್ನನ್ನು ತಾನೇ ಪ್ರಸ್ತುತಪಡಿಸುತ್ತಾನೆ. ಜೊತೆಯಲ್ಲೇ ಹೇಳುತ್ತಾನೆ. ಹುಝೂರ್(ಅತಬಿಅ) ತನ್ನ ಸಹೋದರನಿಗೂ ಕಳುಹಿಸಿರಿ. ಆಗ ಆದೇಶವಾಗುತ್ತದೆ ತಾವು ಸ್ವಯಂ ಮುಂದೆ ಬನ್ನಿರಿ, ನಾನು ಇಲ್ಲಿ ಬರಲಿಕ್ಕಿದೆ. ಆಗ ಅವನಿಗೆ ಕಾರ್ಯ ಒಂದರಲ್ಲಿ ತೊಡಗಿಸಲಾಗಿತ್ತು. ನನಗೆ ತಿಳಿದಿದೆ. ಅವನು ಹೋಗಲು ಸಿದ್ಧನಿದ್ದಾನೆ. ಹೀಗೆ ಉತ್ತರ ಸ್ಪಷ್ಟವಿದೆ. ಪ್ರತಿಯೊಬ್ಬರು ತನ್ನನ್ನು ತಾನು ಪ್ರಸ್ತುತಪಡಿಸಲು ಸಿದ್ಧರಾಗಿದ್ದಾರೆ. ಹೆಸರುಗಳು ಬರೆಯಲಾಗಿದೆ. ಲಕೋಟೆಗಳು ಇಮಾಮರ ಕೈ ಸೇರಿಯಾಗಿದೆ. ಹಝ್‌ರತ್ ಸಾಹಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರಿಗೆ ಆದೇಶ ಬರುತ್ತದೆ. ಯಾರ ಹೆಸರು ಹೇಳುತ್ತೇನೆ. ಅವರ ಹೆಸರನ್ನು ಬರೆಯುತ್ತ ಹೋಗಿ. ಹುಝೂರ್(ಅತಬಿಅ) ಹೆಸರುಗಳನ್ನು ಹೇಳುತ್ತಾರೆ ಆಗ ಅವರು ಹೆಸರುಗಳನ್ನು ಬರೆಯುತ್ತಾರೆ.

ನಾವು 25 ಮಾರ್ಚ್‌ನ ಅಲ್‌ಫಝುಲ್‌ನ ಮದೀನತುಲ್ ಮಸೀಹ್‌ನಲ್ಲಿ ಬರೆದಿದ್ದೇವೆ. 60, 70 ಮನವಿಗಳಿದ್ದವು ಆದರೆ ಈಗ ಎಣಿಸಿ ನೋಡಿದರೆ 119 ಜನ ಅದೇ ದಿನ ಅಸರ್ ನಮಾಝಿಗಿನ ಮುಂಚೆಯೇ ತಮ್ಮನ್ನು ಪ್ರಸ್ತುತಪಡಿಸಿದ್ದರು. ನಂತರ ಆಯ್ಕೆಗೊಂಡವರ ಪಟ್ಟಿ ತಯಾರಾಯಿತು. ಹುಝೂರ್(ಅತಬಿಅ) ಹೇಳಿದರು. ಈಗ ನಾನು ಮೊದಲು ನನಗೆ ತಲುಪಿದ ಲಕೋಟೆಗಳಲ್ಲಿರುವ ಹೆಸರುಗಳನ್ನು ತಿಳಿಸುತ್ತೇನೆ. ಹೀಗೆ ಮೊದಲು ಪ್ರಸ್ತುತಪಡಿಸಿದ ಹೆಸರುಗಳೆಲ್ಲ ತಿಳಿಸಲಾಯಿತು. ಮತ್ತು ಆಯ್ಕೆ ಮಾಡಿದವರ ಹೆಸರುಗಳನ್ನು ತಿಳಿಸುತ್ತೇನೆ. ಹಾಗೆ ಮೊದಲು ಹೆಸರು ಕೊಟ್ಟವರ ವಿವರ ತಿಳಿಸಲಾಯಿತು. ಮತ್ತೆ ಆಯ್ಕೆ ಮಾಡಿದ ಈ 20 ಹೆಸರುಗಳು ಬೇರೆಯೇ ಆಗಿದ್ದವು. ಈ ತಂತಿ ಬರುವ ಮುಂಚೆಯೇ ಸ್ವೀಕೃತಗೊಂಡ ಮಿತ್ರರಿಗೆ ಮಂಜೂರಿ ದೊರಕಿತ್ತು. ಅಂದರೆ ಒಬ್ಬರು ಜನಾಬ್ ಮೌಲ್ವಿ ಚೌಧರಿ ಮುಹಮ್ಮದ್ ಅಬ್ದುಸ್ ಸಲಾಂ ಖಾನ್ ಸಾಹಿಬ್ ಕಾಶ್‌ಫಾಢಿ, ಫಾಝಿಲ್ ಹಿಂದ್ ಪಿಟರೇಚರ್ ಮತ್ತು ಇನ್ನೊಬ್ಬರು ಮೌಲ್ವಿ ಅಬ್ದುಸ್ ಸಮದ್ ಸಾಹಿಬ್ ಪಟಯಾಲ್ವಿ, ಲೇಖಕರು "ನೆಹ ಕಳಂಕ ಅವತಾರ" ಅವರು ಸಹ ಆ ಸಮಯ ಹೆಸರು ಪ್ರಸ್ತುತಪಡಿಸಿದರು. ತಂಡದೊಂದಿಗೆ ಅವರಿಗೂ ಸಹ ತೆರಳಲು ಆದೇಶ ನೀಡಲಾಯಿತು.

ಅನಂತರ ಹುಝೂರ್(ಅತಬಿಅ) ನಿರ್ಗಮಿಸುತ್ತಿರುವವರಿಗೆ, ಅಲ್ಲಿ ಉಪಸ್ಥಿತರಿದ್ದವರಿಗೆ ಮತ್ತು ಯಾವುದೋ ಕಾರಣದಿಂದ ಹೋಗಲು ಆಗದವರಿಗೂ ಧರ್ಮ ಸೇವೆಯ ಭಾಗ್ಯಕ್ಕಾಗಿ ಪ್ರಾರ್ಥಿಸಿದರು. ನಿರ್ಗಮಿಸುತ್ತಿರುವವರು ನಾವು ಧರ್ಮ ಸೇವೆಗಾಗಿ ತೆರಳುತ್ತಿದ್ದೇವೆ ಎಂದು ಸಂತೋಷದಲ್ಲಿದ್ದರು. ಮತ್ತು ಹೆಸರು ನೀಡಿದರೂ ಯಾವುದೋ ಕಾರಣದಿಂದಾಗಿ ಆಯ್ಕೆಯಾಗದ ಅವರು ದುಃಖದಲ್ಲಿದ್ದರು. ಅದರಲ್ಲಿ ಓರ್ವ ವ್ಯಕ್ತಿ ಹೀಗೆ ಕವನದ ಸಾಲನ್ನು ಹೇಳಿದರು:

ಯಾರಾನೆ ತೇಝ್ ಗಾಮ್ ನೆ ಮಹ್ಮಲ್ ಕೊ ಜಾಲಿಯಾ
ಹಮ್ ಮಹು ನಾಲ ಜರ್ಸ್ ಕಾರ್ವಾನ್ ರಹೆ

ಇವರೆಲ್ಲರು ತಮ್ಮ ವಿಧಿಯ ನಿರ್ಣಯ ತಿಳಿದು ಉದಾಸೀನರಾಗಿದ್ದರು ಅಂದರೆ ಅವರಿಗೆ ಸಂದರ್ಭ ಒದಗಿ ಬರಲಿಲ್ಲ ಎಂದು. ಆದರೆ ಅವರು ತಮ್ಮ ಆ ಅದೃಷ್ಟವಂತ ಸಹೋದರರ ಮೇಲೆ ಸಂತುಷ್ಟರಾಗಿದ್ದರು. ಆ ನಿರ್ಗಮಿಸುವವರೂ ನಮ್ಮ ಸಹೋದರರೇ ಆಗಿದ್ದಾರೆ. ಅವರು ಮೊದಲ ಪಂಕ್ತಿಯಲ್ಲಿ ಸೇರುವ ಭಾಗ್ಯ ಪಡೆದಿದ್ದಾರೆ ಎಂದು. ಹಾಗೆ ಎಲ್ಲೆಡೆಯಿಂದ ಮುಬಾರಕ್, ಮುಬಾರಕ್ (ಅಭಿನಂದನೆಗಳು) ಎಂದು ಹೇಳಲಾಗುತ್ತಿತ್ತು, ಅಪ್ಪಿಕೊಳ್ಳುತ್ತಿದ್ದರು. ಪ್ರಾರ್ಥಿಸಲು ಮನವಿ ಮಾಡಲಾಗುತ್ತಿತ್ತು. ಹೋಗುವವರಿಗಾಗಿ, ಯಾರಿಗೆ ಇನ್ನು ಹೊಗಲಾಗಲಿಲ್ಲ ಅವರಿಗೂ ಶೀಘ್ರ ಸೇವೆಗೆ ಹಾಜರಾಗುವಂತೆ ಪ್ರಾರ್ಥಿಸುತ್ತಿದ್ದರು. ಹೀಗೆ ಎಲ್ಲರೂ ಧರ್ಮಸೇವೆಯ ಕಾರ್ಯದಲ್ಲಿ ಸಮರ್ಪಿತರಾಗಿದ್ದರು. ಪರಸ್ಪರ ಭೇಟಿಯಾಗಿದ್ದರು ಮತ್ತು ಸಂತೋಷಗೊಳ್ಳುತ್ತಿದ್ದರು. ತನ್ನ ಭಾಗ್ಯದ ಮೇಲೆ ಗೌರವಪಡುತ್ತಿದ್ದರು. ಸಂತೋಷದ ಪಾರವೇ ಇರಲಿಲ್ಲ. ಅಂತೂ ಆ ದೃಶ್ಯ ವರ್ಣಿಸುವಂತಹ ಪದಗಳೇ ದೊರೆಯುತ್ತಿಲ್ಲ. ಹೌದು ಕಣ್ಣುಗಳು ಆ ದೃಶ್ಯ ಕಂಡವು ಮತ್ತು ಹೃದಯದ ಮೇಲೆ ಆ ಚಿತ್ರ ಅಚ್ಚಾಯಿತು.

ಮುಬಾರಕ್, ಸಲಾಮತ್ ಎಂಬ ಸದ್ದು ಮುಕ್ತಾಯವಾಯಿತು. ನಿರ್ಗಮಿಸುವರು ಸಿದ್ಧತೆ ಮಾಡಲು ಮನೆಗಳಿಗೆ ಹೊರಟರು, ಎರಡು ಗಂಟೆಯಿಂದ ಮೊದಲು ಮಸ್ಜಿದ್ ಮುಬಾರಕ್‌ನ ಕೆಳಗೆ ಒಟ್ಟುಗೂಡಲು ಪ್ರಾರಂಭಿಸಿದರು. ಅವರಲ್ಲಿ ಕೆಲವರ ಪ್ರವಾಸವು ಕೂಲಿಗಳ ಸಹಾಯದಲ್ಲಿ ಮುಕ್ತಾಯವಾಗುತ್ತಿತ್ತು. ಆದರೆ ಅವರ ಸಾಮಾನುಗಳು ಎಷ್ಟೊಂದು ಅಲ್ಪ ಪ್ರಮಾಣದ್ದಾಗಿದ್ದವು ಎಂದರೆ, ಒಂದು ಕೆಳಗೆ ಹಾಸಲು ವಸ್ತ್ರ ಮತ್ತು ಕೆಲವು ಉಡುಪು, ಅವು ಸಹ ಸಾಮಾನ್ಯವಾಗಿ ಹಾಸಿಗೆಯಲ್ಲಿಯೇ ಕಟ್ಟಿಕೊಂಡಿದ್ದರು. ಕೆಲ ಅವಶ್ಯಕ ಪುಸ್ತಕಗಳಿದ್ದವು. ಹೌದು ಹೆಚ್ಚಿನವರು ಪವಿತ್ರ ಖುರ್‌ಆನ್ ಅನ್ನು ಕೊರಳಿನಲ್ಲಿ ಹಾರದಂತೆ ಹಾಕಿಕೊಂಡಿದ್ದರು. ಅಷ್ಟರಲ್ಲೇ ಅಸರ್ ನಮಾಝಿನ ಸಮಯವಾಯಿತು. ಮಸ್ಜಿದ್ ಮುಬಾರಕ್ ನಮಾಝ್ ನಿರ್ವಹಿಸುವವರಿಂದ ತುಂಬಿತ್ತು. ಮಾಳಿಗೆ ಮೇಲೆ ಸಹ ಸಾಲು ಕಟ್ಟುವಂತಾಯಿತು. ಹಝ್‌ರತ್ ಖಲೀಫತುಲ್ ಮಸೀಹ್(ಅತಬಿಅ) ನಮಾಝ್ ನಿರ್ವಹಿಸಿಕೊಟ್ಟರು. ಮಸೀದಿಯ ಕೆಳಗಿನ ವೃತ್ತ ಖಾದಿಯಾನ್‌ನ ಬಂಧುಗಳಿಂದ ತುಂಬಿಹೋಗಿತ್ತು. ನಿರ್ಗಮಿಸುವವರನ್ನು ಬೀಳ್ಕೊಡಲು ಹಾಗೆ ಇಸ್ಲಾಮಿನ ಸಾಲಾರ್ ತನ್ನ ಪ್ರೀತಿಯ ಖುದ್ದಾಮರನ್ನು ವಿದಾಯ ಕೋರಲು ಮನೆಯಿಂದ ಹೊರಬಂದರು. ಮತ್ತು ಪುರುಷರ ಜನಸಾಗರದಲ್ಲಿ

ಅಲೆಗಳು ಎದ್ದವು ಮತ್ತು ಅವರು ಸರ್ವರಲ್ಲಿ ಮುಂದಾಗಿದ್ದರು. ಈಗ ಉತ್ಸಾಹ, ಶ್ರದ್ಧೆ ಮತ್ತು ನಿಷ್ಠೆ ಹೇಗಿತ್ತೆಂದರೆ ಮನುಷ್ಯನು ಮನುಷ್ಯನ ಮೇಲೆ ಬೀಳತೊಡಗಿತ್ತು. ಎಲ್ಲರ ಪ್ರಯತ್ನವು ತಾನೇ ತನ್ನ ಇಮಾಮರ ಮುಂದಿರಬೇಕು ಎಂಬ ತವಕವಿತ್ತು. ಹಾಗೆ ಹುಝೂರ್(ಅತಬಿಅ) ವೇಗವಾಗಿ ನಡೆಯುತ್ತಿದ್ದರಿಂದ ಅಲ್ಲಿದವರಿಗೂ ಸಹ ಬೇಗ ಬೇಗ ನಡೆಯಬೇಕಾಗಿತ್ತು ಮತ್ತು ಎಲ್ಲರಿಗೂ ತಾನು ಮುಂದೆ ಇರಬೇಕು ಮತ್ತು ಹುಝೂರ್(ಅತಬಿಅ)ರ ಮಾತುಗಳನ್ನು ಆಲಿಸಬೇಕು ಎಂಬ ಹಂಬಲವಿತ್ತು. ಹೀಗೆ ಧೂಳು ಎದ್ದುತ್ತಿತ್ತು. ಮತ್ತು ಧೂಳಿನ ಒಂದು ಮೋಡವೇ ಸೃಷ್ಟಿಯಾಗಿತ್ತು. ನಿಸ್ಸಂದೇಹವಾಗಿ ಅವರಿಂದ ಹುಝೂರ್(ಅತಬಿಅ) ಅವರಿಗೆ ಕಷ್ಟವಾಗುತ್ತಿತ್ತು. ಆದರೆ ನೈತಿಕ ಗೌರವ ನೋಡಿರಿ. ಈ ಪ್ರೇಮಿಗಳತ್ತ ಕಣ್ಣು ಸಹ ಮಿಟುಕಿಸಲಿಲ್ಲ. ಅವರ ಹೃದಯಕ್ಕೆ ಘಾಸಿ ಉಂಟಾಗಬಾರದು ಎಂದು.

ಒಂದೂವರೆ ಎರಡು ಮೈಲಿನ ದೂರ ಇದೇ ರೀತಿ ಕಳೆಯಿತು. ಮಧ್ಯಮಾರ್ಗದಲ್ಲಿ ಹುಝೂರ್(ಅತಬಿಅ) ಅವರು ಕೆಲವು ಉಪದೇಶಗಳನ್ನು ಮಾಡಿದರು. ಅಲ್ಲಾಹನು ನಮಗೆ ಅದರಂತೆ ಪಾಲಿಸುವ ಭಾಗ್ಯ ದಯಪಾಲಿಸಲಿ.

ಒಂದು ತಿರುವಿನ ಹತ್ತಿರವಿದ್ದ ಬಾವಿಯ ಬಳಿ ತಲುಪಿದರು. ಎಲ್ಲರು ಸುತ್ತುವರಿದರು. ಸಾಲಾರೆ ಇಸ್ಲಾಂ ಸುತ್ತಿದ ಕೋಟೆಯೊಳಗೆ ನಿಂತುಕೊಂಡರು. ಬಾಂಧವರಿಗೆ ಕುಳ್ಳಿರಿಸಲಾಯಿತು. ನಿರ್ಗಮಿಸುವವರು ಸುತ್ತುವರಿದ ಸಮೀಪಕ್ಕೆ ಕುಳ್ಳಿರಿಸಿದರು. ಖಾದಿಯಾನ್‌ನ ಕಡೆ ಮುಖ ಮಾಡಿ ನೋಡಿದರೆ ದೂರ ದೂರದವರೆಗೆ ಬಿಳಿ ಬಣ್ಣದ ಪಗಡಿಗಳೆ ಕಾಣಿಸುತ್ತಿದ್ದವು. ಎಲ್ಲರೂ ಬಂದು ಸೇರಲು ಕಾಯ್ದರು. ನಿರ್ಗಮಿಸುವವರ ಅಮೀರರು ಹಾಜರಿ ಪಡೆದಾಗ ಇಬ್ಬರು ಅಥವಾ ಮೂರು ಜನರು ಇನ್ನು ಹಿಂದೆ ಬರುತ್ತಿದ್ದಾರೆ ಎಂದು ತಿಳಿದು ಬಂತು. ಅವರಿಗೆ ಉಚ್ಚ ಸ್ವರದಿಂದ ಕರೆಯಲಾಯಿತು. ಆಗ ಅವರೂ ಸಹ ಬಂದು ಸೇರಿ ಆ ವೃತ್ತದಲ್ಲಿ ಕುಳಿತುಕೊಂಡರು. ವಿದಾಯ ಕೋರಲು ಬರುವವರ ಸಂಖ್ಯೆ ಇನ್ನೂ ಜಾರಿಯಲ್ಲಿತ್ತು. ಹುಝೂರ್(ಅತಬಿಅ) ಅಲ್ಲಾಹನನ್ನು ಸ್ತುತಿಸುತ್ತಾ ಉಪದೇಶ ಪ್ರಾರಂಭಿಸಿದರು. ಅಲ್ಲಾಹನನ್ನು ಸ್ತುತಿಸಲು ತಾಕೀತು ಮಾಡಿದರು. ಮತ್ತು ಹೇಳಿದರು. ಅಲ್‌ಹಮ್ದುಲಿಲ್ಲಾಹ್ ಹೇಳಲು ನಾವೇ ಹಕ್ಕು ಪಡೆದಿದ್ದೇವೆ. ಆದುದರಿಂದಲೇ ನಮಗೆ ಧರ್ಮ ಸೇವೆಯ ಭಾಗ್ಯ ದೊರೆತಿದೆ. ಪ್ರಾರ್ಥನೆಗಳನ್ನು ಹೆಚ್ಚೆಚ್ಚಾಗಿ ಮಾಡಲು ಹೇಳಿದರು. ಅಲ್ಲಾಹನ ಸಹಾಯವಿಲ್ಲದೆ ಯಾವ ಕೆಲಸವು ಅನುಗ್ರಹಪೂರ್ಣವಾಗಲು ಪ್ರಯೋಜನ ಕಾರಿಯಾಗಲು ಅಥವಾ ಯಶಸ್ಸು ದೊರೆಯಲು ಸಾಧ್ಯವೇ ಇಲ್ಲ. ಅವರು ಹೇಳಿದರು. ನೀವು ದುರ್ಬಲರಾಗಿದ್ದೀರಿ ಆದರೆ ಆಕಾಶದಿಂದ ಶಕ್ತಿಪಡೆಯಲು ನೀವು ದೃಢ ಸಂಬಂಧವನ್ನು ಅಲ್ಲಾಹನೊಂದಿಗೆ ಜೋಡಿಸಿರಿ. ಆಕಾಶದಿಂದ (ದೇವನಿಂದ) ಶಕ್ತಿ ಪಡೆಯಿರಿ. ಏಕೆಂದರೆ ಆರ್ಯ ಪತ್ರಿಕೆಗಳು ಇದೀಗ ಒಟ್ಟಾಗಿ ಒಂದು ಹೊಸ ಗೊಂದಲವನ್ನು ಸೃಷ್ಟಿಸುತ್ತಿದ್ದಾರೆ. ಅಂದರೆ ಬರೆಯುತ್ತಾರೆ. ಅಹ್ಮದಿಯರು ಎಲ್ಲ ಕಡೆ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು. ಅದಾಗ್ಯೂ ಲೋಕವು ತಿಳಿದಿದೆ. ಯಾವ ನಗರವಾಗಲಿ ಅಲ್ಲಿ ಅಹ್ಮದಿಯರು ಅತ್ಯಂತ ಅಲ್ಪ ಸಂಖ್ಯೆಯಲ್ಲಿದ್ದಾರೆ. ನೂರರ ಸಂಖ್ಯೆ ದಾಟಿಲ್ಲ ಎಂದು ತಿಳಿದಿದ್ದಾರೆ. ಪಂಜಾಬ್ ಅಹ್ಮದಿಯರ ಕೇಂದ್ರವಾಗಿದ್ದರು. ಅಲ್ಪ ಸಂಖ್ಯೆಯಲ್ಲಿ ಅಹ್ಮದಿಯರಿದ್ದಾರೆ. ಹಳ್ಳಿಗಳ ಅವಸ್ಥೆಯು ಹೀಗೆಯೇ ಇದೆ. ಗಣತಿ ಮಾಡಿದರೆ ಎರಡಂಕಿಗೆ ತಲುಪುವುದು ಸಹ ಕಷ್ಟವಾಗಿದೆ. ಕೆಲವು ಹಳ್ಳಿಗಳು ಅಲ್ಲಿ ಎಲ್ಲರೂ ಅಹ್ಮದಿಯರೇ ಇರುವಂತೆ ಇರಬಹುದು. 20, 30 ಹಳ್ಳಿಗಳು ಹೇಗಿದ್ದಾವೆ ಅಂದರೆ ಅದರಲ್ಲಿ ಅರ್ಧ ಭಾಗದಷ್ಟು ಅಹ್ಮದಿಯರು ಇರಬಹುದು. ಇತರ ಸಮುದಾಯಗಳ ತುಲನೆಯಲ್ಲಿ ಅಹ್ಮದಿಯರು ತೀರ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಅದಕ್ಕೆ ವಿರುದ್ಧವಾಗಿ ಹಿಂದೂಗಳ ಸಂಖ್ಯೆ ಎಲ್ಲಾ ಜಾಗಗಳಲ್ಲೂ ಅಧಿಕವಾಗಿವೆ. ಸಾಂಪತ್ತಿಕ ದೃಷ್ಟಿಯಿಂದಲೂ ಅಹ್ಮದಿಯರೇ ಏಕೆ ಇತರ ಮುಸ್ಲಿಮರಿಗಿಂತಲೂ ಪ್ರಬಲರಾಗಿದ್ದಾರೆ.

ಬೇರೆ ಮಾತೇನೆಂದರೆ ಅಹ್ಮದಿ ಜಮಾಅತ್‌ನ ನೈತಿಕ ಮಟ್ಟವು ಹೇಗಿದೆ ಎಂಬುದು ಮಿತ್ರರಷ್ಟೇ ಅಲ್ಲ ಶತ್ರುಗಳು ಸಹ ತಿಳಿದಿದ್ದಾರೆ. ಅವರಿಗೆ ಪಿತೂರಿಗಳಿಂದ ದೂರವಿರಲು ಮತ್ತು ಪಿತೂರಿಗಳ ಎರಡು ಪಿತೂರಿಗಳು ನಡೆಸದಂತೆ ಶಿಕ್ಷಣ ನೀಡಲಾಗಿದೆ. ಅಲ್ಲಾಹನ ಅನುಗ್ರಹದಿಂದ ಜಮಾಅತ್ ಅದರಂತೆ ನಡೆದುಕೊಳ್ಳುತ್ತದೆ. ವಿರೋಧಿಗಳ ಅತ್ಯಾಚಾರವನ್ನು ಸಹಿಸಿ ವಿನಮ್ರ ರೀತಿಯಲ್ಲಿ ಅನುಸರಿಸುತ್ತಾರೆ. ಅವರ ಕಲ್ಲುಗಳಂತಹ ಕಠಿಣ ಮಾತುಗಳ ಉತ್ತರ ನಗುವಿನಿಂದ ವಿನಮ್ರವಾಗಿ ನೀಡುತ್ತವೆ. ಬೈಯ್ಗುಳದ ಉತ್ತರವಾಗಿ ಅವರಿಗೋಸ್ಕರ ಪ್ರಾರ್ಥಿಸುತ್ತಾರೆ. ಅದೇ ಒಂದು ರಹಸ್ಯ ವಾಗಿದೆ. ಅದೇ ಕಾರಣದಿಂದ ಅಹ್ಮದಿ ಜಮಾಅತ್ ದಿನೇ ದಿನೇ ಅಭಿವೃದ್ಧಿ ಹೊಂದುತ್ತದೆ. ಮತ್ತು ಇನ್‌ಶಾಅಲ್ಲಾಹ್ ಅಭಿವೃದ್ಧಿ ಹೊಂದುವುದು. ಅದಕ್ಕಾಗಿಯೇ ಹಝ್ರತ್ ಖಲೀಫತುಲ್ ಮಸೀಹ್(ಅತಬಿಅ) ತನ್ನ ಸುಪ್ರಸಿದ್ಧ ಕವನ ಸಾಲಿನಂತೆ.

ಪ್ಯಾರೋ ಆಮೋಖ್ತ ದರ್ಸ್ ವ ಫಾಖಾಮ್ ನಹೊ (ಪ್ರಿಯರೇ ನಮ್ಮ ಗತಿಸಿದ ಪಾಠ ವ್ಯರ್ಥವಾಗದಿರಲಿ.)

ನಿರ್ಗಮಿಸುವರು ಕಠಿಣತೆಯ ಎದುರು ತಾಳ್ಮೆ ವಹಿಸುವವರಾಗಲಿ. ಹಿಂಸೆ, ಜಗಳಗಳ ವಿರುದ್ಧ ಹೋರಾಡದಿರಲು ಉಪದೇಶ ನೀಡಿದರು ಮತ್ತು ಹೇಳಿದರು. ಹೊಡೆತ ತಿನ್ನಿರಿ ಆದರೆ ಕೈ ಎತ್ತಬಾರದು. ಬೈಯ್ಗುಳಗಳನ್ನು ಆಲಿಸಿ ಅವರಿಗಾಗಿ ಪ್ರಾರ್ಥಿಸಬೇಕು. ಅದರಲ್ಲಿಯೇ ನಿಮ್ಮ ಯಶಸ್ಸು ಅಡಗಿದೆ. ಭಾಷಣದ ಈ ಭಾಗ ಶಕ್ತಿಯುತ ಹಾಗೂ ಪರಿಣಾಮಕಾರಿಯಾಗಿತ್ತು. ಕೊನೆಯಲ್ಲಿ ಹೇಳಿದರು. ನಿರ್ಗಮಿಸುವವರಿಗೆ ಉಡುಗೊರೆ ಕೊಡುವ ನಿಯಮವಿದೆ. ನಾನು ಸಹ ಅವರಿಗೆ ಉಡುಗೊರೆ ನೀಡಬಯಸುತ್ತೇನೆ. ಅದಕ್ಕಾಗಿ ನಮ್ಮ ಕುಟುಂಬದವರು (ಅವರಲ್ಲಿ ಹಝ್ರತ್ ಉಮ್ಮುಲ್ ಮುಮಿನೀನ್(ರ) ಮತ್ತು ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ಅವರ ಇಬ್ಬರು ಪುತ್ರಿಯರು ಮತ್ತು ಹಝುರತ್ ಇಮಾಮರ ಕುಟುಂಬ ಸದಸ್ಯರು ಮುಂತಾದವರು ಸೇರಿದ್ದಾರೆ) ಅವರುಗಳು ಇವರಿಗಾಗಿ ಸದಖಾವನ್ನು ಸಹೋದರ ಅಬ್ದುರ್ ರಹೀಮ್ ಸಾಹಿಬರಿಗೆ ಒಪ್ಪಿಸುತ್ತೇನೆ. ಅವರು ರಸ್ತೆಯಲ್ಲಿ ನೀಡಲಿ ಮತ್ತು ಅಲ್ಲಿಯ ಅರ್ಹ ಅಗತ್ಯಗಳಿಗೂ ಖರ್ಚು ಮಾಡಲಿ. ಆಗ ಉಪಸ್ಥಿತ ಬಾಂಧವರೆಲ್ಲರೂ ಸಾಧ್ಯವಾದಷ್ಟು ಈ ಸದಖಾದಲ್ಲಿ ಭಾಗವಹಿಸಿದರು. ಪ್ರತಿಯೊಬ್ಬ ವ್ಯಕ್ತಿಯು ತನ್ನ ಸಾಮರ್ಥ್ಯ ಪ್ರಕಾರ ತಮ್ಮ ಇಮಾಮರ ಕೈಯಲ್ಲಿ ಕೊಡುತ್ತಿದ್ದರು. ಹುಝೂರ(ಅತಬಿಅ) ಅವರು ಜಝಾಕುಮುಲ್ಲಾಹ್ ಎಂದು ಹೇಳುತ್ತಾ ಸ್ವೀಕರಿಸಿ ತಮ್ಮ ಕೈಯಿಂದ ತಂಡದ ಅಮೀರ್ ಸಾಹಿಬರ ಮಡಿಲಿನಲ್ಲಿ ಹಾಕುತ್ತಾ ಹೋಗುತ್ತಿದ್ದರು. ಕೆಲವರು ನಗದು ಕೊಟ್ಟರು. ಕೆಲವರು ರುಮಾಲು, ಕೆಲವರು ಪರ್ಸ್, ಕೆಲವರು ಚಾಕು, ಹೀಗೆ ದಾನವಾಗಿ ಸಂಗ್ರಹಿಸಿದ ಮೊತ್ತ ಸುಮಾರು ಇನ್ನೂರು ರೂಪಾಯಿಗಳು, ಅನಂತರ ಹುಝೂರ್(ಅತಬಿಅ) ಅವರು ಈ ಕಾರ್ವಾನ್‌ಗೆ ದೀರ್ಘಕಾಲ ಪ್ರಾರ್ಥಿಸಿದರು. ಅವರ ಕಣ್ಣುಗಳು ಕಣ್ಣೀರಿನಿಂದ ತುಂಬಿದವು. ಅವರ ಹೃದಯಗಳು ಅಲ್ಲಾಹನ ಆಸ್ಥಾನದ ಮುಂದೆ ಸಾಷ್ಟಾಂಗವೆರಗಿದವು. ಕಾರಣಾಂತರಗಳಿಂದ ಹೋಗಲಾಗದ ಕೆಲ ಗೆಳೆಯರು ನಿಟ್ಟುಸಿರು ಬಿಡುತ್ತಿದ್ದರು ಮತ್ತು ಅಳುತ್ತಿದ್ದರು. ದುಆದ ನಂತರ ನಂತರ ಎಲ್ಲರಿಗೂ ತಾಳ್ಮೆ ಉಂಟಾಯಿತು. ಗೌರವಾನ್ವಿತ ಇಮಮರು ನಿಯೋಗದ ಸದಸ್ಯರೊಂದಿಗೆ ಹಸ್ತಲಾಘವ ಮಾಡಿದರು. ಮತ್ತು ಅವರನ್ನು ನೋಡಲು ರಸ್ತೆಗೆ ಬಂದರು. ಸ್ನೇಹಿತರು ರಸ್ತೆಯ ಮೇಲೆ ದೂರ ದೂರ ನಿಂತುಕೊಂಡರು. ಸ್ನೇಹಿತರು ಜಮಾಅತ್ತಿನ ಸದಸ್ಯರ ಪಂಕ್ತಿಗಳಿಂದ ದೂರ ದೂರ ನಿಂತಿದ್ದರೂ ಪ್ರತ್ಯೇಕವಾಗಿ ತಮ್ಮ ಇಮಾಮರ ಕಣ್ಣಿನ ಮುಂದೆ ಬಂದು ನಿಂತರು. ತಂಡವು ಹೊರಡಲು ಇಮಾಮರ ಆದೇಶವಾಯಿತು. ಎಲ್ಲರೂ ಎತ್ತರ ಧ್ವನಿಯಲ್ಲಿ ಅಸ್ಸಲಾಮು ಅಲೈಕುಮ್ ಎಂದು ಹೇಳಿ ಪ್ರಯಾಣ ಪ್ರಾರಂಭಿಸಿದರು. ಅಲ್ಲಾಹನ ಸಮೂಹದ ನಾಯಕರು ತಮ್ಮ ಮಕ್ಕಳನ್ನು ನೋಡುತ್ತಲೇ ಇದ್ದರು ಮತ್ತು ಅವರೆಲ್ಲರೂ ಕಣ್ಮರೆಯಾಗುವವರೆಗೂ ಪ್ರಾರ್ಥಿಸುತ್ತಿದ್ದರು. ಮೊದಲ ತಂಡದ ರೀತಿಯಲ್ಲೇ ವಾಪಸಾತಿಯನ್ನು ನಡೆಸಲಾಯಿತು. ಅಂದರೆ ನಾಲ್ಕು ಸಾಲುಗಳನ್ನು ರಚಿಸಲಾಯಿತು. ಮತ್ತು ಪಟ್ಟಣವನ್ನು ಪ್ರವೇಶಿಸುವಾಗ ದ್ವಿಗುಣ ರೀತಿಯಲ್ಲಿ ಅಲ್ಲಾಹನನ್ನು ಸ್ತುತಿಸಲಾಯಿತು. ಅಲ್‌ಹಮ್ದುಲಿಲಾಹ್!

ಇದು ಲೋಕವು ಕಾಫಿರ್ ಎನ್ನುವ ಜಮಾಅತ್ ಆಗಿದೆ. ನವುಝುಬಿಲ್ಲಾಹ್ ಇದನ್ನು ದಜ್ಜಾಲ್ ಗುಂಪು ಎಂದು ಕರೆಯುತ್ತಾರೆ. ಇಂತಹ ಧರ್ಮ ಸೇವೆಯಲ್ಲಿ ಉತ್ಸಾಹದಿಂದ ಮುಂದೆ ಸಾಗುವ ಗುಂಪು ಇದೆಯೇ, ಹಾಗೂ ಅವರ ಇಮಾಮ್ ಅವರನ್ನು ಈ ಪರಿಯ ಶೌರ್ಯದಿಂದ ಸೇವೆಗೆ ಮುಂದಕ್ಕೆ ತಳ್ಳಿದ ಉದಾಹರಣೆ ಇದೆಯೇ, ಯಾರಾದರೂ ಇದ್ದರೆ, ಅದನ್ನು ಪ್ರಸ್ತುತಪಡಿಸಬೇಕು. ಹಣದಿಂದ ಕೆಲಸ ಮಾಡುವವರನ್ನು ನೀವು ಕಾಣಬಹುದು. ಆದರೆ ಇಂತಹ ಜನರನ್ನು ನೀವು ಎಲ್ಲಿ ಹುಡುಕುತ್ತೀರಿ. ಪ್ರತಿಯೊಬ್ಬರೂ ತನಗಾಗಲಿ ಅಥವಾ ತಮ್ಮ ಮಕ್ಕಳಿಗಾಗಲಿ ಒಂದು ಪೈಸೆಯನ್ನು ಬೇಡುವುದಿಲ್ಲ. ತನ್ನ ಸ್ವಂತ ಅಗತ್ಯಗಳನ್ನು ಸಹ ಸ್ವಯಂ ತೀರಿಸಿಕೊಳ್ಳುತ್ತಾರೆ ಮತ್ತು ತಮ್ಮ ಕುಟುಂಬದವರದ್ದು ಸಹ. ಒಬ್ಬ ಖರೀದಿಸಿದ ಗುಲಾಮನು ನಿರ್ವಹಿಸಿದ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಾರೆ. ಇದರಿಂದ ಈ ಜಮಾಅತ್ ಒಬ್ಬ ಸತ್ಯವಂತನ ಜಮಾಅತ್ ಆಗಿದೆ ಎಂದು ಪರಿಣಾಮ ದೊರೆಯುವುದಿಲ್ಲವೇ? ಸಲ್ಲಲ್ಲಾಹು ಅಲೈಹಿ ಮುತಾಅ ಅಲೈಹಿಸ್ಸಲಾಂ.

(ಅಖ್ಬಾರ್ ಅಲ್‌ಫಝುಲ್ ಖಾದಿಯಾನ್, 2 ಏಪ್ರಿಲ್ 1923 ಪುಟ-3)

*****************

**ಇನ್ಸಾನಿಯತ್ ಝಿಂದಾಬಾದ್**

**ಮಾನವೀಯತೆ ಚಿರಕಾಲ ಬಾಳಲಿ**

# ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಪವಿತ್ರ ಖುರ್‌ಆನ್‌ನ ಜ್ಞಾನ ಹಾಗೂ ಪವಿತ್ರ ಖುರ್‌ಆನ್‌ನ ಸೇವೆ

(ಮಾಮೂನ್ ರಶೀದ್ ತಬ್ರೇಝ್, ನಾಯಿಬ್ ಇಂಚಾರ್ಜ್ ತಾರೀಖೆ ಅಹ್ಮದೀಯತ್ ವಿಭಾಗ ಖಾದಿಯಾನ್)

ಮಾನವನ ಸ್ವಭಾವದಲ್ಲಿ ಸರ್ವಶಕ್ತನಾದ ಅಲ್ಲಾಹನು ಒಂದು ಶ್ರೇಷ್ಠ ಗುಣವನ್ನು ಇರಿಸಿದ್ದಾನೆ ಅದೇನೆಂದರೆ ಯಾವ ವಸ್ತುವನ್ನು ಆ ವ್ಯಕ್ತಿಯು ಪ್ರೀತಿಸುತ್ತಾನೊ ಅದರ ಬಗ್ಗೆ ಜ್ಞಾನವನ್ನು ಪಡೆಯಲು ಅವನು ಎಲ್ಲ ರೀತಿಯಲ್ಲಿ ತನಿಖೆ ಮಾಡುತ್ತಾನೆ. ನಾವು ಪವಿತ್ರ ಖುರ್‌ಆನ್ ಬಗ್ಗೆ ಮಾತನಾಡಿದರೆ, ಅದನ್ನು ಪ್ರೀತಿಸುವುದಾಗಿ ಹೇಳಿಕೊಳ್ಳುವವರು ಖಂಡಿತವಾಗಿಯೂ ಪವಿತ್ರ ಖುರ್‌ಆನ್‌ನ ಪ್ರತಿಯೊಂದು ಪದಗಳ ಮೇಲೆ ಆಲೋಚಿಸುತ್ತಾರೆ ಮತ್ತು ಅವರಿಂದ ದೈವಿಕ ಜ್ಞಾನದ ಅಂಶಗಳನ್ನು ಆರಿಸಿಕೊಳ್ಳುತ್ತಾರೆ. ಹೀಗೆ ಅಂತಹ ಜೀವಿ ಮಾತ್ರ ಪವಿತ್ರ ಖುರ್‌ಆನ್‌ನ ಮೇಲೆ ಅಪಾರ ಪ್ರೀತಿಯನ್ನು ಹೊಂದಿರುವ ಮತ್ತು ಧರ್ಮನಿಷ್ಠ ಆತ್ಮವನ್ನು ಹೊಂದಿರುವ ವ್ಯಕ್ತಿಯು ಪವಿತ್ರ ಖುರ್‌ಆನ್‌ನ ಸೇವೆ ಸಲ್ಲಿಸುವವನಾಗಿರುತ್ತಾನೆ. ಅದು ಇಲ್ಲದಿದ್ದರೆ ಪವಿತ್ರ ಖುರ್‌ಆನ್‌ನಲ್ಲಿರುವ ಆಧ್ಯಾತ್ಮಿಕ ಜ್ಞಾನವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ, ಇದು ಪವಿತ್ರ ಖುರಾನ್‌ನ ಪ್ರೇಮಿಗೆ ಮಾನದಂಡವಾಗಿದೆ ಮತ್ತು ಈ ಮಾನದಂಡದ ಪ್ರಕಾರ ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಪವಿತ್ರ ಖುರ್‌ಆನ್‌ನ ನಿಜವಾದ ಪ್ರೇಮಿಯಾಗಿದ್ದರು ಎಂಬುದಕ್ಕೆ ಸಮಯ ಸಾಕ್ಷಿಯಾಗಿದೆ.

ಪ್ರಿಯ ಓದುಗರೇ! ಪ್ರೀತಿಯು ತಲೆಯಿಂದ ಮಾತನಾಡುತ್ತದೆ ಮತ್ತು ಹಝ್ರತ್ ಮುಸ್ಲೆಹ್ ಮೌಊದ್(ರ) ರವರು ಪವಿತ್ರ ಖುರ್‌ಆನ್‌ನ ಮೇಲಿನ ಪ್ರೀತಿಯ ಪರಿಣಾಮವಾಗಿ ಅವರ ಮೂಲಕ ನಾವು ಮುಸ್ಲಿಮರಿಗೆ ಇನ್ನೂ ತಿಳಿದಿಲ್ಲದ ಪವಿತ್ರ ಖುರ್‌ಆನ್‌ನ ಜ್ಞಾನವನ್ನು ಪಡೆದುಕೊಂಡಿದ್ದೇವೆ. ಮುಸ್ಲೆಹ್ ಮೌಊದ್(ರ) ಅವರ ಬಗ್ಗೆ ಇರುವ ಭವಿಷ್ಯವಾಣಿಯಲ್ಲಿ ಉಲ್ಲೇಖಿಸಿರುವಂತೆ ಮುಸ್ಲೆಹ್ ಮೌಊದ್(ರ) ರವರ ಮೂಲಕ ದೈವವಾಣಿ (ಪವಿತ್ರ ಖುರ್‌ಆನ್) ಯ ಪದವಿಯು ಜನರ ಮೇಲೆ ಸ್ಪಷ್ಟವಾಗುವುದು. ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಜೀವನವನ್ನು ನಾವು ಅವಲೋಕಿಸಿದಾಗ, ಅವರು(ರ) ಇಪ್ಪತ್ತು ಅಥವಾ ಇಪ್ಪತ್ತೊಂದನೇ ವಯಸ್ಸಿನಲ್ಲಿ ಪವಿತ್ರ ಖುರ್‌ಆನ್‌ನ ದರ್ಸ್ ನೀಡಲು ಪ್ರಾರಂಭಿಸಿದ್ದರು. ಮತ್ತು ಅವರ ವಿಳಾಸದಾರರು ಆ ಕಾಲದ ಶ್ರೇಷ್ಠ ಸಹಾಬರಾಗಿದ್ದರು ಅವರಲ್ಲಿ ಪವಿತ್ರ ಖುರ್‌ಆನ್‌ನ ಜ್ಞಾನದಲ್ಲಿ ಪರಿಣಿತರು ಮತ್ತು ಭಾರತದ ಪ್ರಮುಖ ಶೈಕ್ಷಣಿಕ ಸಂಸ್ಥೆಗಳಿಂದ ಶಿಕ್ಷಣ ಪಡೆದ ಹಿರಿಯರು ಇದ್ದರು. ಅಂತಹ ಸಹಚರರ ಸಮ್ಮುಖದಲ್ಲಿ, ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು 1910 ರಲ್ಲಿ ಪವಿತ್ರ ಖುರ್‌ಆನ್ ಅನ್ನು ಬೋಧಿಸಲು ಪ್ರಾರಂಭಿಸಿದರು ಮತ್ತು 1913 ರ ಮಧ್ಯದಿಂದ ದಿನಕ್ಕೆ ಎರಡು ಬಾರಿ ದರ್ಸ್ ನೀಡಲು ಪ್ರಾರಂಭಿಸಿದರು. ಆ ಸಮಯದಲ್ಲಿ ಅವರಿಗೆ ಸುಮಾರು 23 ವರ್ಷ. ಅವರು ಫಜರ್ ಮತ್ತು ಝುಹರ್ ನಮಾಝಿನ ನಂತರ ದರ್ಸ್ ನೀಡುತ್ತಿದ್ದರು. (ಸವಾನೆ ಫಝ್ಲೆ ಉಮರ್, ಸಂಪುಟ-1, ಪುಟ-301, ಖಾದಿಯಾನ್, 2005)

ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಶುಕ್ರವಾರ, ಜುಲೈ 29, 1910 ರಂದು ಹಝ್ರತ್ ಖಲೀಫತುಲ್ ಮಸೀಹ್ ಅಲ್-ಅವ್ವಲ್(ರ) ಅವರ ಜೀವಿತಾವಧಿಯಲ್ಲಿ ತಮ್ಮ ಮೊದಲ ಖುತ್‌ಬ ಜುಮು ಅನ್ನು (ಧರ್ಮೋಪದೇಶವನ್ನು) ನೀಡಿದರು. ಇದರಲ್ಲಿ ಅವರು **ಇನ್ನಲ್ಲಾಹ ಯಅ್‌ಮುರು ಬಿಲ್ ಅದ್ಲಿ ವಲ್ ಇಹ್ಸಾನ್** ನ ಅದ್ಭುತವಾದ ಹಾಗೂ ವಿಶ್ವಾಸವರ್ಧಕ ವ್ಯಾಖ್ಯಾನವನ್ನು ನೀಡಿದರು.

ಭಾರತದ ಖ್ಯಾತ ವಿದ್ವಾಂಸ ಮತ್ತು ಇತಿಹಾಸಕಾರರಾದ ಮೌಲಾನಾ ಅಬ್ದುಲ್ ಮಾಜಿದ್ ದರ್‌ಯಾಬಾದಿ ಅವರು ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಬಗ್ಗೆ ಹೀಗೆ ಬರೆದರು:

ಪವಿತ್ರ ಖುರ್‌ಆನ್ ಹಾಗೂ ಪವಿತ್ರ ಖುರ್‌ಆನ್‌ನ ಜ್ಞಾನದ ಸಾರ್ವತ್ರಿಕ ಪ್ರಕಟಣೆ ಮತ್ತು ಇಸ್ಲಾಂ ಧರ್ಮದ ಸಾರ್ವತ್ರಿಕ ಪ್ರಚಾರದಲ್ಲಿ ಅವರು ಮಾಡಿದ ಪ್ರಯತ್ನಗಳಿಗಾಗಿ ಸರ್ವಶಕ್ತನಾದ ಅಲ್ಲಾಹನು ಅವರಿಗೆ ಪ್ರತಿಫಲ ನೀಡಲಿ. ಅವರು ವಿದ್ವಾಂಸರಾಗಿ ಮಾಡಿದ ಪವಿತ್ರ ಖುರ್‌ಆನ್‌ನ ಸತ್ಯಗಳು ಮತ್ತು ಜ್ಞಾನದ ವ್ಯಾಖ್ಯಾನ, ವಿವರಣೆ ಮತ್ತು ಅನುವಾದವು ಉನ್ನತ ಮತ್ತು ವಿಶಿಷ್ಟ ಮಟ್ಟವಾಗಿದೆ. (ಸವಾನೆ ಫಝ್ಲೆ ಉಮರ್, ಸಂಪುಟ-3, ಪುಟ-168)

ಅಹ್ಮದೀಯ ಸಮುದಾಯದಲ್ಲಿ "ತಫ್ಸೀರ್ ಕಬೀರ್" ಮತ್ತು "ತಫ್ಸೀರ್ ಸಗೀರ್" ಎಂದು ಕರೆಯಲ್ಪಡುವ ಪವಿತ್ರ ಖುರ್‌ಆನ್‌ನ ಅವರ ಅತ್ಯುತ್ತಮ ವ್ಯಾಖ್ಯಾನವು ಮುಸ್ಲಿಮೇತರರ ಭಾಷೆಯಲ್ಲಿ ಅವರ ಪ್ರಶಂಸೆಯನ್ನು ವ್ಯಕ್ತಪಡಿಸಲು ಜನರನ್ನು ಪ್ರೇರೇಪಿಸುತ್ತದೆ. ಹಾಗಾಗಿ, ಭಾರತದ ಸುಪ್ರಸಿದ್ಧ ಸಾಹಿತ್ಯ ವಿದ್ವಾಂಸರಾದ ಅಲ್ಲಾಮ ನಿಯಾಝ್ ಫತೇಪುರಿ ಸಾಹಿಬ್ ಅವರು ತಫ್ಸೀರ್ ಕಬೀರ್ ಅನ್ನು ಅಧ್ಯಯನ ಮಾಡಿದಾಗ, ಅವರ ಆಲೋಚನೆಗಳು ಮತ್ತು ಭಾವನೆಗಳು ಹೀಗಿದ್ದವು:

ದಿವಂಗತ ಅಲ್ಲಾಮಾ ನಿಯಾಝ್ ಫತೇಪುರಿ ಅವರ ಅಧ್ಯಯನದಲ್ಲಿ, ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ತಫ್ಸೀರ್ ಕಬೀರ್‌ನಲ್ಲಿ ಸೂರಃ ಹೂದ್ ಕುರಿತು ವ್ಯಾಖ್ಯಾನ ಬಂದಾಗ, ಅವರು ಕಣ್ಣೀರು ಸುರಿಸುತ್ತಾ ಭಾವಪರವಶರಾಗಿ ಈ ಕೆಳಗಿನಂತೆ ವ್ಯಕ್ತಪಡಿಸಿದ್ದಾರೆ:

"ತಫ್ಸೀರ್ ಕಬೀರ್ ಸಂಪುಟ-3 ಇಂದು ನನ್ನ ಮುಂದೆ ಇದೆ ಮತ್ತು ನಾನು ಅದನ್ನು ಗಾಂಭೀರ್ಯ ದೃಷ್ಟಿಯಿಂದ ನೋಡುತ್ತಿದ್ದೇನೆ. ಪವಿತ್ರ ಖುರ್‌ಆನ್‌ನ ಅಧ್ಯಯನಕ್ಕೆ ಒಂದು ಹೊಸ ದೃಷ್ಟಿಕೋನವನ್ನು ಸೃಷ್ಟಿಸಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ ಮತ್ತು ಈ ವ್ಯಾಖ್ಯಾನವು ವಿಶಿಷ್ಠರೀತಿಯಲ್ಲಿ ರಚಿಸಲ್ಪಟ್ಟ ಮೊದಲ ವ್ಯಖ್ಯಾನವಾಗಿದೆ. ಇದರಲ್ಲಿ ಬುದ್ಧಿವಂತಿಕೆ ಮತ್ತು ವರ್ಗಾವಣೆಯನ್ನು ಉತ್ತಮ ಸೌಂದರ್ಯದೊಂದಿಗೆ ಹೊಂದಿಕೆಯಾಗುತ್ತದೆ ಎಂದು ತೋರಿಸಲಾಗಿದೆ. ಅವರ ಪಾಂಡಿತ್ಯ, ಅವರ ವಿಶಾಲ ದೃಷ್ಟಿ, ಅವರ ಅಸಾಧಾರಣ ಕಾಳಜಿ ಮತ್ತು ಶ್ರದ್ಧೆ, ಅವರ ಉತ್ತಮ ತರ್ಕ, ಪ್ರತಿಯೊಂದು ಪದದಿಂದ ಸ್ಪಷ್ಟವಾಗಿ ಗೋಚರಿಸುತ್ತದೆ ಮತ್ತು ನಾನು ಇಲ್ಲಿಯವರೆಗೆ ಅಜ್ಞಾನಿಯಾಗಿದ್ದೆ ಎಂದು ವಿಷಾದಿಸುತ್ತೇನೆ. ನಾನು ಅವರ ಎಲ್ಲಾ ಸಂಪುಟಗಳನ್ನು ನೋಡಬಹುದೆಂದು ಬಯಸುತ್ತೇನೆ. ನಿನ್ನೆ ಸೂರಃ ಹೂದ್‌ನ ವ್ಯಾಖ್ಯಾನದಲ್ಲಿ ಹಝ್ರತ್ ಲೂತ್(ಅ) ಅವರ ಬಗ್ಗೆ ನಿಮ್ಮ ಆಲೋಚನೆಗಳನ್ನು ತಿಳಿದ ನಂತರ ಮನಸ್ಸು ವ್ಯಾಕುಲತೆ ಅನುಭವಿಸಿತು ಮತ್ತು ಅಸಹಾಯಕನಾಗಿ ಈ ಪತ್ರವನ್ನು ಬರೆಯಲು ಒತ್ತಾಯಿಸಿತು. ಸಾಮಾನ್ಯ ವ್ಯಾಖ್ಯಾನಗಾರರಿಗಿಂತ ಭಿನ್ನವಾಗಿರುವ **ಹಾಉಲಾಯಿ ಬನಾತಿ** ಯನ್ನು ವ್ಯಾಖ್ಯಾನಿಸುವಾಗ ನೀವು ತೆಗೆದುಕೊಂಡ ಚರ್ಚೆಯ ಬದಿಯನ್ನು ಹೊಗಳುವುದು ನನ್ನಿಂದ ಸಾಧ್ಯವಿಲ್ಲ. ಅಲ್ಲಾಹನು ನಿಮ್ಮನ್ನು ಶಾಶ್ವತವಾಗಿ ಆಶೀರ್ವದಿಸುತ್ತಾನೆ. (ಪುಟ 163 ಸಹ)

ಸಯ್ಯಿದ್‌ನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರಿಗೆ ದೈವಿಕ ಮುನ್ಸೂಚನೆಗಳ ಪ್ರಕಾರ ಪವಿತ್ರ ಖುರ್‌ಆನ್‌ನ ಜ್ಞಾನವನ್ನು ಅಲ್ಲಾಹನು ಕಲಿಸಿದನು. ನಿಮ್ಮ ಬಾಲ್ಯದಿಂದಲೂ ಅಲ್ಲಾಹನು ನಿಮಗೆ ಪವಿತ್ರ ಖುರ್‌ಆನ್‌ನ ವಿಜ್ಞಾನವನ್ನು ಕಲಿಸಲು ಪ್ರಾರಂಭಿಸಿದನು. ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಸ್ವತಃ ಹೇಳುತ್ತಾರೆ:

"ನಾನು ಚಿಕ್ಕವನಾಗಿದ್ದೆ, ನಾನು ಪೂರ್ವಕ್ಕೆ ಮುಖಮಾಡಿ ನಿಂತಿರುವುದನ್ನು ಕನಸಿನಲ್ಲಿ ನೋಡಿದೆ ಮತ್ತು ನನ್ನ ಮುಂದೆ ವಿಶಾಲವಾದ ಮೈದಾನವಿತ್ತು. ಈ ಗದ್ದೆಯಲ್ಲಿ ಪಾತ್ರೆ ಬಡಿದಂತಾದ ಸದ್ದು ಅಂತರಿಕ್ಷದಲ್ಲಿ ಹರಡಿ ಜಾಗವನ್ನೆಲ್ಲ ಹರಡಿದಂತೆ ಕಾಣುತ್ತಿತ್ತು. ಅದರ ನಂತರ, ಈ ಧ್ವನಿಯ ಮಧ್ಯ ಭಾಗವು ಒಂದೇ ಆಗಲು ಪ್ರಾರಂಭಿಸಿತು ಮತ್ತು ಅದರಲ್ಲಿ ಚಿತ್ರಗಳ ಚೌಕಟ್ಟುಗಳಂತೆ ಒಂದು ಚೌಕಟ್ಟು ಕಾಣಿಸಿಕೊಳ್ಳಲು ಪ್ರಾರಂಭಿಸಿತು. ಆಗ ಚೌಕಟ್ಟಿನಲ್ಲಿ ಒಂದಿಷ್ಟು ತಿಳಿ ಬಣ್ಣಗಳು ಮೂಡತೊಡಗಿದವು. ಕೊನೆಗೆ ಆ ಬಣ್ಣಗಳು ಪ್ರಖರವಾಗಿ ಬಿಂಬವಾಗಿ ಮಾರ್ಪಟ್ಟು ಈ ಚಿತ್ರದಲ್ಲಿ ಚಲನವಲನ ಸೃಷ್ಟಿಯಾಗಿ ಜೀವಿಯಾಗಿ ಪರಿವರ್ತನೆಯಾಯಿತು. ಮತ್ತು ಅದು ಒಂದು ದೇವದೂತ ಎಂದು ನಾನು ಭಾವಿಸಿಕೊಂಡೆ. ಆ ದೇವದೂತನು ನನ್ನೊಂದಿಗೆ ಮಾತನಾಡಿ ನನಗೆ ಹೇಳಿದನು: ನಾನು ನಿಮಗೆ ಸೂರಃ ಫಾತಿಹಾದ ವ್ಯಾಖ್ಯಾನವನ್ನು ನಿಮಗೆ ಕಲಿಸಬಹುದೇ? ಅದಕ್ಕೆ ನೀವು ನನಗೆ ಅದರ ಅರ್ಥವನ್ನು ಕಲಿಸಬೇಕು ಎಂದು ನಾನು ಹೇಳಿದೆ. ನಂತರ ಈ ದೇವದೂತನು **ಇಯ್ಯಾಕ ನಅ್‌ಬುದು ವ ಇಯ್ಯಾಕ ನಸ್ತಈನ್** ತಲುಪಿದರು. ಇಲ್ಲಿ ತಲುಪಿದ ನಂತರ ಅವರು ಹೇಳಿದರು ಇಂದಿನವರೆಗೆ ಇಷ್ಟರ ತನಕ ಮಾತ್ರ ವ್ಯಾಖ್ಯಾನಗಳನ್ನು ಬರೆಯಲಾಗಿದೆ. ಇದರ ನಂತರದ ಆಯತ್‌ಗಳ ವ್ಯಾಖ್ಯಾನಗಳು ಇಂದಿನವರೆಗೆ ಬರೆದಿಲ್ಲ. ನಂತರ ಅವರು ಈ ಕೆಳಗಿನ ಶ್ಲೋಕಗಳ ವ್ಯಾಖ್ಯಾನವನ್ನು ನಿಮಗೆ ಕಲಿಸಬೇಕೇ ಎಂದು ಕೇಳಿದರು ಅದಕ್ಕೆ ನಾನು ಹೌದು ಎಂದು ಹೇಳಿದೆ. ತದನಂತರ ದೇವದೂತನು ನನಗೆ **ಇಹ್‌ದಿನಸ್ಸಿರಾತಲ್ ಮುಸ್ತಖೀಮ್** ಮತ್ತು ಅದರ ನಂತರದ ಆಯತ್‌ಗಳ ವ್ಯಾಖ್ಯಾನವನ್ನು ಕಲಿಸಲು ಪ್ರಾರಂಭಿಸಿದನು ಮತ್ತು ಅವರು ಮುಗಿಸಿದಾಗ ನನ್ನ ಕಣ್ಣುಗಳು ತೆರೆದವು ಮತ್ತು ನನ್ನ ಕಣ್ಣುಗಳನ್ನು ತೆರೆದಾಗ ನಾನು ಈ ವ್ಯಾಖ್ಯಾನದ ಒಂದೆರಡು ಆಯತ್‌ಗಳನ್ನು

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

**Distt: Gurdaspur (Pb.) INDIA Qadian - 143516**

Postal Reg. No: 3000039689/2023-25 Vol No.04, Thursday, 02-09 February 2023, Issue No. 05-06

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

**ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)**

ನೆನಪಿಸಿಕೊಂಡಿದ್ದೇನೆ ತದನಂತರ ನಾನು ನಿದ್ರಿಸಲು ಪ್ರಾರಂಭಿಸಿದೆ ಮತ್ತು ನಾನು ಎಚ್ಚರವಾದಾಗ ನನಗೆ ವ್ಯಾಖ್ಯಾನದ ಯಾವುದೇ ಭಾಗವು ನೆನಪಿರಲಿಲ್ಲ. ಸ್ವಲ್ಪ ಕಾಲದ ನಂತರ, ನನಗೆ ಒಂದು ಸಭೆಯಲ್ಲಿ ಈ ಸೂರಃದ ಬಗ್ಗೆ ಏನನ್ನಾದರೂ ಹೇಳಬೇಕಾಗಿತ್ತು ಮತ್ತು ಅದರ ಹೊಸ ಹೊಸ ವ್ಯಾಖ್ಯಾನಗಳು ನನ್ನ ಮನಸ್ಸಿನಲ್ಲಿ ಬರುತ್ತಿರುವುದನ್ನು ನಾನು ನೋಡಿದೆ ಮತ್ತು ಇದು ದೇವದೂತನ ವ್ಯಾಖ್ಯಾನದ ಬೋಧನೆಯ ಅರ್ಥ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ, ಆದ್ದರಿಂದ ಆ ಸಮಯದಿಂದ ಇಂದಿನವರೆಗೆ ಈ ಸೂರಃದಲ್ಲಿನ ಹೊಸ ಹೊಸ ಅರ್ಥಗಳನ್ನು ನನಗೆ ಯಾವಾಗಲೂ ಕಲಿಸಲಾಗುತ್ತದೆ. ಅದರ ನೂರಾರು ಅರ್ಥಗಳನ್ನು ನಾನು ವಿವಿಧ ಪುಸ್ತಕಗಳಲ್ಲಿ ಮತ್ತು ಭಾಷಣಗಳಲ್ಲಿ ವಿವರಿಸಿದ್ದೇನೆ ಮತ್ತು ಇನ್ನೂ ಆ ನಿಧಿಯು ಖಾಲಿಯಾಗಲಿಲ್ಲ. (ತಫ್ಸೀರ್ ಕಬೀರ್, ಸೂರಃ ಫಾತಿಹ, ಪುಟ–6)

ಮತ್ತೊಂದು ಸಂದರ್ಭದಲ್ಲಿ, ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಹೇಳಿದರು: "ದೇವರು, ತನ್ನ ಕೃಪೆಯಿಂದ, ನನಗೆ ಕಲಿಸಲು ದೇವದೂತರನ್ನು ಕಳುಹಿಸಿದನು ಮತ್ತು ಯಾವುದೇ ಮನುಷ್ಯನು ಊಹಿಸಲು ಸಾಧ್ಯವಾಗದ ಪವಿತ್ರ ಖುರ್‌ಆನ್‌ನ ವ್ಯಾಖ್ಯಾನದ ಬಗ್ಗೆ ನನಗೆ ತಿಳಿಸಿದನು. ದೇವರು ನನಗೆ ನೀಡಿದ ಜ್ಞಾನ ಮತ್ತು ನನ್ನ ಎದೆಯಲ್ಲಿ ಚಿಮ್ಮಿದ ಆಧ್ಯಾತ್ಮಿಕ ಚಿಲುಮೆ ಕಾಲ್ಪನಿಕ ಅಥವಾ ಊಹಾಪೋಹವಲ್ಲ, ಆದರೆ ನಾನು ಇಡೀ ಜಗತ್ತಿಗೆ ಸವಾಲು ಹಾಕುವಷ್ಟು ಸ್ಪಷ್ಟ ಮತ್ತು ಖಚಿತವಾಗಿದೆ. ನಾನು ಇಡೀ ಜಗತ್ತಿಗೆ ಪಂಥಾಹ್ವಾನವನ್ನು ನೀಡುತ್ತೇನೆ ಈ ಪ್ರಪಂಚದಲ್ಲಿ ಯಾರಾದರು ಆತನಿಗೆ ದೇವರ ಕಡೆಯಿಂದ ಪವಿತ್ರ ಖುರ್‌ಆನ್‌ನ ಜ್ಞಾನವನ್ನು ನೀಡಲಾಗುತ್ತಿದೆ ಎಂದು ಹೇಳುವವನಿದ್ದರೆ ಅವನೊಂದಿಗೆ ಹೋರಾಡಲು ನಾನು ಯಾವಾಗಲೂ ಸಿದ್ಧನಿದ್ದೇನೆ. ಆದರೆ ಇಂದು ಪ್ರಪಂಚದ ಪರದೆಯ ಮೇಲೆ ನನ್ನನ್ನು ಹೊರತುಪಡಿಸಿ ಬೇರೆ ಯಾರೂ ಪವಿತ್ರ ಖುರ್‌ಆನ್‌ನ ಜ್ಞಾನವನ್ನು ಪಡೆದಿಲ್ಲ ಎಂದು ನಾನು ನಂಬುತ್ತೇನೆ. (ಸವಾನೆ ಫಝ್ಲೆ ಉಮರ್, ಸಂಪುಟ–3, ಪುಟ–138)

ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮುಸ್ಲೆಹ್ ಮೌಊದ್(ರ) ಅವರಿಗೆ ನೀಡಿದ ಪವಿತ್ರ ಖುರ್‌ಆನ್‌ನ ಆಧ್ಯಾತ್ಮಿಕ ಜ್ಞಾನದಿಂದ, ಅವರು ಖುರ್‌ಆನ್‌ನ ವ್ಯಾಖ್ಯಾನಿಸಲು ಅಹ್ಮದಿಯರ ವಿರೋಧಿಗಳಿಗೆ ಸವಾಲು ಹಾಕಿದರು ಮತ್ತು ಹೇಳಿದರು:

"ಬನ್ನಿ ನಾವು ಎದುರು ಕುಳಿತು ಪವಿತ್ರ ಖುರ್‌ಆನ್‌ನ ಯಾವುದೇ ಆಯತ್ ಅಥವಾ ರುಕು'ನ ವ್ಯಾಖ್ಯಾನವನ್ನು ಬರೆಯೋಣ ಮತ್ತು ಸರ್ವಶಕ್ತನಾದ ಅಲ್ಲಾಹನು ಯಾರಿಗಾಗಿ ಜ್ಞಾನ ಮತ್ತು ಸತ್ಯಗಳ ನದಿಗಳನ್ನು ಹರಿಸುತ್ತಾನೆ ಮತ್ತು ಸರ್ವಶಕ್ತನಾದ ಅಲ್ಲಾಹನು ಯಾರಿಗೆ ಜ್ಞಾನದ ಸಾಗರವನ್ನು ನೀಡುತ್ತಾನೆ ಎಂದು ನೋಡೋಣ. ನಾನು ಅವರ ಪ್ರಕಾರ ಅಜ್ಞಾನಿಯಾಗಿದ್ದೇನೆ, ನನಗೆ ಅಲ್ಪ ಜ್ಞಾನ, ನಾನು ಮಗುವಾಗಿದ್ದೇನೆ, ನಾನು ಮುಖಸ್ತುತಿಯಿಂದ ಸುತ್ತುವರೆದಿದ್ದೇನೆ, ನಾನು ಅನನುಭವಿ, ಹೀಗಿರುವಾಗ ನನ್ನೊಂದಿಗೆ ಸ್ಪರ್ಧಿಸಲು ಅವರಿಗೆ ಕಷ್ಟದ ಕೆಲಸವೇನು? ಅವರು ಏಕೆ ಮೈದಾನದ ಪುರುಷರಾಗಿ ಸರ್ವಶಕ್ತನಾದ ಅಲ್ಲಾಹನ ಗ್ರಂಥದಿಂದ ನಿರ್ಧರಿಸಬಾರದು ಮತ್ತು ಅವರು ಏಕೆ ನರಿಗಳಂತೆ ರಹಸ್ಯವಾಗಿ ದಾಳಿ ಮಾಡುತ್ತಾರೆ. (ಸೆಪ್ಟೆಂಬರ್ 1934 ರಲ್ಲಿ ಪ್ರಕಟವಾದ ಶೇಖ್ ರಹಮತುಲ್ಲಾ ಸಾಹಿಬ್ ಅವರಿಂದ 1919 ರ ಜಲ್ಸ ಸಾಲಾನದ ಭಾಷಣ)

ವಿರೋಧಿಗಳು ಇದನ್ನು ಒಪ್ಪದಿದ್ದಾಗ, ಹಝ್ರತ್ ಮುಸ್ಲೆಹ್ ಮೌಊದ್(ರ) ಅವರಿಗೆ ಸುಲಭವಾಗಿಸಿದರು ಮತ್ತು ಹೇಳಿದರು:

"ನಾನು ಕೂಡ ಸಾಕಷ್ಟು ಬಾರಿ ಚಾಲೆಂಜ್ ಮಾಡಿದ್ದೇನೆ. ಅಂದರೆ ಚೀಟಿ (ಖುರ್‌ಅ) ಹಾಕಿ ಯಾವುದಾದರು ಸ್ಥಳವನ್ನು ಆಯ್ಕೆ ಮಾಡಿ. ಇಲ್ಲದಿದ್ದರೆ, ನೀವು ಪರಿಣಿತಿ ಹೊಂದಿರುವ ಯಾವುದಾದರು ಭಾಗ ಅಥವಾ ಯವುದಾದರು ಭಾಗದ ಮೇಲೆ ನಿಮಗೆ ಬೇಕಾಗುವಷ್ಟು ಕಾಲ ಅಧ್ಯಾಯನ ನಡೆಸಿ ನನಗೆ ತಿಳಿಸಿರಿ. ನಂತರ ನನ್ನ ಮುಂದೆ ಬಂದು ಅದರ ವ್ಯಾಖ್ಯಾನವನ್ನು ಬರೆಯಿರಿ. ನನಗಾಗಿ ಅಥವಾ ಅವರಿಗಾಗಿ ಜ್ಞಾನದ ಬಾಗಿಲುಗಳು ತೆರೆಯುತ್ತವೆ ಎಂದು ಜಗತ್ತು ತಕ್ಷಣವೇ ನೋಡುತ್ತದೆ. ಆದರೆ ಯಾರೂ ಮುಂದೆ ಬರಲು ಧೈರ್ಯ ಮಾಡಲಿಲ್ಲ. (ಅಖ್ಬಾರ್ ಅಲ್‌ಫಝುಲ್, 07–03–1938)

ಸಯ್ಯಿದ್‌ನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಪವಿತ್ರ ಖುರ್‌ಆನ್ ಅನ್ನು ಬಹಳ ಆಳದಿಂದ ವ್ಯಾಖ್ಯಾನಿಸಿದ್ದಾರೆ. ಅವರ ಆರೋಗ್ಯ ಹದಗೆಡುತ್ತಿದ್ದರೂ, ಪವಿತ್ರ ಖುರ್‌ಆನ್‌ನ ಮೇಲಿನ ಪ್ರೀತಿಯೇ ಪವಿತ್ರ ಖುರ್‌ಆನ್‌ನ ಸೇವೆಯು ಈ ಮಹಾನ್ ಸಾಧನೆಯನ್ನು ಮಾಡಲು ಕಾರಣವಾಯಿತು. ಅವರ ಖುರ್‌ಆನ್‌ನ ಉಪನ್ಯಾಸಗಳ ಸರಣಿಯು ತಫ್ಸೀರ್ ಕಬೀರ್ ಎಂಬ ಹೆಸರಿನಲ್ಲಿ 10 ಸಂಪುಟಗಳಲ್ಲಿ ಪ್ರಕಟವಾಯಿತು. ಇದಲ್ಲದೇ ತಫ್ಸೀರ್ ಸಗೀರ್ ಎಂಬ ಹೆಸರಿನಲ್ಲಿ ಅವರ ಪವಿತ್ರ ಖುರ್‌ಆನ್‌ನ ಅನುವಾದವು ದೊಡ್ಡ ಸಾಧನೆಯಾಗಿದೆ. ನಿಮ್ಮಿಂದ ಪವಿತ್ರ ಖುರ್‌ಆನ್‌ನ ವ್ಯಾಖ್ಯಾನದಲ್ಲಿ ಹೊಸ ಬಣ್ಣ ಕಂಡುಬಂದಿದೆ. ಅವರು ಪವಿತ್ರ ಖುರ್‌ಆನ್‌ನ ಆಯತ್‌ಗಳಿಗೆ ಸಂಬಂಧಿಸಿದಂತೆ ಹಿಂದಿನ ವ್ಯಾಖ್ಯಾನಕಾರರ ತಪ್ಪುಗಳನ್ನು ಎತ್ತಿ ತೋರಿಸಿದರು ಮತ್ತು ವ್ಯಾಖ್ಯಾನದ ಸಮಯದಲ್ಲಿ ಇತರರ ಆಕ್ಷೇಪಣೆಗಳು ಮತ್ತು ಆರೋಪಗಳನ್ನು ಸ್ಪಷ್ಟಪಡಿಸಿದರು ಮತ್ತು ಅವರ ನಿರಾಕರಣೆ ಮತ್ತು ಹಲ್ಲು ಮುರಿಯುವಂತಹ ಉತ್ತರಗಳನ್ನು ಪ್ರಸ್ತುತಪಡಿಸಿದರು. ಇಷ್ಟು ಮಾತ್ರವಲ್ಲದೆ, ಸೂರಃಗಳು ಮತ್ತು ಆಯತ್‌ಗಳ ವ್ಯವಸ್ಥೆ ಮತ್ತು ಪವಿತ್ರ ಖುರ್‌ಆನ್‌ನ ಇತರ ಸೂರಃಗಳು ಮತ್ತು ಆಯತ್‌ಗಳೊಂದಿಗೆ ಅವುಗಳ ಸಂಬಂಧವನ್ನು ಸಹ ನೀವು ವ್ಯಾಖ್ಯಾನದಲ್ಲಿ ವಿವರವಾಗಿ ಸ್ಪಷ್ಟಪಡಿಸಿದ್ದೀರಿ. ಸೂರಃಗಳು ಮತ್ತು ಆಯತ್‌ಗಳ ಅವತೀರ್ಣತೆಯ ಹಿನ್ನೆಲೆ ಮತ್ತು ಪವಿತ್ರ ಖುರ್‌ಆನ್‌ನ ಭವಿಷ್ಯವಾಣಿಗಳ ವಿವರವಾದ ಉಲ್ಲೇಖ ಮತ್ತು ಈ ಭವಿಷ್ಯವಾಣಿಯ ನೆರವೇರಿಕೆಯನ್ನು ಐತಿಹಾಸಿಕ ಉಲ್ಲೇಖಗಳೊಂದಿಗೆ ವಿವರಿಸಲಾಗಿದೆ. ಜಗತ್ತಿಗೆ ನೀವು ಸಲ್ಲಿಸಿದ ಮಹತ್ತರ ಸೇವೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಿಮ್ಮ ಈ ಸಾಧನೆಯು ನಿಮ್ಮನ್ನು ಮುಸ್ಲಿಮರ ಹೃದಯದಲ್ಲಿ ಇರಿಸುತ್ತದೆ ಎಂಬುದು ಉದ್ದೇಶವಾಗಿದೆ. ಈ ಪ್ರಾರ್ಥನೆಯು ನಿಮಗಾಗಿ ಪ್ರತಿಯೊಬ್ಬ ಅಹ್ಮದಿಯ ಹೃದಯದಿಂದ ಯಾವಾಗಲೂ ಹೊರಬರುತ್ತದೆ:

ಮಿಲ್ಲತ್ ಕೆ ಇಸ್ ಫಿದಾಯಿ ಪೆ ರಹ್ಮತ್ ಖುದಾ ಕರೆ (ಮಲ್ಲತ್‌ನ ತ್ಯಗಿಯ ಮೇಲೆ ಅಲ್ಲಾಹನು ಕರುಣಿಸುವಂತಾಗಲಿ)

...*...*...*...

## ಪವಿತ್ರ ಖುರ್‌ಆನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ.ಆದರೆ ಜನರು ಅದನ್ನು ಅರಿತಿಲ್ಲ. ***(ಮಲ್‌ಫೂಝಾತ್ ಸಂಪುಟ–2, ಪುಟ–344)***

ಪವಿತ್ರ ಖುರ್‌ಆನಿನ ಮಹಿಮೆ ಎಷ್ಟು ಉನ್ನತವಾಗಿದೆಯೆಂದರೆ ಅದು ಎಲ್ಲ ಮಹಿಮೆಗಳಿಗಿಂತ ಶ್ರೇಷ್ಠವಾಗಿದೆ. ಅದು "ಹಕಮ್" ಆಗಿದೆ ಎಂದರೆ ಅಂತಿಮವಾಗಿ ತೀರ್ಮಾನ ಮಾಡುವುದು; ಅದು "ಮುಹೈಮಿನ್" ಎಂದರೆ ಅದು ಎಲ್ಲ ಮಾರ್ಗದರ್ಶನಗಳ ಸಂಗ್ರಹವಾಗಿದೆ. ಅದು ಎಲ್ಲ ಸಾಕ್ಷ್ಯಾಧಾರಗಳನ್ನು ತನ್ನಲ್ಲಿ ಜಮಾಯಿಸಿದೆ ಮತ್ತು ಶತ್ರು ಸಮೂಹವನ್ನು ಚೆಲ್ಲಾಪಿಲ್ಲಿಯಾಗಿ ಮಾಡಿದೆ. ಅದರಲ್ಲಿ ಎಲ್ಲ ಸಂಗತಿಗಳ ವಿವರಣೆಗಳಿವೆ. ಅದರಲ್ಲಿ ನಡೆಯಲಿರುವ ಮತ್ತು ನಡೆದ ಸಂಭವಗಳ ಸಮಾಚಾರಗಳಿವೆ. ಅಸತ್ಯವು ಅದರ ಹಿಂದಿನಿಂದಾಗಲೀ ಮುಂದಿನಿಂದಾಗಲೀ ನುಸುಳಲಾರದು. ಅದು ಸರ್ವ ಶಕ್ತನಾದ ದೇವನ ಪ್ರಕಾಶವಾಗಿದೆ.

**(ಖುತ್‌ಬ ಇಲ್‌ಹಾಮಿಯಾ; ರೂಹಾನೀ ಖಝ಼ಾಇನ್ ಸಂಪುಟ–16, ಪುಟ–103)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.